ಜನಪದ ವಿಚಾರ

ಬೆಲೆ : ರೂ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೨ ಮೇ-೨೦೧೨ ಸಂಚಿಕೆ-೧೦



ಮಾವೋವಾದ ವರ್ಸಸ್ ಸರ್ವೋದಯ

ಜನಪದ ವಿಚಾರದಲ್ಲಿ

ಮೇ - ೨೦೧೨

೧) ಮಾವೋವಾದ ವರ್ಸಸ್ ಸರ್ವೋದಯ ಪುಟ-೩

– *ಸುರೇಂದ್ರ ಕೌಲಗಿ*

ದೇಶದ ಬಹುತೇಕ ಎಲ್ಲ ರಾಜ್ಯಗಳಲ್ಲಿ ನಕ್ಸಲೀಯರು ಮತ್ತು ಮಾವೋವಾದಿಗಳು ಸಾಮಾಜಿಕ ವ್ಯವಸ್ಥೆ ಮೇಲೆ ಹಿಡಿತ ಸಾಧಿಸುತ್ತಿದ್ದಾರೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ಅವರು ವೀಳ್ಯವನ್ನಿತ್ತಿದ್ದಾರೆ. ಇದನ್ನು ದೇಶ ಹೇಗೆ ಸ್ವೀಕರಿಸುತ್ತದೆ ಎಂಬುದರ ಮೇಲೆ ದೇಶದ ಭವಿಷ್ಯ ನಿಂತಿದೆ. ಈ ಕುರಿತಾದ ಆಲೋಚನೆಗಳು ಈ ಲೇಖನದ ಸಾರ.

೨) ಧರಣಿ ಮಂಡಲ ಅಪಾರ್ಟ್‌ಮೆಂಟಿನೊಳಗೆ ಪುಟ-೭

– *ವಸುಧೇಂದ್ರ*

ನಗರಗಳಲ್ಲಿ ಬೆಳೆಯುತ್ತಿರುವ ಅಪಾರ್ಟ್‌ಮೆಂಟ್ಸ್‌ನಲ್ಲಿ ವಾಸಿಸುತ್ತಿರುವ ಜನರ ಜೀವನಶೈಲಿಯ ಲಘು ನೋಟ ಈ ಲೇಖನದಲ್ಲಿದೆ.

೩) ಡಾ॥ಅಂಬೇಡ್ಕರ್ ಗಾಂಧಿಯಿಂದ ದೂರವಲ್ಲ ಹತ್ತಿರ

– *ಸುರೇಂದ್ರ ಕೌಲಗಿ* ಪುಟ-೧೧

ಗಾಂಧೀ ಅಸ್ಪೃಶ್ಯರಿಗೆ ರಾಜಕೀಯವಾಗಿ ಅನ್ಯಾಯ ಮಾಡಿರುವರೆಂಬ ಮಾತು ಡಾ॥ಅಂಬೇಡ್ಕರರ ಜನ್ಮದಿನಾಚರಣೆ ಸಂದರ್ಭದಲ್ಲಿ ಕೇಳಿ ಬರುತ್ತದೆ. ಈ ಮಾತಿಗೆ ತಾತ್ವಿಕ ಮತ್ತು ಭಾವನಾತ್ಮಕ ಆಧಾರವಿಲ್ಲವೆಂದು ತಿಳಿಸುತ್ತದೆ ಈ ಲೇಖನ.

೪) ಬಸವ ಪ್ರಶಸ್ತಿ ನಿರಾಕರಣೆ ಪುಟ-೧೭

೫) ಉತ್ತರಾಖಂಡದಲ್ಲಿ ಚಿಪ್ಕೋ ಆಂದೋಲನ ಹಬ್ಬಿತು ಪುಟ-೧೮

– *ಆಲ್ಫ್ರೆಡ್ ಜೇಮ್ಸ್ ; ಅನು : ಸು.ಕೌ*

೬) ವೇದ ಮತ್ತು ಅವೇಸ್ತಾ ಮತ್ತು ಸಿಖ್ ಪುಟ-೨೩

– *ವಿನೋಬಾ*

ಪಾರಸಿ ಮತ್ತು ಸಿಖ್‌ಧರ್ಮ ಹಾಗೂ ವೇದದಲ್ಲಿರುವ ಸಾಮ್ಯತೆಯನ್ನು ಈ ಲೇಖನ ಎತ್ತಿಹಿಡಿದಿದೆ.

೭) ಟ್ರಸ್ಟಿಶಿಪ್ ಸಿದ್ಧಾಂತ ಮತ್ತು ಪ್ರಯೋಗ ಪುಟ-೨೮

– *ಗೋವಿಂದರಾವ್ ದೇಶಪಾಂಡೆ*

೮) ಜನಪದ ಸೇವಾ ಟ್ರಸ್ಟ್ ಸಮಾಚಾರ ಪುಟ-೩೧

೯) ಜನಪದ ನಿಲಯದ ಅಂತರಂಗದಲ್ಲಿ - ೧೦೨ ಪುಟ-೩೨

೧೦) ಸರ್ವೋದಯ ಆಂದೋಲನದ ಮುನ್ನಡೆ ಪುಟ-೩೪

೧೧) ಖಾದಿ ವಿಚಾರ ಪುಟ-೩೫

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಮೇ - ೨೦೧೨
ಸಂಪುಟ - ೧೨
ಸಂಚಿಕೆ - ೧೦

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ 08236 316344
✆ 08236 299854
e-mail : janapada@yahoo.com
web: janapada.net

ಜಗದ್ಗುರು ಆಗ,
ಈಗ ಬರೀ ಬಾಲಂಗೋಚಿ

ಭಾರವಾಗಿದ್ದ ಭಾರತ ಈಗ ಬಲು ಹಗುರ.
ಅದನ್ನೆ
ಮೂರು ಕಾಸಿಗೆ ಮಾರಿ ಕಡಲೆಪುರಿ ತಿಂದು
ಮುಗಿಸಲು ಇಲ್ಲಿ
ಕೈಬಾಯಿಗಳು ಲಕ್ಷಗಟ್ಟಲೆ ಕಾದು ತಪಿಸುತ್ತಿವೆ.
ಒಟ್ಟಿನಲಿ
ಚಮಚಾಗಳೇ ಹೆಚ್ಚು, ಒಂದು ಲೋಟ
ಕಾಫಿಗೋಸ್ಕರವಾಗಿ
ಸ್ವಂತಿಕೆಯನೇ ಮಾರಿಕೊಳ್ಳುತ್ತಲಿರುವಂಥ
ನರ
ಪೇತಲಗಳೇ ಇಲ್ಲಿ ರಾಕ್ಷಸ ಸಾರ್ವಭೌಮರ
ಹಿಂದೆ
ತಾನೂ ತಿಂದು ತನ್ನವರಿಗೂ ತಿನ್ನಿಸಿ
ಭಾರತವ
ಮಗಿಸಿಬಿಲಿದೆ. ನಮ್ಮ ಈ ನವ್ಯ ರಾಜವರ್ಗ,
ವಿರಾಜ
ಮಾನವಾಗಿದೆ ಇಲ್ಲಿ ಊರೂರಲಿ.

ಬರಿ ಬಡಾಯಿಯ ದೇಶಭಕ್ತಿ ನಮ್ಮದು.
ನಮ್ಮ
ಬೆನ್ನನ್ನು ನಾವೇ ತಟ್ಟಿಕೊಂಡು ಕುಣಿದಾಡುತ್ತ
ನಮ್ಮ ಗರಿಮೆಯ ನಾವೆ ಬಣ್ಣಿಸುವ ದರಿದ್ರ
ಜನ
ಯಾರೋ ಎಲ್ಲೋ ಏಕೋ ಒಂದು ಒಳ್ಳೆಯ
ಮಾತನಾಡಿದರೆ
ಅದನ್ನೆ ಸಹಸ್ರ ಕಂಠದಿ ಹಾಡಿ ಅದನ್ನೇ
ದೇಶದುದ್ದಕ್ಕೂ ಅಗಲಕ್ಕೂ ಸಾರುತ್ತ
ನಮ್ಮಾಧುನಿಕ
ದೈನ್ಯ ಕೈಂಕರ್ಯಗಳ ಮರೆಸಲೆಳಸುವ
ಮಂದಿ
ಈ ನಮ್ಮ ಭಾರತದ ಬಂದಿ ವಂದಿ.

– ಗೋಪಾಲಕೃಷ್ಣ ಅಡಿಗ

ವಿಚಾರ ದೀಪ್ತಿ

ಶುದ್ಧ ಕವಿತೆ ಎಂದರೆ ಹೇಗಿರಬೇಕು?

ಶುದ್ಧತೆ ಅನ್ನೋದು ಅನೈಸರ್ಗಿಕ. ನಿಸರ್ಗದಲ್ಲಿ ಯಾವುದೂ ಶುದ್ಧವಾಗಿ ಸಿಗಲ್ಲ. ಎಲ್ಲವೂ ಸಂಕರ ಸ್ಥಿತಿಯಲ್ಲೇ ಇರುತ್ತದೆ. ಬಣ್ಣ, ರುಚಿ, ವಾಸನೆ ಇಲ್ಲದ ನೀರು ಪಠ್ಯಪುಸ್ತಕದಲ್ಲಿ ಮಾತ್ರ ಸಿಗಬಹುದು. ಶುದ್ಧತೆಯವಾದ ಬೇರೆಲ್ಲ ಮತಾಂಧತೆಗಿಂತ ಕೆಟ್ಟದ್ದು. ಆದರೆ, ಕವಿತೆಯಿಂದ ನಾನಾ ನಿರೀಕ್ಷೆಗಳದ್ದೇ- ಸಾಮಾಜಿಕ ಬದಲಾವಣೆ, ಮೋಕ್ಷ ಇತ್ಯಾದಿಗಳದ್ದೇ ಮೇಲುಗೈ ಆದಾಗ ಮನಸನ್ನಷ್ಟೇ ಹಿಗ್ಗಿಸುವ ಆ ಶಬ್ದದ ಸಂವೇದನೆಯನ್ನು ಸೂಕ್ಷ್ಮಗೊಳಿಸುವ ಪರಿಣಾಮವಲ್ಲದೆ ಮತ್ಯಾವ ಪ್ರಯೋಜನವೂ ಇರದ ಶುದ್ಧ ಕವಿತೆ ಬೇಕು ಅನಿಸಿಬಿಡುತ್ತದೆ.

ಕವಿತೆಯ ಅನುಭವ ಅಂದರೆ ಯಾವುದು? ಅನುಭವ ಕವಿತೆಯಾಗುವ ಪ್ರಕ್ರಿಯೆ ಹೇಗೆ?

ಲೋಕಾನುಭವದ ವಿವರಣೆ ಕವಿತೆ ಅಲ್ಲ, ಅನುಭವ ಉಂಟಾಗುವ ರೀತಿ ಅದು. ಅದು ಮನಸ್ಸಿನ ಅನುಭವ. ಕವಿತೆಯಲ್ಲಿರುವ ಸೇಬು ತಿನ್ನಲು ಬರಲ್ಲ. ನನ್ನ ಮಟ್ಟಿಗೆ ಕವಿತೆ ಅಂದರೆ ಮನಸ್ಸು ಉಂಟಾಗುವುದು. ಅರ್ಥಪೂರ್ಣತೆ ಎನ್ನುವುದು ವಸ್ತುವಿನದ್ದಲ್ಲ, ಅದು ಮನಸ್ಸಿನ ಗುಣ. ಲೋಕಾನುಭವ ಕವಿತೆಯಾಗುವ ಪ್ರಕ್ರಿಯೆ ಅಂದರೆ ಅಕ್ಕಿ ಅನ್ನವಾದಂತೆ. ಹಾಗೇ ಇರುತ್ತೆ, ಆದರೆ ಒಳಗಿಂದ ಬದಲಾಗಿರುತ್ತೆ. ಬೆಂಕಿ, ನೀರು ತಾಗಿ ಹದಕ್ಕೆ ಬಂದು ಅರಳಿರುತ್ತೆ, ಆಸ್ವಾದ್ಯವಾಗಿರುತ್ತೆ.

ಭಾರತದ ಬಹುತೇಕ ಭಾಷೆಗಳು ತಮ್ಮ ಶ್ರೇಷ್ಠ ಅಭಿವ್ಯಕ್ತಿ ಪಡಕೊಂಡಿರೋದು ಕಾವ್ಯದಲ್ಲಿ. ಈಗ ಕನ್ನಡ ಕವಿತೆಗೆ ಓದುಗರು ಹೇಗೆ ಸ್ಪಂದಿಸುತ್ತಿದ್ದಾರೆ?

ಕಾವ್ಯ ಸಂಗೀತಗಳು ಒಂದು ಜನ ಸಮುದಾಯದ ಅತ್ಯುತ್ತಮ ಅಭಿವ್ಯಕ್ತಿ ಅನ್ನೋದು ನಿಜ. ಈಗ ಕನ್ನಡದಲ್ಲಿ ಕವಿತೆಗೆ ಜನಸ್ಪಂದನ ಕಡಿಮೆಯಿರುವುದಾದರೆ ಅದಕ್ಕೆ ಕಾರಣ ನಮ್ಮ ಜೀವನದ ಕಳಪೆತನವೇ. ಅಭೂತಪೂರ್ವವಾಗಿ ಕಾಣುವ ತಂತ್ರಜ್ಞಾನ ಜನಮಾನಸದ ಈ ಕಳಪೆತನಕ್ಕೆ ಕಾರಣ. ಒಂದೊಂದು ಹೊಸ ವಸ್ತು ಆವಿಷ್ಕಾರವಾದಾಗಲೂ ನಮ್ಮ ಮನೋಮಯ ಕೋಶ ಅಷ್ಟಷ್ಟು ಕುಗ್ಗುತ್ತದೆ. ಯಾರೋ ಅಂದರು: 'ಈ ಸಾಹಿತ್ಯ, ಕವಿತೆ ಎಲ್ಲ ನಿರುಪಯುಕ್ತ' ಎಂದು. ನಾನು ಕೇಳಿದೆ 'ನಮ್ಮ ಮಗುತನ ಕಳೆದ ಮೇಲೆ ತಾಯ ಸ್ತನಗಳೂ ನಿರುಪಯುಕ್ತ ಎನ್ನಬಹುದೇ?'

ಬಡತನ, ಅವಮಾನ, ಅಸಹಾಯಕತೆಯನ್ನು ನೀವು ನಿಮ್ಮ ಬದುಕಲ್ಲಿ ಹೇಗೆ ಮೀರಿದಿರಿ?

ನಾನು ಜೀವನದ ಬಗ್ಗೆ ಅಪಾರವಾದ ಕೃತಜ್ಞತೆ ಇರುವವನು. ಈ ಭವದ ಅನುಭವ ಚುಚ್ಚಿದಾಗ ಅದು ನನ್ನನ್ನು ಕರಗಿಸುತ್ತೆ. ಚರಂಡಿಯಲ್ಲಿ ಬಿದ್ದಿರುವಾಗಲೂ ನಕ್ಷತ್ರಗಳು ಕಾಣುತ್ತವಲ್ಲವೇ! ಜೀವಂತವಾಗಿರೋದೇ ದೊಡ್ಡ ಹಬ್ಬ ಎಂದು ತಿಳಿದವನಿಗೆ ಮತ್ತೆಲ್ಲ ಸ್ಥಿತಿಗತಿಗಳೂ ಒಳ್ಳೆಯ ಅನುಭವ ಎಂದೇ ಅನಿಸುವುದು. ಇದನ್ನು ನೀವು ಸಾಮಾಜಿಕವಾದ, ಯಥಾಸ್ಥಿತಿವಾದ ಎಂದು ತಿಳಿಯಬಾರದು. ಹೇಗಾದರೂ ಇರಲಿ ಈ ಬದುಕನ್ನು ಬದುಕಿದ್ದು ಒಳ್ಳೆಯದಾಯ್ತು ಅನಿಸಬೇಕು.

– ಎಸ್.ಮಂಜುನಾಥ್

ಮಾವೋವಾದ ವರ್ಸಸ್ ಸರ್ವೋದಯ

– ಸುರೇಂದ್ರ ಕೌಲಗಿ

ಕ್ರಾಂತಿಗಳನ್ನು ಮಾಡಲಾಗುವುದಿಲ್ಲ; ಅವು ಆಗುತ್ತವೆ.

- ವೆಂಡಲ್ ಫಿಲಿಪ್ಸ್

೨೦೧೨ ಏಪ್ರಿಲ್ ಮಾಹೆ ಭಾರತಕ್ಕೆ ಮಾವೋವಾದಿಗಳ ಕಾಟದ ಮಾಹೆಯೆಂದೇ ಘೋಷಿಸಬಹುದು. ಈ ರೀತಿ ಸರ್ಕಾರ ಘೋಷಣೆ ಮಾಡಲು ಸಾಧ್ಯವಿಲವಾದರೂ ಭಾರತದ ಜನತೆ ಆ ರೀತಿ ಘೋಷಿಸಿಕೊಳ್ಳುವುದರಲ್ಲಿ ಯಾವ ತಪ್ಪೂ ಇಲ್ಲವೆಂದು ಹೇಳಬಹುದು. ಸುಮಾರು ನಾಲ್ಕೈದು ದಶಕಗಳಿಂದ ದೇಶದಲ್ಲಿ ಮವೋವಾದಿಗಳ ಉಪಟಳ ಹೆಚ್ಚಾಗಿದೆ. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಬಹುಶಃ ಎಲ್ಲ ರಾಜ್ಯಗಳಲ್ಲಿ ಕೆಂಪು ಪಟ್ಟಿ ದಾರಿ ಕಂಡುಬರುತ್ತಿದೆ. ಇವರ ಸಂಘಟನೆ ದಿನೇ ದಿನೇ ಬಲಗಗೊಳ್ಳುತ್ತಿರುವ ಸೂಚನೆಗಳು ಸ್ಪಷ್ಟವಾಗಿ ಕಾಣಬರುತ್ತಿವೆ. ಇವರ ಸಂಘಟನೆ ಎಷ್ಟರ ಮಟ್ಟಿಗೆ ಬಲಶಾಲಿಯಾಗಿದೆಯೆಂದರೆ ನೆರೆ ರಾಷ್ಟ್ರ ನೇಪಾಳದಲ್ಲಿ ತಮ್ಮದೇ ಸಿದ್ಧಾಂತದ ಸರ್ಕಾರ ರಚನೆಯಾಗುವಂತೆ ಮಾಡಿದ್ದಾರೆ. ಅಲ್ಲದೆ, ಮಾವೋ ಸಿದ್ಧಾಂತದ ತವರುಮನೆಯೆಂದೆನಿಸಿಕೊಂಡಿರುವ ಚೀನಾದ ಸರ್ಕಾರದೊಂದಿಗೆ ಬಾಂಧವ್ಯ ಬೆಳೆಸಿಕೊಂಡಿದ್ದಾರೆ. ಭಾರತ ಸರ್ಕಾರವನ್ನು ಮುಜುಗರಕ್ಕೆ ಈಡುಮಾಡಿದ್ದಾರೆ. ದೇಶದ ಒಳಗೆ ಒರಿಸ್ಸಾ, ಛತ್ತೀಸ್‌ಗಢ, ಆಂಧ್ರ, ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿಯ ಚುನಾಯಿತ ಸರ್ಕಾರಗಳನ್ನು ತಮ್ಮ ಇಚ್ಛಾನುಸಾರ ಬಗ್ಗಿಸುವಷ್ಟು ಬಲಶಾಲಿಯಾಗಿದ್ದಾರೆ. ಕೇಂದ್ರ ಸರ್ಕಾರ ಮಾವೋವಾದಿಗಳ ವಿಧ್ವಂಸಕ ಚಟುವಟಿಕೆಗಳನ್ನು ದಮನ ಮಾಡಲು ವಿಶೇಷವಾದ ಕಾರ್ಯಪಡೆ ರಚಿಸಿದೆ. ರಾಜ್ಯ ಸರ್ಕಾರಗಳೂ ಸಹ ಕೇಂದ್ರದ ಈ ಮಾರ್ಗವನ್ನೇ ಅನುಸರಿಸುತ್ತಿವೆ. ಇದರಿಂದ ದೇಶದಲ್ಲಿ ಮಾವೋವಾದಿಗಳು ಮತ್ತು ಸರ್ಕಾರದ ಮಧ್ಯೆ ಗೆರಿಲ್ಲಾ ಮಾದರಿಯ ಯುದ್ಧ ನಡೆಯುತ್ತಿದೆ. ಮಾವೋವಾದ ಹುಟ್ಟಿ ಬಂದು ಶತಮಾನವಾಗಿದ್ದರೂ ರಷ್ಯಾ ದೇಶದಲ್ಲಿಯ ಸಾಮ್ಯವಾದ ನೆಲಕಚ್ಚಿದ್ದರೂ ಚೀನಾ ದೇಶದಲ್ಲಿ ಬಡತನ ಮತ್ತು ನಿರುದ್ಯೋಗದಂಥ ಸಮಸ್ಯೆಗಳು ವಿಪುಲವಾಗಿದ್ದರೂ ಅವರು ತಮ್ಮ ಚಿಂತನೆಯನ್ನು ಬದಲಾಯಿಸಿಕೊಂಡಿಲ್ಲ, ಕಾರ್ಯವಿಧಾನವನ್ನು ಬದಲಾಯಿಸಿಕೊಂಡಿಲ್ಲ. ೨೧ನೇ ಶತಮಾನ ಪ್ರಜಾಪ್ರಭುತ್ವದ ಶತಮಾನ. ಜಗತ್ತಿನ ವಿವಿಧ ದೇಶಗಳಲ್ಲಿಯ ವಿವಿಧ ಪ್ರಕಾರದ ಸರ್ವಾಧಿಕಾರಿ ಪ್ರಭುತ್ವದ ವಿರುದ್ಧ ಆಯಾ ದೇಶದಲ್ಲಿಯ ಜನರು ಪ್ರಜಾಪ್ರಭುತ್ವ ಸ್ಥಾಪನೆಗಾಗಿ ಹೋರಾಟನಡೆಸಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಬರ್ಮಾ(ಮಯನ್ಮಾರ್)ದಲ್ಲಿ ಸೂಕಿಯವರ ನೇತೃತ್ವದಲ್ಲಿ ನಡೆದ ಸೈನ್ಯಾಧಿಕಾರ ವಿರೋಧಿ ಹೋರಾಟ ಉದಾಹರಣೆಯಾಗಿ ಸಿಗುತ್ತದೆ. ಈಜಿಪ್ಟ್, ಇರಾಕ್, ಇರಾನ್

ಮತ್ತು ಸಿರಿಯಾ ಮುಂತಾದ ಮಧ್ಯಪ್ರಾಚ್ಯ ದೇಶಗಳಲ್ಲಿ ಪ್ರಜಾಪ್ರಭುತ್ವಕ್ಕಾಗಿ ಹೋರಾಟ ನಡೆಯುತ್ತಲೇ ಇದೆ. ಕಾಲಧರ್ಮ ಹೀಗಿರುವಾಗ ಭಾರತದಲ್ಲಿ ಮಾವೋವಾದಿಗಳು ಮತ್ತು ನಕ್ಸಲೀಯರು ಸಮಯದ ಕರೆಗೆ ವಿರುದ್ಧವಾಗಿ ಹೋರಾಟನಡೆಸುತ್ತಿರುವುದು ಮತ್ತು ತಮ್ಮ ಹೋರಾಟದ ಮೂಲಕ ಅಮಾಯಕರನ್ನು ಬಲಿತೆಗೆದುಕೊಳ್ಳುತ್ತಿರುವುದು ಯಾವ ಉದ್ದೇಶ್ಯದ ಈಡೇರಿಕೆಗಾಗಿ? ದೇಶದಲ್ಲಿ ಈಗಾಗಲೇ ವಾಮಪಂಥಿ ವಿಚಾರಕರು ರಾಜಕೀಯ ಪಕ್ಷ ಕಟ್ಟಿ ಪ್ರಜಾತಂತ್ರಾತ್ಮಕವಾಗಿ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತಿದ್ದಾರೆ. ಪಶ್ಚಿಮ ಬಂಗಾಳದಲ್ಲಿ ಅಧಿಕಾರಕ್ಕೆ ಬಂದರೂ ತಮ್ಮಲ್ಲಿಯ ಆಂತರಿಕ ವಿಘಟನಾತ್ಮಕ ಕಾರಣಗಳಿಂದಾಗಿ ಅದಿಕಾರ ಕಳೆದುಕೊಂಡರು. ಅದೇ ರೀತಿ ಕೇರಳದಲ್ಲಿಯೂ ಆಯಿತು. ಅಂತೂ ಎಡಪಂಥೀಯ ಪಕ್ಷ ದೇಶದ ಅನೇಕ ಕಡೆಗಳಲ್ಲಿ ತನ್ನ ಸಂಘಟನೆ ಬೆಳೆಸಿಕೊಂಡು ಪ್ರಜಾಸತ್ತೆಯ ಮೂಲಕ ಅಧಿಕಾರಕ್ಕೆ ಬರಲು ಪ್ರಯತ್ನಿಸುತ್ತಿದೆ. ದೇಶದಲ್ಲಿ ಜನಾಂದೋಲನಗಳೆಂದು ನಡೆಯುತ್ತಿರುವ ಅನೇಕ ಆಂದೋಲನಗಳು ಆಂತರಿಕವಾಗಿ ಎಡ ಪಂಥೀ ವಿಚಾರಧಾರೆಯ ಕಾರ್ಯಕರ್ತರ ನೇತೃತ್ವದಲ್ಲಿಯೇ ನಡೆಯುತ್ತಿವೆ. ಜಾಗತೀಕರಣ ಮತ್ತು ಉದಾರೀಕರಣದ ನೀತಿಯಿಂದಾಗಿ ಉಂಟಾಗುತ್ತಿರುವ ಎಲ್ಲ ಸಮಸ್ಯೆಗಳ ವಿರುದ್ಧ ಆಯಾ ಕ್ಷೇತ್ರದಲ್ಲಿ ಎಡಪಂಥೀಯ ಸಂಘಟನೆಗಳು ಹೋರಾಟ ನಡೆಸುತ್ತಲೇ ಇವೆ. ಆದರೆ ಮಾವೋವಾದಿಗಳೆಂದು, ನಕ್ಸಲ್‌ವಾದಿಗಳೆಂದು ಹೇಳಿಕೊಳ್ಳುವ ಸಂಘಟನೆಗಳು ತಮ್ಮ ಗತಕಾಲದ ಹಳಸಿದ ಧೋರಣೆಯನ್ನೇ ಇಟ್ಟುಕೊಂಡು ಕೆಲಸಮಾಡುತ್ತಿವೆ. ಒರಿಸ್ಸಾದಲ್ಲಿ ಮಾವೋವಾದಿಗಳು ಇಟಲಿ ದೇಶದ ಇಬ್ಬರು ಪ್ರವಾಸಿಗರನ್ನು ಮತ್ತು ಬಿ.ಜೆ.ಡಿ. ಪಕ್ಷದ ಶಾಸಕ ಜಿನಾ ಹಿಕಾಕಾರವರನ್ನು ಅಪಹರಿಸಿಕೊಂಡು ತಮ್ಮ ವಶದಲ್ಲಿ ಇರಿಸಿಕೊಂಡಿದ್ದಾರೆ ಮತ್ತು ತುಂಬ ಇತ್ತೀಚಿಗೆ ಛತ್ತೀಸ್‌ಗಢ ರಾಜ್ಯದ ಸುಕ್ಮಾ ಜಿಲ್ಲೆಯ ಜಿಲ್ಲಾಧಿಕಾರಿ ಪಾಲ್ ಮೆನನ್ ಎಂಬುವವರನ್ನು ಅಪಹರಿಸಿದ್ದಾರೆ. ಈ ಅಪಹರಣಗಳ ಹಿಂದೆ ಯಾವ ಜನ ಹಿತ ಉದ್ದೇಶ್ಯವೂ ಇಲ್ಲ. ತಮ್ಮ ಉದ್ದೇಶ್ಯದ ಸಾಧನೆಗಾಗಿ ಅನೇಕ ಅಮಾಯಕರನ್ನು ಕೊಲೆಮಾಡಿ ಶಿಕ್ಷೆಗೆ ಒಳಗಾಗಿರುವಂಥವರನ್ನು ಬಿಡುಗಡೆಗೊಳಿಸುವುದೇ ಆಗಿದೆ. ಇದು ಒತ್ತಡದ ಮತ್ತು ಬೆದರಿಕೆಯ ತಂತ್ರವಲ್ಲದೆ ಮತ್ತೇನು? ಮಾವೋವಾದಿಗಳಿಗೂ ದುಡ್ಡಿನ ಆಸೆಗಾಗಿ ಮಕ್ಕಳನ್ನೂ, ಯುವತಿಯರನ್ನೂ ಅಪಹರಿಸಿಕೊಂಡು ಒತ್ತೆ ಇಟ್ಟುಕೊಳ್ಳುವ ಸಮಾಜಘಾತಕ ಶಕ್ತಿಗಳಿಗಿಂತ ಮಾವೋವಾದಿಗಳು ಯಾವ ರೀತಿ ಭಿನ್ನವಾಗಿದ್ದಾರೆ. ತಾತ್ವಿಕ ವಿಚಾರ್ರದ ಮುಖವಾಡ ಧರಿಸಿ ದೇಶದಲ್ಲಿ ಅಶಾಂತಿ ಉಂಟಮಾಡುತ್ತಿದ್ದಾರೆ. ಇನ್ನೊಂದು ವಿಶೇಷ ಸಂಗತಿ ಏನೆಂದರೆ ಮಾವೋವಾದಿಗಳಲ್ಲಿ ಯಾವುದೇ ಕಾರ್ಯಕ್ರಮದ ಬಗ್ಗೆ ಏಕಾಭಿಪ್ರಾಯವಿಲ್ಲ. ಅನೇಕ ಒಳಗುಂಪುಗಳಿವೆ. ಅವರು ಉಂಟುಮಾಡುವ ಸಮಸ್ಯೆಯ ಪರಿಹಾರಕ್ಕೆ ಸರ್ಕಾರ ಯಾವ ಗುಂಪಿನ ನಾಯಕನೊಂದಿಗೆ ಮಾತನಾಡಬೇಕು ಅನ್ನುವಷ್ಟು ಗೊಂದಲಮಯವಾಗಿದೆ ಮಾವೋವಾದಿಗಳ ನೇತೃತ್ವ. ಈಗಾಗಲೇ ಅಸ್ಸಾಂ ರಾಜ್ಯದಲ್ಲಿಯ ಬಹುದೊಡ್ಡ ಸಂಖ್ಯೆಯ ನಕ್ಸಲೀಯರು ಸರ್ಕಾರಕ್ಕೆ ಶರಣಾಗಿದ್ದಾರೆ. ಅವರಲ್ಲಿಯ ಅನೇಕರು ದೇಶದ

ಮುಖ್ಯವಾಹಿನಿಯೊಂದಿಗೆ ಸೇರಿಕೊಳ್ಳಲು ಬಯಸಿದ್ದಾರೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು 'ಗ್ರೀನ್‌ಹಂಟ್' ಎಂಬ ಹೆಸರಿನಲ್ಲಿ ಮಾವೋವಾದಿಗಳನ್ನು ಮತ್ತು ನಕ್ಸಲೀಯರನ್ನು ಬೇಟೆಯಾಡಲು ಪ್ರಾರಂಭಿಸಿದ ಮೇಲೆ ಇವರು ಹೈರಾಣಾಗಿದ್ದಾರೆ. ದಾರಿಕಾಣದೆ ಅಪರಹರಣದ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದಾರೆ. ಕ್ರಾಂತಿಗಾಗಿ ಕ್ರಾಂತಿ ಮಾಡಬೇಕೆಂಬ ಹುಚ್ಚುತನ ಇವರದ್ದಾಗಿದೆ. ಕೆಟ್ಟಿರುವ ಸಾಮಾಜಿಕ ವ್ಯವಸ್ಥೆಯ ಬದಲಾವಣೆಗಾಗಿ ಕ್ರಾಂತಿಯಾಗಬೇಕಾದುದೇನೋ ಅಗತ್ಯ. ಆದರೆ ಆ ಕ್ರಾಂತಿಯ ಸ್ವರೂಪ ಹೇಗಿರಬೇಕು, ಅದರ ಸಾಧನಗಳಾವವು ಎಂಬುದರ ಬಗ್ಗೆ ಸ್ಪಷ್ಟ ತಿಳುವಳಿಕೆ ಇರಬೇಕು. 'ಗ್ರೀನ್‌ಹಂಟ್' ಕಾರಣದಿಂದಾಗಿ ಮವೋವಾದಿಗಳು, ನಕ್ಸಲೀಯರು ಒಂದು ಕಡೆ ಸೇರಿ ವಿಚಾರ ವಿನಿಮಯಮಾಡಿಕೊಳ್ಳಲಾಗದ ಸ್ಥಿತಿಯಲ್ಲಿದ್ದಾರೆ. ಇವರಿಗೆ ನಾಯಕರ್‍ಯಾರು ಮತ್ತು ಇವರ ಪ್ರಣಾಳಿಕೆ (ಅಜೆಂಡಾ) ಏನು ಎಂಬುದೇ ಯಕ್ಷಪ್ರಶ್ನೆಯಾಗಿದೆ. ಯಾವಾಗ ಬಹಿರಂಗವಾಗಿ ಒಟ್ಟು ಸೇರಿ ವಿಚಾರ ವಿನಿಮಯ ಮಾಡಲು ಸಾಧ್ಯವಾಗುವುದಿಲ್ಲವೋ ಆಗ ಉದ್ದೇಶ್ಯ ಎಷ್ಟೇ ಒಳ್ಳೆಯದಾಗಿದ್ದರೂ ಆ ಉದ್ದೇಶ್ಯ ನೆರವೇರುವುದು ಕಷ್ಟ ಸಾಧ್ಯ. ಚೀನಾದಲ್ಲಿ ಮತ್ತು ರಷ್ಯಾದಲ್ಲಿ ತಕ್ಕ ಮಟ್ಟಿಗೆ ಮತ್ತು ಒಂದು ನಿರ್ದಿಷ್ಟ ಕಾಲಾವಧಿಗೆ ರೈತ ಕಾರ್ಮಿಕರ ಸರ್ಕಾರ ಲೆನಿನ್ ಮತ್ತು ಮಾರ್ಕ್ಸ್‌ರ ನೇತೃತ್ವದಲ್ಲಿ ರಚನೆಯಾದಾಗಲೂ ಸಹ ತಮ್ಮ ಉದ್ದೇಶ್ಯವನ್ನು ಪೂರ್ಣವಾಗಿ ನೆರವೇರಿಸಿಕೊಳ್ಳಲಾಗಲಿಲ್ಲ ಎಂಬ ಸಂಗತಿ ಇತಿಹಾಸದಲ್ಲಿ ದಾಖಲೆಗೊಂಡಿದೆ. ಸರ್ಕಾರವೇ ಉದುರಿಹೋಗಬೇಕೆನ್ನುವ ಪರಿಸ್ಥಿತಿ ಉಂಟುಮಾಡಬೇಕೆಂಬ ಆದರ್ಶವನ್ನು ಇಟ್ಟುಕೊಂಡಿದ್ದ ಆ ದೇಶಗಳಲ್ಲಿ ಕೊನೆಗೆ ಸರ್ಕಾರವೇ ಬಲಿಷ್ಠವಾಗಿ ಉಳಿಯಿತು. ಇಂದಿಗೂ ಕೂಡ ತೆರೆಯ ಮರೆಯಲ್ಲಿ ಅನೇಕ ರಾಜಕೀಯ ವ್ಯವಹಾರಗಳು ಅಲ್ಲಿ ನಡೆಯುತ್ತವೆ. ಅಲ್ಲಿ ನಡೆಯುವ ಅನೇಕ ವಿದ್ಯಮಾನಗಳು ಹೊರಜಗತ್ತಿಗೆ ಗೊತ್ತಾಗುವುದಿಲ್ಲ. ಭಾರತೀಯ ಮಾವೋವಾದಿಗಳು ಮತ್ತು ನಕ್ಸಲೀಯರು ಚೀನಾ ದೇಶದ ಕೈಗೊಂಬೆಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹೇಳಿ ಕೊಟ್ಟ ಬುದ್ಧಿ, ಕಟ್ಟಿಕೊಟ್ಟ ಬುತ್ತಿ ಹೆಚ್ಚು ಕಾಲ ಉಪಯೋಗಕ್ಕೆ ಬರುವುದಿಲ್ಲವೆಂಬ ವಿವೇಕ ಮಾವೋವಾದಿಗಳಿಗೂ ನಕ್ಸಲೀಯರಿಗೂ ಇಲ್ಲವಾಗಿರುವುದು ವೈಚಾರಿಕ ಕ್ಷೇತ್ರದ ದುರಂತವೆಂದೇ ಹೇಳಬಹುದು.

ಆಯಕಟ್ಟಿನ ಸ್ಥಾನದಲ್ಲಿರುವ ವ್ಯಕ್ತಿಗಳನ್ನು ಅಪಹರಣ ಮಾಡಿ ಕಾನೂನ ವಿರೋಧಿ ತಮ್ಮ ಬೇಡಿಕೆಗಳ ಈಡೇರಿಕೆ ಮಾಡಿಕೊಳ್ಳುವುದೇ ಅವರ ರಾಜಕೀಯ ತಂತ್ರವಾದರೆ ಇದಕ್ಕೆ ಅಪಾರವಾದ ಬೆಲೆಯನ್ನು ಮಾವೋವಾದಿಗಳು ತೆತ್ತಬೇಕಾಗುತ್ತದೆ. ಕಾನೂನು ಸುವ್ಯಸ್ಥೆಗಾಗಿ ಕರ್ತವ್ಯ ನಿರ್ವಹಿಸುವ ಸರ್ಕಾರದ ಸಶಸ್ತ್ರಪಡೆ ಬಂಧಿಸುವುದರ ಬದಲಾಗಿ ತಾವೇ ಅಂತಿಮ ತೀರ್ಮಾನ ಮಾಡಿಬಿಡುವ ಸಾಧ್ಯತೆ ಇದೆ. ಅಲ್ಲದೆ ಜನತೆಯೂ ಕೂಡ ಮಾವೋವಾದಿಗಳ ಹಿಂಸೆಯನ್ನು ಪ್ರತಿಭಟಿಸುವ ಸಾಧ್ಯತೆಯೂ ನಿರ್ಮಾಣವಾಗುತ್ತದೆ. ಭವಿಷ್ಯದಲ್ಲಿ ಅವರಿಗೆ ದೇಶದ ರಾಜಕೀಯ ವ್ಯವಸ್ಥೆಯಲ್ಲಿ ಸ್ಥಾನವೇ ಇಲ್ಲದಂತಾಗಬಹುದು.

ಮಾವೋವಾದಿಗಳ ಮತ್ತು ನಕ್ಸಲೀಯರ ಬೆಳವಣಿಗೆಗೆ ಎಲ್ಲ ಸರ್ಕಾರಗಳ ತಪ್ಪು ಆರ್ಥಿಕ ನೀತಿ, ಅಭಿವೃದ್ಧಿ ನೀತಿ ಮತ್ತು ಶಿಕ್ಷಣ ನೀತಿಗಳೇ ಕಾರಣವಾಗಿವೆ. ಓರ್ವ ಆಧ್ಯಾತ್ಮಿಕ ಗುರು ಎಂದು ಹೇಳಿಕೊಳ್ಳುವ ಓರ್ವ ಪ್ರಭಾವಿ ವ್ಯಕ್ತಿ ಇತ್ತೀಚಿಗೆ ಹೇಳಿದ್ದೇನೆಂದರೆ ಸರ್ಕಾರಿ ಶಾಲೆ ನಕ್ಸಲೀಯರು ಹುಟ್ಟುವುದಕ್ಕೆ ಕಾರಣವಾಗುತ್ತಿದೆ. ಈ ಮಾತು ಕೇವಲ ಸರ್ಕಾರಿ ಶಾಲೆಗಳಿಗಲ್ಲ, ಶ್ರೀಮಂತ ಖಾಸಗಿ ಶಾಲೆಗಳಿಗೂ ಅನ್ವಯವಾಗುತ್ತಿದೆ. ದೇಶದ ಒಟ್ಟಾರೆ ಶಿಕ್ಷಣ ಪದ್ಧತಿಯೇ ಹಿಂಸಾಮುಖಿಯಾಗಿದೆ. ಇಂದಿನ ಪರಿಸ್ಥಿತಿಗೂ ೮೨ ವರ್ಷಗಳ ಹಿಂದೆ ಗಾಂಧೀ ನಡೆಸಿದ ಉಪ್ಪಿನ ಸತ್ಯಾಗ್ರಹ ಕಾಲದಲ್ಲಿದ್ದ ಪರಿಸ್ಥಿತಿಗೂ ಯಾವುದೇ ವ್ಯತ್ಯಾಸವಿಲ್ಲ. ಆಗಿನ ಕಾಲದ ವೈಸ್‌ರಾಯ್ ಇರ್ವಿನ್ ಓರ್ವ ಭಾರತೀಯನ ಸರಾಸರಿ ಒಂದು ದಿನದ ಆದಾಯ ಎರಡು ಆಣೆಗಳಷ್ಟು ಇದ್ದಂಥ ಕಾಲದಲ್ಲಿ ದಿನವೊಂದಕ್ಕೆ ಏಳುನೂರು ರುಪಾಯಿಗಳಷ್ಟು ಸಂಬಳ ಪಡೆಯುತಿದ್ದ. ಅಂದರೆ ಐದು ಸಾವಿರ ಪಟ್ಟು ಹೆಚ್ಚು ಸಂಬಳ ಅವನದ್ದಾಗಿತ್ತು. ಇಂದು ಕೂಡ ಇದೇ ಸ್ಥಿತಿ ಇದೆ. ಓರ್ವ ಹಳ್ಳಿಗನ ಒಂದು ದಿನದ ಆದಾಯ ಮೂವತ್ತು ರುಪಾಯಿ ಇದ್ದರೆ, ರಾಷ್ಟ್ರಪತಿಯ ಆದಾಯ ಮೂವತ್ತು ಸಾವಿರವಿದೆ. ಸರ್ಕಾರಿ ನೌಕರನ ಆದಾಯ ಹಲವಾರು ಸಾವಿರ ರುಪಾಯಿಯಿದೆ. ಇಂಗ್ಲೀಷ್ ಸರ್ಕಾರ ಉಪ್ಪಿನ ಮೇಲೆ ತೆರಿಗೆ ಹಾಕಿತ್ತು. ಇಂದು ಸರ್ಕಾರ ಜೀವನಾವಶ್ಯಕವಾದ ಪ್ರತಿಯೊಂದು ವಸ್ತುಗಳ ಮೇಲೂ ಪರೋಕ್ಷ–ಪ್ರತ್ಯಕ್ಷ ತೆರಿಗೆಗಳನ್ನು ಹಾಕಿದೆ. ಜೀವನದ ಪ್ರತಿಯೊಂದು ಅವಶ್ಯಕ ಪದಾರ್ಥಗಳ ಬೆಲೆ ಗಗನಕ್ಕೇರಿದೆ. ಇಂಗ್ಲೀಷ್ ಸರ್ಕಾರ ಅತಿಯಾದ ಶೋಷಣೆಯನ್ನು ಮಾಡುತ್ತಾ ವಿನಾಶಾತ್ಮಕ ಶಸ್ತ್ರಾಸ್ತ್ರಗಳಿಗಾಗಿ ಮತ್ತು ಸೈನ್ಯಕ್ಕಾಗಿ ಹಾಗೂ ಆಡಳಿತ ನಿರ್ವಹಣೆಗಾಗಿ ಖರ್ಚುಮಾಡುತ್ತಿತ್ತು. ಅದೇ ರೀತಿ ಸ್ವತಂತ್ರ ಭಾರತದ ಸರ್ಕಾರ ಕೂಡ ಶಸ್ತ್ರಾಸ್ತ್ರ ಮತ್ತು ವಿವಿಧ ಗ್ರಹಗಳ ಯಾನಕ್ಕಾಗಿ ಖರ್ಚುಮಾಡುತ್ತಿದೆ. ಭ್ರಷ್ಟಾಚಾರ ಮಿತಿ ಮೀರಿದೆ. ಜನರಲ್ಲಿ ವಿಪ್ಲವದ ಮನೋಭಾವ ಮೂಡುತ್ತಿರುವ ಸಂಕೇತಗಳೂ ಗೋಚರಿಸುತ್ತಿವೆ.

ಮಾವೋವಾದಿಗಳಿಂದಲೂ ನೆಮ್ಮದಿಯಿಲ್ಲ, ಇಂದಿನ ಕೇಂದ್ರೀಕೃತ ರಾಜಕೀಯ ವ್ಯವಸ್ಥೆಯಿಂದಲೂ ನೆಮ್ಮದಿಯಿಲ್ಲ. ಇವೆರಡೂ ಮಾರ್ಗಗಳು ಹಿಂಸಾ ಮಾರ್ಗವೇ ಆಗಿವೆ. ಹಿಂಸೆಯಿಂದ ಹಿಂಸೆಯನ್ನು ಶಮನ ಮಾಡಲು ಸಾಧ್ಯವಿಲ್ಲವೆಂದು ಸ್ವತಃ ಸಿದ್ಧವಾದ ತತ್ವವಾಗಿದೆ. ಆದ್ದರಿಂದ ದೇಶದ ಮುಂದೆ ಮೋಕ್ಷ ಪ್ರದಾಯಕ ಏಕೈಕ ಮಾರ್ಗವೆಂದರೆ ಸರ್ವೋದಯ ಸಿದ್ಧಾಂತ. ಸುಮಾರು ಎರಡು ಸಾವಿರ ವರ್ಷಗಳಷ್ಟು ಪುರಾತನವಾದ ಸರ್ವೋದಯ ಸಿದ್ಧಾಂತ ಸನಾತನವಾಗಿರುವ ಕಾರಣದಿಂದ ನಿತ್ಯನೂತನವಾಗಿದೆ. ಸರ್ವೋದಯ ಸಮಾಜ ರಚನೆಗಾಗಿ ಜನರಲ್ಲಿ ಇಚ್ಛಾಶಕ್ತಿಯನ್ನು ಉಂಟುಮಾಡುವ ಕೆಲಸವನ್ನು ದೇಶದ ಚಿಂತಕರು, ಸಾಹಿತಿಗಳು, ಶಿಕ್ಷಣ ತಜ್ಞರು, ಪತ್ರಕರ್ತರು ಮತ್ತು ಸಾಮಾಜಿಕ ಕಾರ್ಯಕರ್ತರು ಮಾಡಬೇಕಾಗಿದೆ. ಏಕೆಂದರೆ ೨೧ನೇ ಶತಮಾನ ಸರ್ವನಾಶ ಇಲ್ಲವೇ ಸರ್ವೋದಯದ ಕಾಲವೆಂದು ಎಲ್ಲರಿಗೂ ಮನವರಿಕೆಯಾಗುತ್ತಿದೆ.

ಲಘು ಪ್ರಬಂಧ

ಧರಣಿಮಂಡಲ ಅಪಾರ್ಟ್‌ಮೆಂಟಿನೊಳಗೆ...

- ವಸುಧೇಂದ್ರ

ಅದ್ಯಾಕೋ ಗೊತ್ತಿಲ್ಲ, ಈ ಆಧುನಿಕ ಅಪಾರ್ಟ್‌ಮೆಂಟ್ ಕಟ್ಟುವವರಿಗೆ ಇಂಗ್ಲಿಷ್ ಹೆಸರುಗಳನ್ನೇ ಇಡುವ ಉಮೇದು. ಆ ತರಹದ ಹೆಸರುಗಳಿಟ್ಟರೆ ಮಾರ್ಕೆಟ್ ವ್ಯಾಲ್ಯೂ ಹೆಚ್ಚಾಗುತ್ತದೆ ಎಂಬುದು ಕಟ್ಟಡ ಕಟ್ಟುವವರ ಅಂಬೋಣ. ಸ್ವಲ್ಪ ಕೆಳ ದರ್ಜೆಯ ಅಪಾರ್ಟ್‌ಮೆಂಟುಗಳಿಗೆ ನಮ್ಮ ಭಾರತೀಯ ಹೆಸರುಗಳನ್ನು ಇಟ್ಟಿರುವುದು ಕಂಡು ಬರುತ್ತದೆ. ಆದರೆ ಕೆಲವೊಮ್ಮೆ ಸಾಮಾನ್ಯ ಜ್ಞಾನವೂ ಇಲ್ಲದಂತೆ ಹೆಸರನ್ನಿಡುತ್ತಾರೆ. ರಿವರ್ ವ್ಯೂ ಅಪಾರ್ಟ್‌ಮೆಂಟಿನ ಮುಂದೆ ದೊಡ್ಡ ವಾಹನ ದಟ್ಟಣೆಯ ರಸ್ತೆಯಿರುತ್ತದೆ. ಸೆವೆನ್ ಹಿಲ್ಸ್ ಅಪಾರ್ಟ್‌ಮೆಂಟಿನೊಳಗೆ ಮಳೆಗಾಲದಲ್ಲಿ ಸಿಕ್ಕಾಪಟ್ಟೆ ನೀರು ನುಗ್ಗುತ್ತದೆ. ಲೇಕ್ ಸೈಡ್ ಅಪಾರ್ಟ್‌ಮೆಂಟಿನ ಕಿಟಕಿಯಲ್ಲಿ ಬೆಳಗಿನ ಜಾವ ನೋಡಿದರೆ ನೂರಾರು ಜನರು ಬಹಿರ್ದೆಶೆಗೆ ಕುಳಿತಿರುತ್ತಾರೆ!

ಇತ್ತೀಚೆಗೆ ಅಪಾರ್ಟ್‌ಮೆಂಟಿನ ಸೌಂದರ್ಯ ಪ್ರಜ್ಞೆಯ ಬಗ್ಗೆ ಬಿಲ್ಡರ್‌ಗಳು ಶ್ರಮ ವಹಿಸುತ್ತಿದ್ದಾರೆ. ಸಂಕೀರ್ಣದ ಹೊರ ನೋಟದ ಸಂಪೂರ್ಣ ಹಕ್ಕನ್ನು ಅವರು ಉಳಿಸಿಕೊಳ್ಳುತ್ತಾರೆ. ಮನೆಯೊಳಗೆ ನೀವು ಏನಾದರೂ ಬದಲಾವಣೆಗಳನ್ನು ಮಾಡಿಕೊಳ್ಳಬಹುದಾದರೂ, ಹೊರಾಂಗಣಕ್ಕೆ ಕೈ ಹಚ್ಚುವಂತಿಲ್ಲ. ಅದರ ಬಣ್ಣ, ರೂಪ, ನೋಟ - ಎಲ್ಲವೂ ಕಟ್ಟುವುದಕ್ಕೆ ಮುಂಚೆ ಯೋಜಿಸಿದಂತೆಯೇ ಉಳಿಯಬೇಕೆಂದು ಬಿಲ್ಡರ್ಸ್ ಬಯಸುತ್ತಾರೆ. ಹೊರದೇಶದಲ್ಲಿ ಈ ಸೌಂದರ್ಯ ಪ್ರಜ್ಞೆ ಇನ್ನೂ ಹೆಚ್ಚು. ಇಂಗ್ಲೆಂಡಿನಲ್ಲಿ ನಾನು ವಾಸಿಸುತ್ತಿದ್ದ ಅಪಾರ್ಟ್‌ಮೆಂಟಿನಲ್ಲಿ ಡಿಜಿಟಲ್ ಟೀವಿಗೆ ಅವಕಾಶವಿರಲಿಲ್ಲ. ಪುಟ್ಟ ಛತ್ರಿಯನ್ನು ಮನೆಯ ಹೊರಗೆ ದಶದಿಕ್ಕುಗಳಿಗೆ ಲಗತ್ತಿಸುವುದರಿಂದ ಇಡೀ ಬಿಲ್ಡಿಂಗಿನ ಸೌಂದರ್ಯವೇ ಕುಸಿಯುತ್ತದೆಂದು ನಿರ್ಧರಿಸಿ ಬರೀ ಕೇಬಲ್ ಟೀವಿಗೆ ಮಾತ್ರ ಅವಕಾಶ ಕೊಟ್ಟಿದ್ದರು (ಕೇಬಲ್‌ಗಳಿಗೆ ಪೂರ್ವಯೋಜನೆ ಮಾಡಿ ಹೊರಗೆ ಕಾಣದಂತೆ ಮನೆಯೊಳಗೆ ತಂದುಕೊಳ್ಳುವ ಕೊಳವೆಯ ವ್ಯವಸ್ಥೆಯಿತ್ತು). ಮಲೇಷ್ಯಾದಲ್ಲಿಯಂತೂ ನಮ್ಮ ಬಾಲ್ಕನಿಯಲ್ಲಿ ನಮ್ಮ ಬಟ್ಟೆಗಳನ್ನು ಒಣಗಿ ಹಾಕುವುದಕ್ಕೆ ಅನುಮತಿಯಿರಲಿಲ್ಲ. ಹೊಸಬರು ಸಂಕೀರ್ಣಕ್ಕೆ ಬಂದಾಗ ಅವರ ಕಣ್ಣಿಗೆ ಬಾಲ್ಕನಿಯಲ್ಲಿ ತೂಗು ಹಾಕಿದ ಒಳ ಉಡುಪುಗಳು ಕಂಡರೆ ಅಸಹ್ಯವಾಗುತ್ತದೆ ಮತ್ತು ಸಂಕೀರ್ಣದ ಸೌಂದರ್ಯಕ್ಕೆ ಕುತ್ತು ಬರುತ್ತದೆಂಬುದು ಅವರ ನಿಲುವಾಗಿತ್ತು!

ಅಪಾರ್ಟ್‌ಮೆಂಟ್ ಕೊಂಡರೂ, ಬಿಡಿ ಮನೆಯ ಭಾವವನ್ನು ಅನುಭವಿಸುವ ಹಲವಾರು ಪ್ರಯತ್ನಗಳು ನಡೆಯುತ್ತವೆ. ಅಯ್ಯಂಗಾರಿ ಕುಟುಂಬವೊಂದು ನಾಲ್ಕನೇ

ಮಹಡಿಯಲ್ಲಿ ಮನೆಯನ್ನು ಕೊಂಡು, ಗೃಹಪ್ರವೇಶದ ದಿನ ಜೀವಂತ ಹಸುವನ್ನು ಮನೆಯೊಳಗೆ ನುಗ್ಗಿಸುವ ಸಲುವಾಗಿ ಅದನ್ನು ಲಿಫ್ಟಿನಲ್ಲಿ ನಿಲ್ಲಿಸಿ, ಅದು ಹೆದರಿಕೆಯಿಂದ ಕೂಗಿ ಲಿಫ್ಟನ್ನು ಸಗಣಿ, ಗಂಜಲದಿಂದ ಪವಿತ್ರಗೊಳಿಸಿದ್ದು ಮಾತ್ರ ಮರೆಯಲಾರದ ಅನುಭವ. ಟೆರೇಸಿನಲ್ಲಿ ಸ್ವಂತ ಈಜುಕೊಳವನ್ನು ಒಬ್ಬರು ನಿರ್ಮಿಸಿಕೊಂಡರೆ, ಬಾಲ್ಕನಿಯಲ್ಲಿ ಬೊನ್ಸಾಯ್ ಕಾಡನ್ನು ಬೆಳೆಸುವವರು ಮತ್ತೊಬ್ಬರು. ನಾಯಿಯನ್ನು ಇಡೀ ದಿನ ಐದನೆಯ ಮಹಡಿಯ ಬಾಲ್ಕನಿಯಲ್ಲಿ ಕಟ್ಟಿ ಹಾಕಿ ಅದು ಮೈದಾನದಲ್ಲಿ ಹೋಗಿ ಬರುವವರನ್ನೆಲ್ಲಾ 'ನನ್ನನ್ನು ಮಾತನಾಡಿಸಿರೋ...' ಎಂಬಂತೆ ಆರ್ತ ಧ್ವನಿಯಲ್ಲಿ ಬೊಗಳುವುದನ್ನು ಜೀರ್ಣಿಸಿಕೊಳ್ಳುವುದು ಕಷ್ಟ. ಮನೆಯ ಮುಂದೆ ಕಷ್ಟ ಪಟ್ಟು ಹಾಕಿದ ರಂಗೋಲಿಯನ್ನು ಹೌಸ್‌ಕೀಪಿಂಗ್‌ನವರು ಕೆಲವೇ ಗಂಟೆಗಳಲ್ಲಿ ಗುಡಿಸಿ ಸಾರಿಸಿ ಬಿಡುವ ಗಲಾಟೆ ಮತ್ತೊಂದು ಕಡೆಗೆ. 'ರಥಸಪ್ತಮಿ'ಯ ದಿನ ಗೊಬ್ಬಿಳ್ಳುಗಳ ಬೆಂಕಿಯಲ್ಲಿ ಪಾಯಸವನ್ನು ಬೇಯಿಸಿ ಲಿಫ್ಟ್ ಮುಂದಿನ ಗ್ರಾನೈಟ್ ಕಲ್ಲನ್ನು ಕಪ್ಪು ಮಾಡುವವರು ಇನ್ನೊಬ್ಬರು. ವೈವಿಧ್ಯಮಯ ವಸ್ತುಗಳನ್ನು ಮಾರುವ ಸೇಲ್ಸ್‌ಮೆನ್‌ಗಳು, ತರಕಾರಿ-ತಿಂಡಿ-ತಿನಸುಗಳನ್ನು ಮಾರುವ ಬೀದಿ ವ್ಯಾಪಾರಿಗಳು, ಕೊನೆಗೆ ಸಂಕ್ರಾಂತಿಯ ದಿನ ಗಂಗೆತ್ತಿನ ಮೇಳವೂ ಇಲ್ಲದೆ ಪರಿತಪಿಸುವವರು ಮತ್ತೊಬ್ಬರು. ಮನೆ ಮಗಳ ಮದುವೆಯ ದಿನ ಹಂದರ ಹಾಕುವುದು ಹೇಗೆಂದು ತಿಳಿಯದೆ ಗೊಂದಲಗೊಳ್ಳುವ ಸಂಪ್ರದಾಯಸ್ಥರು ಕೆಲವರು. ಅಂಗಳದಲ್ಲಿರಬೇಕಾದ ತುಳಸಮ್ಮ ಒಕ್ಕಲೆಬ್ಬಿಸಿಕೊಂಡು ಹಿತ್ತಲಿನ ಬಾಲ್ಕನಿಯಲ್ಲಿ ನೆಲದ ಸ್ಪರ್ಶವಿಲ್ಲದೆ ಅಂತರಿಕ್ಷದಲ್ಲಿ ನೇತಾಡುತ್ತಾ ಪೂಜೆ ಮಾಡಿಸಿಕೊಳ್ಳುವಾಗ ಗೋಳೋ ಎಂದು ಅಳುತ್ತಾಳೆ!

ಈ ಅಪಾರ್ಟ್‌ಮೆಂಟ್ ಕಟ್ಟಿದ ಹೊಸತರಲ್ಲಿ ಇಲ್ಲಿ ಸಾಕಷ್ಟು ಇಲಿಗಳಿದ್ದವು. ದಪ್ಪ ದಪ್ಪ ಹೆಗ್ಗಣ ಗಾತ್ರದ ಇಲಿಗಳವು. ಬಹುಶಃ ಬೆಳೆ ಬೆಳೆಯುತ್ತಿದ್ದ ಹೊಲವೊಂದು ನಗರದ ಬೆಳವಣಿಗೆಗೆ ತತ್ತರಿಸಿ ಅಪಾರ್ಟ್‌ಮೆಂಟಿಗೆ ಶರಣಾಗಿರಬೇಕು. ಯುದ್ಧದಲ್ಲಿ ಸೋತ ದೇಶದ ಪ್ರಜೆಗಳಂತೆ ಈ ಇಲಿಗಳು ಕಂಗಾಲಾಗಿ ಇಡೀ ಅಪಾರ್ಟ್‌ಮೆಂಟಿನ ತುಂಬೆಲ್ಲಾ ಓಡಾಡುತ್ತಿದ್ದವು. ಬಿಲ ತೋಡಲು ಸಾಧ್ಯವಿಲ್ಲದ ಈ ಕಾಂಕ್ರಿಟ್ ಗೋಡೆಗಳನ್ನು ಕೆದರಿ ಕೆದರಿ ತಮ್ಮ ಹಲ್ಲುಗಳನ್ನು ಮೊಂಡು ಮಾಡಿಕೊಂಡವು. ವಿಷಕ್ಕೆ ಬಲಿಯಾಗಿ, ಬೋನಿನಲ್ಲಿ ಸಿಕ್ಕು, ಹೊಡೆತಕ್ಕೆ ಅಸುನೀಗಿ ನಿಧಾನಕ್ಕೆ ಒಂದೊಂದಾಗಿ ನಾಶವಾಗುತ್ತಾ ಬಂದು ಈಗಂತೂ ಇಲಿಗಳು ಕಾಣಿಸುವದಿಲ್ಲ. ನಾವು ಶತ್ರು ನೆಲವನ್ನು ಸಂಪೂರ್ಣವಾಗಿ ವಶ ಪಡಿಸಿಕೊಂಡಿದ್ದೇವೆ!

ಹೊಸತರಲ್ಲಿ ಮನೆಯ ಬಾಗಿಲ ಮುಂದಿಟ್ಟಿದ್ದ ವಯರ್ ಬುಟ್ಟಿಯಲ್ಲಿ ಮೂರು ಹಾಲಿನ ಚೀಟಿಯಿಟ್ಟಿದ್ದರೆ, ಎರಡು ಪಾಕೇಟುಗಳು ಇರುತ್ತಿದ್ದವು. ಎರಡಕ್ಕೆ ಚೀಟಿಯನ್ನಿಟ್ಟಿದ್ದರೆ ಒಂದೂ ಇರುತ್ತಿರಲಿಲ್ಲ. ಹಾಲಿನ ಹುಡುಗರ ಮೇಲೆ ಮನೆಯ ಯಜಮಾನರು ದೂರಿತ್ತರೆ, ಅವರು ತಾವು ಖಂಡಿತಾ ತಪ್ಪು ಮಾಡಿಲ್ಲವೆಂದು ಪ್ರಮಾಣ ಮಾಡುತ್ತಿದ್ದರು. ಹಾಲನ್ನು ನೇರವಾಗಿ ನಿಮ್ಮ ಕೈಗೇ ಕೊಡುತ್ತೇವೆಂದು

ಹುಡುಗರು ಹೇಳಿದರೆ, ಆ ಬೆಳಿಗ್ಗೆ ಐದಕ್ಕೆ ಏಳುವುದಕ್ಕೆ ಯಜಮಾನರ ಮನೆಯವರು ಸಿದ್ಧರಿರಲಿಲ್ಲ. ಕೊನೆಗೆ ಇಡೀ ಅಪಾರ್ಟಮೆಂಟಿಗೆ ಸಿ.ಸಿ. ಟೀವಿ ಅಳವಡಿಸಿದರು. ಸದ್ದುಗದ್ದಲವಿಲ್ಲದೆ ಕೋತಿಗಳ ಗುಂಪೊಂದು ಬಂದು ಹಾಲಿನ ಪಾಕೇಟುಗಳನ್ನು ಕೊಂಡೊಯ್ಯುವುದು ಗೊತ್ತಾಯಿತು. ಹಿಂದೆ ಹೊಲದಲ್ಲಿದ್ದ ಯಾವ ಹಣ್ಣಿನ ಮರದ ಆಸೆಗೆ ಅವು ಅಲ್ಲಿಗೆ ಬರುತ್ತಿದ್ದವೋ ಗೊತ್ತಿಲ್ಲ. ಈಗ ಅವೊಂದೂ ಸಿಕ್ಕದೆ ಹಾಲಿನ ಪಾಕೇಟಿಗೆ ತೃಪ್ತಿಪಟ್ಟುಕೊಳ್ಳುತ್ತಿದ್ದವು. ಸೆಕ್ಯೂರಿಟಿಯವರು ಈಗ ಜಾಗೃತಗೊಂಡಿದ್ದಾರೆ. ಕೋತಿಯ ಚಿತ್ರ ಕಂಪ್ಯೂಟರ್ ಪರದೆಯ ಮೇಲೆ ಮೂಡಿದರೆ ಸಾಕು, ತಕ್ಷಣ ಓಡಿ ಹೋಗಿ ಕಪಿಗಳನ್ನು ಓಡಿಸುತ್ತಾರೆ. ಈಗ ನಾವು ವಾನರ ಸೈನ್ಯದ ಮೇಲೂ ವಿಜಯ ಸಾಧಿಸಿದ್ದೇವೆ!

ಅಪಾರ್ಟ್‌ಮೆಂಟ್‌ನಲ್ಲಿ ಇರುವವರೆಲ್ಲರೂ ಸಾಮಾನ್ಯವಾಗಿ ಒಳ್ಳೆಯ ವಿದ್ಯಾಭ್ಯಾಸವನ್ನು ಪಡೆದವರು. ಸಾಕಷ್ಟು ಒಳ್ಳೆಯ ಹುದ್ದೆಯಲ್ಲಿರುವವರು. ದೇಶ–ವಿದೇಶ ಸುತ್ತಿದವರು. ಒಟ್ಟಾರೆ ಬದುಕಿನಲ್ಲಿ ಯಶಸ್ಸು ಕಂಡವರು. ಆದ್ದರಿಂದ ಇಲ್ಲಿ ಯಾವುದೇ ಒಂದು ಪುಟ್ಟ ಸಲಹೆ ಕಾರ್ಯರೂಪಕ್ಕೆ ಬರುವುದೂ ಇನ್ನಿಲ್ಲದ ಕಷ್ಟಕರ ಸಂಗತಿ! ಒಬ್ಬರು ಒಂದು ಸಲಹೆ ಇತ್ತರೆ ಸಾಕು, ನೂರು ಧ್ವನಿಗಳು ಅದರಲ್ಲಿ ಇಲ್ಲದ ಅನುಮಾನಗಳನ್ನು ಹುಡುಕುತ್ತವೆ. ಪ್ರತಿಯೊಂದು ಸಮಸ್ಯೆಗೂ ಅಂತರ್ಜಾಲದ ಮೂಲಕ ಪರಿಹಾರವನ್ನು ಕಾಣಲು ಹರಸಾಹಸ ಪಡುತ್ತಾರೆ. ಯಾಹೂ ರಣರಂಗದಲ್ಲಿ ತಮ್ಮ ಇ–ಮೇಲ್, ಮೆಸೇಜ್, ವೀಡಿಯೋಗಳೆಂಬ ಕತ್ತಿ, ಗದೆ, ಬಾಣಗಳಿಂದ ಹೋರಾಡುತ್ತಾರೆ. ಒಂದು ನೂರು ರೂಪಾಯಿ ಚಂದಾವನ್ನು ಈ ಕೋಟ್ಯಾಧಿಪತಿಗಳಿಂದ ಸಂಗ್ರಹಿಸಲು ಅಪಾರ್ಟ್‌ಮೆಂಟ್ ಅಸೋಸಿಯೇಷನ್ ಒದ್ದಾಡಿ ಹೋಗುತ್ತದೆ! ಮೂರು ತಿಂಗಳಿಗೊಮ್ಮೆ ಮನೆಗಳ ಯಜಮಾನರೆಲ್ಲರೂ ಸೇರಿ ಸಭೆ ಮಾಡಬೇಕೆಂಬುವುದು ನಿಯಮ. ಇದೊಂದು ಮಾತ್ರ ಆ ದೇವರಿಂದಲೂ ಸಾಧಿಸುವುದು ಸಾಧ್ಯವಿಲ್ಲ! ನಿಮಿಷಕ್ಕೆ ನೂರು ಇ–ಮೇಲ್ ಕಳುಹಿಸುವ ಈ ಆಧುನಿಕ ಯಜಮಾನರು, ಐದು ನಿಮಿಷ ವೈಯಕ್ತಿಕ ಸಮಯವನ್ನು ಯಾರಿಗೂ ಕೊಡಲಾಗುವದಿಲ್ಲ. ಬೆಳಿಗ್ಗೆಯಿಂದ ರಾತ್ರಿಯವರೆಗೆ ಎಡೆಬಿಡದೆ ದುಡಿಯುವ ಈ ಕಷ್ಟಜೀವಿಗಳ ಬಗ್ಗೆ ನಿಜಕ್ಕೂ ಅನುಕಂಪವಾಗುತ್ತದೆ. ಅದೇ ರೀತಿ ಯಾರ ಸಮಯವೂ ಸಿಗದೆ ಹೇಗೆ ಅಸೋಸಿಯೇಷನ್ ಆಫೀಸ್ ನಡೆಸಬೇಕೆಂದು ಒದ್ದಾಡುವ ಮೇನೇಜ್‌ಮೆಂಟ್ ಕಮಿಟಿಯ ಬಗ್ಗೆಯೂ ಅನುಕಂಪವಾಗುತ್ತದೆ. ಇಷ್ಟೆಲ್ಲಾ ಕಷ್ಟಗಳ ನಡುವೆಯೂ ದಿನನಿತ್ಯದ ಕೆಲಸಗಳು ನಿರಾತಂಕವಾಗಿ ನಡೆದುಕೊಂಡು ಹೋಗುವಂತೆ, ವಾರ್ಷಿಕ ಹಬ್ಬಗಳಾದ ದೀಪಾವಳಿ, ಹೋಳಿ, ರಾಜ್ಯೋತ್ಸವ, ಹೊಸವರ್ಷಗಳನ್ನು ಸೊಗಸಾಗಿ ನಿಭಾಯಿಸುವುದು, ಪ್ರಾಮಾಣಿಕವಾಗಿ ವರ್ಷದ ಆಯವ್ಯಯ ಪಟ್ಟಿಯನ್ನು ಪ್ರಕಟಿಸುವುದು ಅವರ ಸಾಧನೆಯೇ ಆಗಿದೆ. ಯಾವುದೇ ಚಿಕ್ಕಾಸನ್ನೂ ಪಡೆಯದೆ ಸುಮ್ಮನೆ ಅಪಾರ್ಟ್‌ಮೆಂಟಿನ ಪ್ರೀತಿಯಿಂದ ಈ ಜವಾಬ್ದಾರಿಯನ್ನು ನಿಭಾಯಿಸುವುದು ಸುಲಭವಲ್ಲ.

ಆದರೆ ಅಪಾರ್ಟ್‌ಮೆಂಟಿನ ಹಿರಿಯ ಜೀವಿಗಳು 'ಎಲ್ಡರ್ಸ್ ಕ್ಲಬ್' ಮಾಡಿಕೊಂಡು ಯಶಸ್ವಿಯಾಗಿ ನಡೆಸುತ್ತಿದ್ದಾರೆ. ದಿನನಿತ್ಯ ಇವರ ಸಂಘದಲ್ಲಿ ಚಟುವಟಿಕೆಗಳಿರುತ್ತವೆ. ಎಲ್ಲರೂ ಸೇರಿ ಭಜನೆ ಮಾಡುತ್ತಾರೆ, ಹರಟೆ ಹೊಡೆಯುತ್ತಾರೆ, ಹತ್ತಿರದ ಆಸ್ಪತ್ರೆಯೊಂದಿಗೆ ಮಾತನಾಡಿ ಉಚಿತವಾಗಿ ಎಲ್ಲರಿಗೂ ಆರೋಗ್ಯ ತಪಾಸಣೆ ಮಾಡಿಸುತ್ತಾರೆ, ಆ ಭಾಗದ ಪಾಲಿಕೆಯ ಪ್ರತಿನಿಧಿಯನ್ನು ಕರೆಸಿ ಸನ್ಮಾನ ಮಾಡಿ ತಮ್ಮ ಅಹವಾಲನ್ನು ಇಡುತ್ತಾರೆ, ಭರ್ಜರಿಯಾಗಿ ಗಣೇಶನನ್ನು ಕೂಡಿಸಿ ಮೈದಾನದಲ್ಲಿ ಮೆರವಣಿಗೆ ಮಾಡುತ್ತಾರೆ, ಇತ್ತೀಚೆಗೆ ಅಗಲಿದ ತಮ್ಮ ಸಂಘದ ಸದಸ್ಯರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾರೆ, ಯಾವುದೋ ಸಂಗೀತ ಸಂಜೆಯನ್ನು ಮಾಡಿಸಿ ಎಲ್ಲರಿಗೂ ಊಟ ಹಾಕಿಸಿ ಬಿಡುತ್ತಾರೆ, ಅಪಾರ್ಟ್‌ಮೆಂಟಿನವರು ಯಾರಾದರೂ ಸಾಧನೆ ಮಾಡಿದರೆ ಅದನ್ನು ನೋಟೀಸು ಬೋರ್ಡಿನಲ್ಲಿ ಹಾಕಿ ಸಂಭ್ರಮಿಸುತ್ತಾರೆ, ಕನ್ನಡ ಕಲಿಸುವ ಕ್ಲಾಸುಗಳನ್ನು ನಡೆಸಿ ನೂರಾರು ಕನ್ನಡೇತರರಿಗೆ ಸೊಗಸಾಗಿ ಕನ್ನಡ ಕಲಿಸಿ ಬಿಟ್ಟಿದ್ದಾರೆ!

ಬಳ್ಳಾರಿ ಜಿಲ್ಲೆಯಿಂದ ಬಂದ ನನಗೆ ಅಪಾರ್ಟ್‌ಮೆಂಟಿನಲ್ಲಾಗುವ ಯಥೇಚ್ಛ ನೀರಿನ ಬಳಕೆಯನ್ನು ನೋಡಿ ವಿಶಿಷ್ಟ ಸಂಕಟವಾಗುತ್ತದೆ. ಊರಿನಲ್ಲಿ ನಾಲ್ಕು ಓಣಿಗೆ ಸೇರಿ ಇರುವ ಒಂದು ನೀರಿನ ಕೊಳಾಯಿಯಲ್ಲಿ ದಿನದ ಯಾವುದೋ ಹೊತ್ತಿನಲ್ಲಿ ಒಂದೆರಡು ತಾಸು ನೀರು ಬಂದರೆ, ನಾವು ಮನೆಯವರೆಲ್ಲಾ ಹೋರಾಡಿ ನಮ್ಮ ಬಚ್ಚಲ ಮನೆಯ ಹಂಡೆಯನ್ನು ತುಂಬಿಸುತ್ತಿದ್ದೆವು. ಈಗ ನನ್ನ ಮನೆಯಲ್ಲಿ ಹದಿನೈದಕ್ಕೂ ಹೆಚ್ಚು ನಲ್ಲಿಗಳಿದ್ದು, ಎಲ್ಲದರಲ್ಲೂ ಸರ್ವಕಾಲವೂ ನೀರು ಬರುತ್ತದೆಂಬ ಸಂಗತಿ ಭಯ ಹುಟ್ಟಿಸುತ್ತದೆ. ಅಪಾರ್ಟ್‌ಮೆಂಟ್ ವಾಸಿಗಳೆಲ್ಲರೂ ಮನಸೋ ಇಚ್ಛೆ ನೀರನ್ನು ಬಳಸುತ್ತಾರೆ. ಸುಮ್ಮನೆ ಹತ್ತು ಹನಿ ಮೂತ್ರ ವಿಸರ್ಜಿಸಿದರೂ ಸಾಕು, ಫ್ಲಷ್ ಮೂಲಕ ಹತ್ತು ಲೀಟರ್ ನೀರು ನಿರ್ನಾಮವಾಗುತ್ತದೆ. ಕಾರುಗಳು ಪ್ರತಿನಿತ್ಯ ನೀರಲ್ಲಿ ಸ್ನಾನ ಮಾಡಿ ಕಂಗೊಳಿಸುತ್ತವೆ. ಗಿಡ-ಗಂಟಿಗಳೆಲ್ಲವೂ ಸೊಗಸಾಗಿ ನೀರು ಕಾಣುತ್ತವೆ. ಸಂಕಟದ ವಿಷಯವೆಂದರೆ ಪಕ್ಕದಲ್ಲಿಯೇ ಇರುವ ಹಳ್ಳಿಯಲ್ಲಿ ವಾರಕ್ಕೆ ಒಮ್ಮೆ ಮಾತ್ರ ನೀರು ಬರುತ್ತದಂತೆ! ಮನೆಯ ಕೆಲಸಕ್ಕೆ ಬರುವ ಹೆಂಗಸರು ಇನ್ನಿಲ್ಲದಂತೆ ತಮ್ಮ ನೀರಿನ ಸಮಸ್ಯೆಯನ್ನು ತೋಡಿಕೊಳ್ಳುತ್ತಾರೆ. ತಮಾಷೆಯೆಂದರೆ ಇವರೂ ತಮ್ಮ ಮನಸ್ಸಿಗೆ ಬಂದಂತೆ ನೀರನ್ನು ಪೋಲು ಮಾಡುತ್ತಾರೆ! ಎಷ್ಟೇ ಬೇಡಿಕೊಂಡರೂ ಮಿತವಾಗಿ ನೀರನ್ನು ಬಳಸುವದಿಲ್ಲ. ಇದು ಹೀಗೇ ಎಷ್ಟು ಕಾಲ ಮುಂದುವರೆಯಲು ಸಾಧ್ಯವೆಂದು ನನಗೆ ಆತಂಕವಾಗುತ್ತದೆ.

ಆಧುನಿಕ ಜೀವನ ಶೈಲಿಯಲ್ಲಿ ಬದುಕುವ ಪ್ರತಿಯೊಬ್ಬ ಬೆಂಗಳೂರಿನವರನ್ನು ಸಂಸಾರ ಸಮೇತ ಎರಡು ತಿಂಗಳ ಕಾಲ ಬಳ್ಳಾರಿ ಜಿಲ್ಲೆಯ ಹಳ್ಳಿಯಲ್ಲಿ ಕಡ್ಡಾಯವಾಗಿ ಬದುಕಿ ಬರಬೇಕೆಂಬ ಕಾಯ್ದೆಯನ್ನು ಮಾಡಿದರೆ ಒಳ್ಳೆಯದಾಗುತ್ತೆನ್ನಿಸುತ್ತದೆ!

(ಸಾಭಾರ : ಪ್ರಜಾವಾಣಿ)

* * *

ಡಾ॥ಅಂಬೇಡ್ಕರ್ ಗಾಂಧಿಯಿಂದ ದೂರವಲ್ಲ ಹತ್ತಿರ

– ಸುರೇಂದ್ರ ಕೌಲಗಿ

(ಏಪ್ರಿಲ್ ೧೪ ಡಾ॥ ಬಿ. ಆರ್. ಅಂಬೇಡ್ಕರರ ಜಯಂತಿ. ಆ ನಿಮಿತ್ತ ಈ ಲೇಖನ.)

೧೯೨೪ರ ಸುಮಾರಿನಲ್ಲಿ ಡಾ॥ ಅಂಬೇಡ್ಕರ್ 'ಬಹಿಷ್ಕೃತ ಹಿತಕಾರಿಣೀ ಸಭಾ' ಎಂಬ ಸಂಸ್ಥೆಯನ್ನು ಸ್ಥಾಪಿಸುವುದರ ಮೂಲಕ ಹಿಂದೂ ಸಮಾಜದಲ್ಲಿ ಬಹು ಪುರಾತನ ಕಾಲದಿಂದಲೂ ಪ್ರಚಾರದಲ್ಲಿದ್ದ ಅಸ್ಪೃಶ್ಯತೆಯ ಆಚರಣೆಯ ವಿರುದ್ಧವಾಗಿ ಮೊಟ್ಟಮೊದಲ ಬಾರಿಗೆ ಸಂಘಟಿತ ರೂಪದಲ್ಲಿ ತಮ್ಮ ಧ್ವನಿಯನ್ನು ಎತ್ತಿದರು. ಅಂದಿನಿಂದ ಅವರು ೧೯೫೬ರಲ್ಲಿ ತೀರಿಕೊಳ್ಳುವವರೆಗೂ ೩೨ ವರ್ಷಗಳ ಕಾಲ ದೀರ್ಘವಾಗಿ ಏಕಪ್ರಕಾರವಾಗಿ, ಕಿಂಚಿತ್ತೂ ಆಯಾಸಪಡದೆ, ಧೈರ್ಯಗುಂದದೆ ಅಸ್ಪೃಶ್ಯತೆಯಂಥ ಕುಸಾಮಾಜಿಕ ಪದ್ಧತಿಯ ವಿರುದ್ಧ ಹೋರಾಡಿದರು. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರವೂ ಎಂಟು ವರ್ಷಗಳ ಕಾಲ ತಮ್ಮ ಹೋರಾಟವನ್ನು ನಡೆಸಿದರು. ಇಷ್ಟೊಂದು ಧೀರ್ಘಕಾಲ ವಿವಿಧ ರೀತಿಗಳಲ್ಲಿ ಹೋರಾಟ ನಡೆಸಿದರೂ ಹಿಂದೂ ಧರ್ಮ ಅಸ್ಪೃಶ್ಯತೆಯಿಂದ ಮುಕ್ತಗೊಳ್ಳದೇ ಇದ್ದುದನ್ನು ಕಂಡು ಅವರಿಗೆ ಬೇಸರವಾದ ಕಾರಣ ಮತ್ತು ತಮ್ಮ ಪ್ರತಿಭಟನೆಯ ಕೊನೆಯ ಅಸ್ತ್ರವೆಂದು ಅಂಬೇಡ್ಕರ್ ತಮ್ಮ ಪತ್ನಿ ಸವಿತಾರೊಂದಿಗೆ ಹಿಂದೂ ಧರ್ಮವನ್ನು ತ್ಯಜಿಸಿ ಬೌದ್ಧ ಧರ್ಮವನ್ನು ಸ್ವೀಕರಿಸಿದರು.

ಅಂಬೇಡ್ಕರ್ ತಮ್ಮ ಅರವತ್ತೈದು ವರ್ಷಗಳ ಕಾಲದ ಅಸ್ಪೃಶ್ಯತಾ ವಿರುದ್ಧದ ಹೋರಾಟದಲ್ಲಿ ಬರೆದ ಲೇಖನಗಳು, ಮಾಡಿದ ಭಾಷಣಗಳು, ಮಂಡಿಸಿದ ಮನವಿಗಳು ಅಹವಾಲುಗಳ ಸಂಖ್ಯೆ ಸಾಮಾನ್ಯ ಮನುಷ್ಯನ ಲೆಕ್ಕಕ್ಕೆ ಮತ್ತು ಸಾಮರ್ಥ್ಯಕ್ಕೆ ಮೀರಿದಷ್ಟಾಗಿವೆ. ಅವೆಲ್ಲವೂ ವಿದ್ವತ್ಪೂರ್ಣವಾಗಿವೆ. ಅವರು ಬರೆದ ಒಂದೊಂದು ಲೇಖನವೂ ಡಾಕ್ಟರೇಟ್ ಪಡೆಯ ಬಹುದಾದಂಥ ಗುಣಮಟ್ಟದಲ್ಲಿವೆ. ಅವೆಲ್ಲವೂ ಐತಿಹಾಸಿಕ ಘಟನೆಗಳಿಂದಲೂ ಸಂಖ್ಯೆಗಳಿಂದಲೂ, ಹಿರಿಯ ತತ್ವಜ್ಞಾನಿಗಳ ಮಾತುಗಳಿಂದಲೂ ತುಂಬಿತುಳುಕಾಡುತ್ತವೆ. ಅಲ್ಲಲ್ಲಿ ಅನೇಕ ವೈರುಧ್ಯಗಳಿದ್ದರೂ ಅವರು ನಿರ್ಮಿಸಿದ ಸಾಹಿತ್ಯ ಹಗುರವಾಗಿ ಪರಿಗಣಿಸುವಂತಿಲ್ಲದವಾಗಿದ್ದವು. ಹೀಗೆ ಅಂಬೇಡ್ಕರ್ ತಮ್ಮ ಏಕ ನಿಷ್ಠತೆಯ ಹೋರಾಟದ ಮೂಲಕ ಹಿಂದೂ ಧರ್ಮದಲ್ಲಿಯ ಬಹುದೊಡ್ಡ ಸಂಖ್ಯೆಯ ದಲಿತರಿಗೆ–ಶೂದ್ರರಿಗೆ–ಅಸ್ಪೃಶ್ಯರಿಗೆ–ಹರಿಜನರಿಗೆ ಅವರದೇ ಮಾತೃಭೂಮಿಯಾದ ಭಾರತ ದೇಶದ ಜನಜೀವನದಲ್ಲಿ ಗೌರವದ, ಸಮಾನತೆಯ ಮತ್ತು ಸ್ವಾತಂತ್ರ್ಯದ ಸ್ಥಾನವನ್ನು ದೊರಕಿಸಿಕೊಟ್ಟರು; ತುಳಿಯಲ್ಪಟ್ಟವರೂ,

ಶೋಷಿತರೂ ಆಗಿದ್ದಂಥ ಮೂಕ ಜನರಿಗೆ ಧ್ವನಿಯನ್ನು ಕೊಟ್ಟರು. ಅವರಲ್ಲಿ ಆತ್ಮಗೌರವ ಮತ್ತು ಆತ್ಮವಿಶ್ವಾಸವನ್ನು ಮೂಡಿಸಿದರು. ಇಂಥ ದೊಡ್ಡ ಸಾಮಾಜಿಕ ಕ್ರಾಂತಿಕಾರಿ ಪುರುಷನಿಗೆ 'ಭಾರತ ರತ್ನ' ಪದವಿಯನ್ನು ಕೊಟ್ಟು ಗೌರವಿಸಿದ್ದು ಸೂಕ್ತವೇ ಆಗಿದೆ. ಅಸ್ಪೃಶ್ಯತೆಯ ನಿವಾರಣೆಯ ಕಾರ್ಯದಲ್ಲಿ ಡಾ॥ ಅಂಬೇಡ್ಕರ್‌ರ ಸಮಕಾಲೀನ ಇನ್ನೊಬ್ಬ ವ್ಯಕ್ತಿ ಗಾಂಧೀ.

ಗಾಂಧೀ ಮಹಾತ್ಮನಾಗುವುದಕ್ಕಿಂತ ಎಷ್ಟೋ ವರ್ಷಗಳ ಮೊದಲೇ ಅಂದರೆ ಕೇವಲ ಹನ್ನೆರಡು ವರ್ಷದ ಬಾಲಕನಾಗಿದ್ದಾಗ ಮನೆಯಲ್ಲಿ ತಾಯಿ ಆಚರಿಸುತ್ತಿದ್ದ ಅಸ್ಪೃಶ್ಯತೆಯ ವಿರುದ್ಧ ೧೮೮೧ರಲ್ಲಿ ಧ್ವನಿ ಎತ್ತಿದ್ದರು. ಗಾಂಧೀ ಮತ್ತು ಅಂಬೇಡ್ಕರ್ ೬೫ ವರ್ಷಗಳ ಕಾಲ ಸಮಕಾಲೀನರಾಗಿ ಸಮಾನ ಮನಸ್ಕರಾಗಿ, ಸಮಾನ ಗಮ್ಯವುಳ್ಳವರಾಗಿ ಕೆಲಸಮಾಡಿದ್ದರೂ ಸಹ ಅಂಬೇಡ್ಕರೋತ್ತರ ಭಾರತದಲ್ಲಿ, ಗಾಂಧೀಯೋತ್ತರ ಭಾರತದಲ್ಲಿಯ ಅವರ ಅನುಯಾಯಿಗಳು ಮತ್ತು ಅವರ ಅಭಿಮಾನಿಗಳು ಗಾಂಧೀ ವಿರುದ್ಧ ಅಂಬೇಡ್ಕರರನ್ನೂ, ಅಂಬೇಡ್ಕರರ ವಿರುದ್ಧ ಗಾಂಧೀಯನ್ನೂ ಅರ್ಥೈಸುವ ಪ್ರಯತ್ನ ಮಾಡಿದ್ದಾರೆ. ಗಾಂಧೀ ಮತ್ತು ಅಂಬೇಡ್ಕರ್ ಭಾರತದ ಜನಜೀವನದಲ್ಲಿ ಲೀನರಾಗಿ ನಾಲ್ಕು ದಶಕಗಳು ಕಳೆದಿದ್ದರೂ ಇನ್ನೂ ಅಂಥದೇ ಪ್ರಯತ್ನದಲ್ಲಿರುವ ಅವರ ಅನುಯಾಯಿಗಳು ಅವರಿಬ್ಬರು ಹೊಂದಿದ್ದ ಶುದ್ಧ ಹಿಂದೂಸಮಾಜದ ರಚನೆಯ ಗುರಿಗೆ ಅವ್ಯಾಹತವಾಗಿ ಆಘಾತವನ್ನುಂಟುಮಾಡುತ್ತಿದ್ದಾರೆ.

ಗಾಂಧೀ ಮತ್ತು ಅಂಬೇಡ್ಕರರ ಜೀವನ, ಅವರ ವಿಚಾರ ಮತ್ತು ಹೋರಾಟ ಇತ್ಯಾದಿಗಳನ್ನು ಮುಕ್ತ ಮನಸ್ಸಿನಿಂದ, ಪೂರ್ವಾಗ್ರಹ ಪೀಡನೆಯಿಂದ ಮುಕ್ತರಾಗಿ, ವ್ಯಕ್ತಿ ಆರಾಧನೆಯ ಚೌಕಟ್ಟಿನಿಂದ ಹೊರಬಂದು ಅಧ್ಯಯನ ಮಾಡಿದಲ್ಲಿ ನಮಗೆ ಸ್ಪಷ್ಟವಾಗಿ ಗೋಚರಿಸುವುದೇನೆಂದರೆ ಅಂಬೇಡ್ಕರ್ ಮತ್ತು ಗಾಂಧೀ ಅಸ್ಪೃಶ್ಯತೆಯೆಂಬ ದಾನವನನ್ನು ಸಂಹರಿಸಲು ಹೊರಟಿರುವ ಒಂದೇ ವೇಗದ ಎರಡು ಬಾಣಗಳಂತಿದ್ದಾರೆ.

ಎಲ್ಲಿಯವರೆಗೆ ಮನುಷ್ಯನಲ್ಲಿ ಚಿಂತನಾ ಸಾಮರ್ಥ್ಯವಿರುತ್ತದೋ ಅಲ್ಲಿಯವರೆಗೆ ಭಿನ್ನಾಭಿಪ್ರಾಯವೆಂಬುದು ಸಹ ಇರುತ್ತದೆ. ಹೊಸ-ಹೊಸ ರೂಪದ ಚಿಂತನೆ ಅವನ ಬೆನ್ನಿಗಂಟಿಕೊಂಡೇ ಇರುತ್ತದೆ. ಇದರ ಪರಿಣಾಮವಾಗಿ ಚಿಂತನೆ ಎಂಬ ಸಮುದ್ರದಲ್ಲಿ ಮಂಥನವಾಗುತ್ತದೆ. ತದನಂತರ ಹಾಲಾಹಲ, ಅಮೃತ ಇತ್ಯಾದಿ ಮಹತ್ತರ ವಸ್ತುಗಳು ಪ್ರಾಪ್ತವಾಗುತ್ತವೆ. ಇಲ್ಲಿ ನಮಗೆ ಮುಖ್ಯವಾಗಿರುವುದು ಅಂಬೇಡ್ಕರ್ ಹಾಗೂ ಗಾಂಧೀ ಇಟ್ಟುಕೊಂಡಿದ್ದ ಉದ್ದೇಶ್ಯ. ಅವರಿಬ್ಬರ ಉದ್ದೇಶ್ಯ ಒಂದೇ ಆಗಿತ್ತೆಂಬುದು ಅವರ ಮಾತುಗಳಲ್ಲಿ ಸ್ಪಷ್ಟವಾಗಿ ಕಾಣಬರುತ್ತದೆ.

ಅಂಬೇಡ್ಕರರಿಗಿಂತ ಗಾಂಧೀ ೨೨ವರ್ಷದಷ್ಟು ದೊಡ್ಡವರಾಗಿದ್ದರಿಂದ ಅವರ ಹಿರಿತನದ ಆಧಾರದ ಮೇಲೆ ಗಾಂಧೀಯವರ ಈ ಮಾತುಗಳನ್ನು ಮೊದಲು ಗಮನಿಸೋಣ.

"ಈ ಅಸ್ಪೃಶ್ಯತಾ ನಿವಾರಣೆಯ ಕಾರ್ಯ ನನ್ನ ದೃಷ್ಟಿಯಲ್ಲಿ ಮುಖ್ಯವಾಗಿ ಒಂದು ಧಾರ್ಮಿಕ ಕಾರ್ಯ. ಇದರಿಂದ ಇತರ ಪರಿಣಾಮಗಳಾಗುವವೆಂಬುದು ಅಷ್ಟೇ ನಿಜ. ನಿಜವಾಗಿಯೂ ಧಾರ್ಮಿಕ ಕಾರ್ಯವೆನಿಸಿಕೊಳ್ಳುವ ಯಾವ ಒಂದು ಕಾರ್ಯವೂ ಬಾಳಿನ ಇತರ ಅನೇಕ ವಿಭಾಗಗಳ ಮೇಲೆ ಪ್ರಭಾವ ಬೀರದೆ ಇರುವುದಿಲ್ಲ. ಯಾವುದೇ

ಒಂದು ದೊಡ್ಡ ಧಾರ್ಮಿಕ ಆಂದೋಲನವನ್ನು ಗುರುತಿಸಲು ಇರುವ ಪರೀಕ್ಷೆಗಳಲ್ಲಿ ಬಹುಶಃ ಅದೂ ಒಂದು ಎನ್ನಬಹುದು. ಅತ್ಯಂತ ವಿನೀತನಾಗಿ ಆದರೆ ಪೂರ್ಣ ನಂಬಿಕೆಯಿಂದ ಇಷ್ಟನ್ನು ಹೇಳಬಯಸುತ್ತೇನೆ. ನಾನು ಈ ಆಂದೋಲನವನ್ನು ಬೇರೆ ಯಾವುದೇ ಧರ್ಮ ಅಥವಾ ಜಾತಿಯ ವಿರುದ್ಧದ ಭಾವದಿಂದ ಆರಂಭಿಸಿಲ್ಲ. ಕಳೆದ ಐವತ್ತು ವರ್ಷಗಳಲ್ಲಿ ನನ್ನ ಯಾವುದೇ ಒಂದು ಕೆಲಸ ಬೇರೆ ಯಾವ ವ್ಯಕ್ತಿ ಅಥವಾ ಜಾತಿಯ ವಿರುದ್ಧ ನಡೆದುದೆಂದು ತೋರಿಸಲು ಸಾಧ್ಯವೇ ಇಲ್ಲ. ನಾನು ಯಾರನ್ನೂ ಎಂದೂ ನನ್ನ ಶತ್ರುವೆಂದು ನಂಬಿಲ್ಲ. ಯಾರನ್ನೂ ಆ ರೀತಿ ಭಾವಿಸಬಾರದೆಂಬುದೇ ನನ್ನ ಮತ. ಜೀವಂತವಾಗಿರುವ ಯಾವುದಕ್ಕೂ ನಾನು ಕೇಡನ್ನು ಬಯಸುವುದಿಲ್ಲ. ಹಿಂದೂಗಳ ಹೃದಯ ಅಸ್ಪೃಶ್ಯತೆಯ ಕಳಂಕದಿಂದ ಪೂರ್ಣವಾಗಿ ಶುದ್ಧವಾದರೆ ಅದು ಭಾರತದ ಎಲ್ಲ ಜಾತಿಗಳ ಮೇಲೂ ಅನಿವಾರ್ಯ ಪ್ರಭಾವವನ್ನು ಬೀರುವುದಲ್ಲದೆ ಇಡಿಯ ಜಗತ್ತಿನ ಮೇಲೂ ಪ್ರಭಾವವನ್ನು ಬೀರಬಲ್ಲದು, ಎಂಬುದು ಧೃಡವಾದ ನಂಬಿಕೆ. ಈ ನಂಬಿಕೆ ನನ್ನಲ್ಲಿ ದಿನಕಳೆದಂತೆ ಹೆಚ್ಚುತ್ತಿದೆ. ಹಿಂದೂಗಳ ಹೃದಯದಿಂದ ಮೇಲು ಮತ್ತು ಕೀಳು ಎಂಬ ತಾರತಮ್ಯವನ್ನು ತೊಡೆದು ಹಾಕುವ ಕ್ರಿಯೆಯೇ ನಮ್ಮಲ್ಲಿರುವ ಪರಸ್ಪರ ಅಸೂಯೆಗಳನ್ನೂ ಮತ್ತು ಇತರ ಜಾತಿಗಳ ಬಗೆಗಿನ ಅಪನಂಬಿಕೆಗಳನ್ನೂ ಇಲ್ಲದಂತೆ ಮಾಡಬೇಕು. ಈ ಕಾರಣದಿಂದಲೇ ಈ ಉದ್ದೇಶಕ್ಕೆ ನನ್ನ ಬಾಳನ್ನು ಪಣವಾಗಿ ಇಟ್ಟಿದ್ದೇನೆ. ಅಸ್ಪೃಶ್ಯತೆಯ ವಿರುದ್ಧ ನಡೆಸುವ ನನ್ನ ಈ ಹೋರಾಟದ ಮೂಲಕ ಹಿಂದೂ ಸ್ಪಶ್ಯರು ಮತ್ತು ಹಿಂದೂ ಅಸ್ಪೃಶ್ಯರು ಇವರುಗಳ ನಡುವೆ ಮಾತ್ರವೇ ಅಲ್ಲದೆ ಹಿಂದೂಗಳು, ಮುಸ್ಲಿಮರು, ಕ್ರೈಸ್ತರು ಹಾಗೂ ಇತರ ಭಿನ್ನಮತೀಯ ಪಂಥಗಳವರೊಡನೆಯೂ ಐಕ್ಯ ಸಾಧಿಸಲುಯತ್ನಿಸುತ್ತಿದ್ದೇನೆ. ಹಿಂದೂಗಳ ಸಂಖ್ಯಾಶಕ್ತಿಯಲ್ಲಿ ನಾನು ಆಸಕ್ತಿಯುಳ್ಳವನಾಗಿದ್ದೇನೆಂಬುದನ್ನು ನೀವು ಸ್ವಲ್ಪವೂ ನಂಬಬೇಡಿ. ನಾನು ಯಾವಾಗಲೂ ಗಾತ್ರವನ್ನು ಬದಿಗೊತ್ತಿ ಗುಣವನ್ನೇ ಎತ್ತಿ ಹಿಡಿದಿದ್ದೇನೆ.ನಾನು ಹತ್ತು ಲಕ್ಷ ಖೋಟಾನಾಣ್ಯವನ್ನು ಶೇಖರಿಸಿದರೆ ಅದು ನನಗೆ ಬೆಲೆಯಿಲ್ಲದ ಹೊರೆಯಾಗುತ್ತದೆ. ಅದಕ್ಕೆ ಪ್ರತಿಯಾಗಿ ಒಂದು ಸಾಚಾ ನಾಣ್ಯ ತನ್ನ ಬೆಲೆಯನ್ನು ಹೊಂದಿರುತ್ತದೆ. ಒಂದು ಮತಧರ್ಮದ ಅನುಯಾಯಿಗಳು ಅದರ ತತ್ವಗಳನ್ನು ತಮ್ಮ ಜೀವನದಲ್ಲಿ ನಿರಾಕರಿಸಿ, ಕೇವಲ ಹೆಸರಿಗೆ ಮಾತ್ರ ಎಷ್ಟು ಸಂಖ್ಯೆಯಿಂದ ಇದ್ದರೂ ಅದನ್ನು ರಕ್ಷಿಸಲಾರರು. ಈ ಪ್ರಸಿದ್ಧ ಹಿಂದೂ ಧರ್ಮ ಇಂಥ ಲಕ್ಷಾಂತರ ಅನುಯಾಯಿಗಳಿಂದ ಕೂಡಿದ್ದರೂ ಅಸ್ಪೃಶ್ಯತೆಯ ಪಾಪವನ್ನು ತನ್ನಲ್ಲಿ ಬಚ್ಚಿಟ್ಟುಕೊಂಡು ಮುಂದುವರೆದರೆ, ನಾಶವೇ ಆದೀತು. ಇದು ಅಸ್ಪೃಶ್ಯರು ಲಕ್ಷಾಂತರ ಮಂದಿ ಇರುವರೆಂಬ ಕಾರಣಕ್ಕಲ್ಲ. ಅವರು ಒಂದೇ ಹಿಡಿ ಜನ ಇದ್ದರೂ ಅದು ನಾಶವಾದೀತು. ಹಾಲಿಗೆ ಗೌರೀಪಾಷಾಣವನ್ನು ಸ್ವಲ್ಪ ಹಾಕಿರಲಿ ಅಥವಾ ಹೆಚ್ಚು ಹಾಕಿರಲಿ, ಅದು ವಿಷಪೂರಿತವಾಗುವುದರಿಂದ ಅದನ್ನು ಚೆಲ್ಲಿಬಿಡಬೇಕು. ನಾವೆಲ್ಲ ಒಬ್ಬನೇ ದೇವನ ಮಕ್ಕಳೆಂದು ನಂಬುವುದಾದರೆ ಆ ದೇವರು ಸತ್ಯ ಮತ್ತು ನ್ಯಾಯ ಸ್ವರೂಪನೆನ್ನುವುದಾದರೆ ಅವನ ಮಕ್ಕಳಾದ ನಮ್ಮಲ್ಲಿ ಅಸ್ಪೃಶ್ಯತೆ ಹೇಗೆ ಇರಲು ಸಾಧ್ಯ? ಸತ್ಯ ಮತ್ತು ನ್ಯಾಯಗಳ ಸ್ವರೂಪಿಯಾದ ದೇವರು ತನ್ನ ಸ್ವಂತ ಮಕ್ಕಳಲ್ಲಿ ಮೇಲು-ಕೀಳು ಎಂಬ ತಾರತಮ್ಯಗಳನ್ನು ಎಂದಿಗೂ ಸೃಷ್ಟಿಸಲಾರ. ಆದುದರಿಂದ

ನಾವೆಲ್ಲ ಶಾಂತಿ ಮತ್ತು ಸ್ನೇಹಭಾವದಿಂದ ಜೀವಿಸುವ ಸಲುವಾಗಿ, ಎಲ್ಲರೂ ಕುಲ ಮತ್ತು ಮತಧರ್ಮಗಳ ವ್ಯತ್ಯಾಸವಿಲ್ಲದೆ, ಈ ಮಹಾ ಆಂದೋಲನಕ್ಕೆ ನೆರವಿತ್ತು ಇದರ ಪೂರ್ಣ ಯಶಸ್ಸಿನ ಸಲುವಾಗಿ ಪ್ರಾರ್ಥಿಸಬೇಕೆಂದು ಆಹ್ವಾನಿಸುತ್ತೇನೆ".

೧೯೩೧ರಲ್ಲಿ ಲಂಡನ್ನಿನಲ್ಲಿ ನಡೆದ ೨ನೇ ದುಂಡುಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಗಾಂಧೀ ಹೋಗಿದ್ದರು. ಅದೇ ಸಮ್ಮೇಳನದಲ್ಲಿ ಭಾಗವಹಿಸಲು ಅಂಬೇಡ್ಕರ್ ಸಹ ಹೋಗಿದ್ದರು. ಹಡಗಿನಲ್ಲಿ ಗಾಂಧೀಯನ್ನು ಪತ್ರಿಕಾಕರ್ತರು ಭೇಟಿಮಾಡಿ ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು. ಅಂಥಹವರಲ್ಲಿ ಎಡಪಂಥೀಯ ಎಂ.ಸ್ಲೋಕಂಬ್ ಎಂಬುವವನು ಕೂಡ ಒಬ್ಬನು. ಅವನು ತನ್ನ ಪತ್ರಿಕೆಯಲ್ಲಿ ಪ್ರಿನ್ಸ್ ಆಫ್ ವೇಲ್ಸ್‌ಗೆ ಗಾಂಧೀ ಅಡ್ಡಬಿದ್ದರು ಎಂದು ಬರೆದಿದ್ದನು. ಅದಕ್ಕೆ ಉತ್ತರವಾಗಿ ಗಾಂಧೀ ಸ್ಲೋಕಂಬ್‌ಗೆ ಈ ರೀತಿ ಹೇಳಿದರು. 'ಕಡು ಬಡವನಾದ ಜಲಗಾರನ ಮುಂದೆ, ಕಡುಬಡವನಾದ ಭಾರತೀಯ ಅಸ್ಪೃಶ್ಯನ ಮುಂದೆ, ಮಂಡಿಯೂರುತ್ತೇನೆ. ಏಕೆಂದರೆ ಶತಮಾನಗಳಿಂದಲೂ ಅವರನ್ನು ಶೋಸುತ್ತಿರುವಂತವರಲ್ಲಿ ನಾನೂ ಭಾಗಿಯಾದುದಕ್ಕಾಗಿ, ನಾನವನ ಪಾದ ದೂಳಿಯನ್ನು ಒರೆಸುತ್ತೇನೆ ಪ್ರಿನ್ಸ್ ಆಫ್ ವೇಲ್ಸ್ ಮಾತು ಹಾಗಿರಲಿ, ನಾನು ನಿಮ್ಮ ರಾಜನ ಮುಂದೆಯೂ ಅಡ್ಡ ಬೀಳುವುದಿಲ್ಲ ಏಕೆಂದರೆ ಅವರು ನಿರಂಕುಶ ಶಕ್ತಿಯ ಪ್ರತಿನಿಧಿಯಾಗಿದ್ದಾರೆ. ಆನೆಯ ಕಾಲಿಗೆ ಕಟ್ಟಿತುಳಿಸಲಿ, ಅವರ ಮುಂದೆ ನಾನು ಅಡ್ಡ ಬೀಳುವುದಿಲ್ಲ ಆದರೆ ನಾನು ಅರಿಯದೆ ತುಳಿದ ಇರುವೆಯ ಮುಂದೆ ತಪ್ಪಾಯಿತೆಂದು ಕೊಂಡು ನಮಸ್ಕಾರ ಮಾಡಲು ಎಂದೂ ಸಿದ್ಧ" ಎಂದರು ಗಾಧೀಜಿ.

ಗಾಂಧೀಯವರ ಈ ಎಲ್ಲಾ ಮಾತನ್ನು ಓದಿದಾಗ ಈ ಕೆಳಗಿನ ಮಾತುಗಳು ನಮ್ಮ ಗಮನಕ್ಕೆ ಬರುತ್ತದೆ :-

೧) ಹಿಂದೂ ಧರ್ಮದಿಂದ ಅಸ್ಪೃಶ್ಯತೆಯನ್ನು ಕಡ್ಡಾಯವಾಗಿ ತೆಗೆದು ಹಾಕ ಬೇಕೆಂದು ಗಾಂಧೀ ಬಯಸಿದ್ದರು. ೨) ಗಾಂಧೀ ಯಾರನ್ನೂ ಎಂದೂ ತಮ್ಮ ಶತ್ರುವೆಂದು ನಂಬಿರಲಿಲ್ಲ ಆ ರೀತಿ ಭಾವಿಸಬಾರದೆಂಬುದು ಅವರ ಮತವಾಗಿತ್ತು. ೩) ಹಿಂದೂ ಸ್ಪೃಶ್ಯರು ಮತ್ತು ಹಿಂದೂ ಅಸ್ಪೃಶ್ಯರು ಇವರುಗಳ ನಡುವೆ ಮಾತ್ರವೇ ಅಲ್ಲದೆ ಹಿಂದೂಗಳು, ಮುಸ್ಲಿಂರು, ಕ್ರೈಸ್ತರು ಹಾಗೂ ಇತರ ಭಿನ್ನಮತೀಯ ಪಂಥಗಳವರೊಡನೆಯೂ ಐಕ್ಯ ಸಾಧಿಸುವ ಪ್ರಯತ್ನ ಗಾಂಧೀಯವರದಾಗಿತ್ತು. ೪) ಅಸ್ಪೃಶ್ಯರಲ್ಲಿಯೇ ಇದ್ದ ಅಸ್ಪೃಶ್ಯತಾಚರಣೆಯನ್ನೂ ತೆಗೆದು ಹಾಕಬೇಕೆಂಬುದು ಸಹ ಗಾಂಧೀಯವರ ಉದ್ಯೇಶ್ಯವಾಗಿತ್ತು.

ಇನ್ನು ಡಾ॥ ಅಂಬೇಡ್ಕರರ ವಿಚಾರವನ್ನು ತಿಳಿಯೋಣ

೧) ಜಾತಿಪದ್ಧತಿ ಹಿಂದೂಗಳನ್ನು ಹಾಳುಗೆಡವಿದೆ ೨) ಚಾತುರ್ವರ್ಣದ ಮೇರೆಗೆ ಹಿಂದೂ ಸಮಾಜವನ್ನು ಸಂಘಟಿಸುವುದು ಅಸಾಧ್ಯ ೩) ಸ್ವಾತಂತ್ರ್ಯ, ಸಮಾನತೆ ಹಾಗೂ ಭಾತೃತ್ವವನ್ನೊಳಗೊಂಡ ಧರ್ಮವನ್ನು ಆಧರಿಸಿಯೆ ಹಿಂದೂ ಸಮಾಜದ ಪುನರ್‌ನಿರ್ಮಾಣವಾಗತಕ್ಕದ್ದು. ಈ ಗುರಿಯನ್ನು ಸಾಧಿಸಬೇಕಾದರೆ ಜಾತಿ ಹಾಗೂ ವರ್ಣಗಳ ಬಗೆಗಿರುವ ಗೌರವ ಭಾವನೆ ನಷ್ಟವಾಗತಕ್ಕದ್ದು. ಹಿಂದೂ ಸಮಾಜಕ್ಕೆ ನೈತಿಕ ಪುನರ್ಜನ್ಮ ಈಗ ಅತ್ಯಂತ ಅವಶ್ಯಕವೆಂದು ನನಗೆ ತೋರುತ್ತದೆ.

ಇದನ್ನು ಕೂಡಲೇ ಸಾಧಿಸದೆ ಮುಂದೂಡುವುದು ಅಪಾಯಕಾರಿಯಾದೀತು.

ಅಂಬೇಡ್ಕರ್‌ರ ಮತ್ತು ಗಾಂಧಿಯವರ ವಿಚಾರಗಳಲ್ಲಿ ಸಾಮ್ಯ ಎಷ್ಟಿದೆ ಮತ್ತು ಅದು ಎಷ್ಟು ತೀವ್ರತಮವಾಗಿದೆ ಎಂಬುದು ಮೇಲಿನ ಅವರಿಬ್ಬರ ಮಾತುಗಳಿಂದ ಸ್ಪಷ್ಟವಾಗುತ್ತದೆ.

ಹಿಂದೂ ಧರ್ಮವನ್ನು ಅಸ್ಪೃಶ್ಯತೆಯ ಪಾಪದಿಂದ ಮುಕ್ತ ಮಾಡಲೆಂದಲ್ಲವೆ ಗಾಂಧೀ ೧೯೩೨ ರಲ್ಲಿ ಯರವಾಡ ಜೈಲಿನಲ್ಲಿದ್ದುಕೊಂಡೇ ಆಮರಣಾಂತ ಉಪವಾಸ ಮಾಡಿ ಸನಾತನ ಹಿಂದೂಗಳ ಮನಸ್ಸನ್ನು ಮತ್ತು ವಿಚಾರವನ್ನು ಪರಿವರ್ತಿಸಿದ್ದು? ಗಾಂಧೀಯವರ ಈ ಉಪವಾಸದ ಕಾರಣದಿಂದಾಗಿ ಸಾವಿರಾರು ವರ್ಷಗಳಿಂದ ಅಸ್ಪೃಶ್ಯರಿಗೆ ಪ್ರವೇಶ ನಿಷೇಧವಿದ್ದ ಭಾರತದ ಎಲ್ಲಾ ದೇವಾಲಯಗಳು ಅಸ್ಪೃಶ್ಯರಿಗೆ ತೆರೆಯಲ್ಪಟ್ಟದ್ದು? ಅಲ್ಲದೆ, ಅಸ್ಪೃಶ್ಯರಿಗೆ ಪ್ರವೇಶ ಬೇಕೆ, ಬೇಡವೆ ಎಂಬ ಬಗ್ಗೆ ಮತಹಾಕಲು ಹೇಳಿದಾಗ ಒಂದು ಮತಪೆಟ್ಟಿಗೆಯಲ್ಲಿ ಪ್ರವೇಶದ ಪರ ೨೪,೭೯೭ ಮತಗಳು ಮತ್ತು ವಿರೋಧವಾಗಿ ೪೪೫ ಮತಗಳು ಬಿದ್ದವು. ೬ ದಿನಗಳ ಕಠಿಣ ಉಪವಾಸದ ನಂತರ ಗಾಂಧೀ ಕುಮಾರಿ ಸ್ಲೇಡ್‌ಗೆ ಬರೆದ ಒಂದು ಪತ್ರದಲ್ಲಿ ತಮ್ಮ ಉಪವಾಸದ ಬಗ್ಗೆ ಹೀಗೆ ಹೇಳಿದ್ದಾರೆ. "ಅಸ್ಪೃಶ್ಯರು ಶತಮಾನಗಳಿಂದ ಅನುಭವಿಸಿದ ನೋವುಗಳೊಂದಿಗೆ ಹೋಲಿಕೆ ಮಾಡಿದರೆ ನನ್ನ ಉಪವಾಸ ತೀರಾ ಸಾಮಾನ್ಯವಾದುದು. ದೇವರನಾಮವನ್ನು ಗುಣಗುಡಿಸತ್ತಲೇ ಹೋಗುತ್ತೇನೆ. ದೇವರು ದೊಡ್ಡವನು ಮತ್ತು ದಯಾವಂತ".

ಉಪವಾಸಾನಂತರವೂ ಗಾಂಧೀ ಕಾರಾಗೃಹದಲ್ಲೆ ಉಳಿದರು. ತಮ್ಮ ಸಾಬರಮತಿ ಆಶ್ರಮವನ್ನು ಅಸ್ಪೃಶ್ಯರ ಒಂದು ಮಿತ್ರ ಮಂಡಳಿಗೆ ವಹಿಸಿಕೊಟ್ಟರು. ಅಲ್ಲದೆ ೧೦ ತಿಂಗಳಕಾಲ ಹರಿಜನೋದ್ಧಾರಕ್ಕಾಗಿ ಅವ್ಯಾಹತವಾಗಿ ಭಾರತ ದೇಶದಲ್ಲಿ ಸುತ್ತಿದರು. ಒಂದೇ ಒಂದು ದಿನದ ಮಟ್ಟಿಗೂ ಅವರು ಮನೆಗೆ ಹಿಂದಿರುಗಲಿಲ್ಲ.

ಪೂನಾ ಒಪ್ಪಂದದ ಸಂದರ್ಭದಲ್ಲಿ ಗಾಂಧೀ ಆಮರಣಾಂತ ಉಪವಾಸ ಕೈಗೊಂಡು ಅಂಬೇಡ್ಕರರ ಮೇಲೆ ಸಲ್ಲದ ಒತ್ತಡ ತಂದು ಪರಿಶಿಷ್ಟ ಜಾತಿ ಹಾಗೂ ಅಸ್ಪೃಶ್ಯರಿಗೆ ದೊರೆಯಬಹುದಾಗಿದ್ದ ರಾಜಕೀಯ ಲಾಭಗಳನ್ನು ತಪ್ಪಿಸಿದರೆಂಬ ಭಾವನೆ ಅನೇಕರಲ್ಲಿದೆ. ಆದರೆ ಹಿಂದೂ ಧರ್ಮದ ಅವಿಭಾಜ್ಯ ಕುಪದ್ಧತಿಯಾಗಿದ್ದ ಅಸ್ಪೃಶ್ಯತಾ ಆಚರಣೆಯನ್ನು ನಿವಾರಿಸಲು ಅಂಬೇಡ್ಕರ್ ಎಷ್ಟು ಕಂಕಣಬದ್ದರಾಗಿದ್ದರೋ ಅಷ್ಟೇ ಕಂಕಣಬದ್ಧರಾಗಿದ್ದರು ಗಾಂಧೀ ಸಹ. ಅಂಬೇಡ್ಕರ್ ತಮ್ಮ ಒಂದು ಭಾಷಣದಲ್ಲಿ ಹಿಂದೂ ಧರ್ಮಕ್ಕಿಂತ ಅದರಲ್ಲಿರುವ ಅಸ್ಪೃಶ್ಯತಾ ಆಚರಣೆಯನ್ನು ತಾವು ವಿರೋಧಿಸುವುದಾಗಿ ಹೇಳಿದ್ದಾರೆ. ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಇರುವ ಸಮಾಜದ ನಿರ್ಮಾಣದ ಕಲ್ಪನೆಯನ್ನು ಅಂಬೇಡ್ಕರ್ ಹೊಂದಿದ್ದರು. ಇದಕ್ಕೆ ವಿರೋಧವಾದ ಕಲ್ಪನೆಯನ್ನೇನೂ ಗಾಂಧೀ ಹೊಂದಿರಲಿಲ್ಲ. ಆದ್ದರಿಂದಲೇ ಗಾಂಧೀಯವರ ಆಮರಣ ಉಪವಾಸದ ಕಾಲದಲ್ಲಿ ಅಂಬೇಡ್ಕರ್ ಪೂನಾ ಒಪ್ಪಂದಕ್ಕೆ ಒಪ್ಪಿದ್ದು, ಹಿಂದೂ ಧರ್ಮದ ಹಿತಕ್ಕಾಗಿಯೇ ಹೊರತು ಗಾಂಧಿಯನ್ನು ಉಳಿಸಲು ಅಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಉಪವಾಸದ ಸಂದರ್ಭದಲ್ಲಿ ಗಾಂಧೀಯವರು ಅಂಬೇಡ್ಕರರಿಗೆ ಹೇಳಿದ ಈ ಮಾತು ಅಂಬೇಡ್ಕರರನ್ನು ಯೋಚನೆಗೊಳಪಡಿಸಿರಬೇಕು. "ನನಗೆ ನಿಮ್ಮ ಮೇಲೆ

ಯಾವ ಕೋಪವೂ ಇಲ್ಲ. ನೀವು ಅಸಭ್ಯ ಮತ್ತು ಕೋಪದ ಶಬ್ದಗಳನ್ನು ನನ್ನ ಬಗ್ಗೆ ಹೇಳಿದಾಗ ನಾನು ಅವುಗಳಿಗೆ ಯೋಗ್ಯನೆಂದೇ ಅಂದುಕೋಳ್ಳುತ್ತೇನೆ. ನೀವು ನನ್ನ ಮುಖಕ್ಕೆ ಉಗಿದರೂ ಸಹ ನಾನು ಕೋಪಗೊಳ್ಳುವುದಿಲ್ಲ. ನಾನು ಈ ಮಾತನ್ನು ದೇವರನ್ನು ಸಾಕ್ಷಿಯನ್ನಾಗಿಟ್ಟು ಹೇಳುತ್ತಿದ್ದೇನೆ. ನೀವು ಅಸ್ಪೃಶ್ಯತೆಯೆಂಬ ವಿಷವನ್ನು ಬಹಳಷ್ಟು ಕುಡಿದಿದ್ದೀರೆಂದು ನನಗೆ ಗೊತ್ತು, ಆದಾಗ್ಯೂ ನಿಮಗೆ ಅಚ್ಚರಿಯನ್ನುಂಟು ಮಾಡುವ ಒಂದು ನನ್ನ ಹಕ್ಕನ್ನು ನಿಮ್ಮ ಮುಂದೆ ಇರಿಸುತ್ತೇನೆ. ನೀವು ಅಸ್ಪೃಶ್ಯರಾಗಿ ಹುಟ್ಟಿದ್ದೀರಿ ಆದರೆ ನಾನು ದತ್ತು ಸ್ವೀಕಾರದ ಅಸ್ಪೃಶ್ಯನಾಗಿದ್ದೇನೆ. ಆದ್ದರಿಂದ ಅಸ್ಪೃಶ್ಯರೆಲ್ಲರ ಹಿತದ ಬಗ್ಗೆ ನನಗೆ ಹೆಚ್ಚು ಕಾಳಜಿ ಇದೆ."

ಈ ಮಾತನ್ನು ಬರೆಯುವಾಗ ಡಾ॥ ಅರವಿಂದ ಮಾಲಗತ್ತಿಯವರ ಸಂಪಾದಕತ್ವದ "ಡಾ॥ ಅಂಬೇಡ್ಕರ್ ವಿಚಾರಧಾರೆ" ಎಂಬ ಪುಸ್ತಕದಲ್ಲಿ ಬಂದಿರುವ ಈ ಮಾತುಗಳು ಸಹಜವಾಗಿಯೇ ನೆನಪಾಗುತ್ತವೆ. "ಭಾರತದ ಎರಡು ಮಹಾಪುತ್ರರು ಗಾಂಧೀ ಮತ್ತು ಅಂಬೇಡ್ಕರ್. ಅವರು ತಮ್ಮ ಹೋರಾಟಕ್ಕೆ ಹಿಡಿದ ಮಾರ್ಗ ಪರಸ್ಪರ ಭಿನ್ನವಾದವು. ಆದರೆ ಅವರು ಧರಿಸಿದ್ದ ಧ್ಯೇಯ ಮಾತ್ರ ಭವ್ಯವಾದದ್ದು. ಧರಿಸಿಕೊಂಡ ಆ ಧ್ಯೇಯ ಸಾಧನೆಯಲ್ಲಿ ಕೋಪತಾಪಗಳು ಉದ್ಭವಿಸಿದ್ದು ಸಹಜ. ಆದರೆ ಅಳೆದು ಹೇಳಲಸಾಧ್ಯವಾದ ಅವರ ಕಾರ್ಯನಿಷ್ಠೆ, ವಿಚಾರ ಸಮನ್ವಯ ಇವೆಲ್ಲವೂ ಭಾರತವನ್ನು ಒಂದು ಸಮರ್ಥಶಾಲಿ ರಾಷ್ಟ್ರವನ್ನಾಗಿ ಕಟ್ಟಿ, ಲೋಕದಲ್ಲೇ ಶಾಂತಿ ಸೌಹಾರ್ದಕ್ಕೆ ಹೆಸರಾದ ಏಕಮಾತ್ರ ರಾಷ್ಟ್ರವನ್ನಾಗಿ ಕಟ್ಟುವ ಸಲುವಾಗಿಯೇ ಈ ಎರಡು ಮಹಾವೀರರ ನಿರಂತರ ಹೋರಾಟ ನಡೆದದ್ದು. ಇಂದು ಭಾರತ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿದೆ. ಲೋಕದಲ್ಲಿ ತನ್ನ ಬದುಕಿಗಾಗಿ ಭಾರತ ಮಾರ್ಕ್ಸ್ ಮತ್ತು ಮಾವೊತ್ಸೆತುಂಗರು ನಿರ್ಮಿಸಿದ ಹಾದಿಯಲ್ಲಿ ನಡೆಯ ಬೇಕು. ಇಲ್ಲವೇ ಗಾಂಧೀ ಮತ್ತು ಅಂಬೇಡ್ಕರ್ ನಿರ್ಮಿಸಿರುವ ಮಾರ್ಗವೇ ತನಗೆ ಏಕೈಕ ಪರ್ಯಾಯ ಮಾರ್ಗ ಎಂಬುದನ್ನು ತಿಳಿಯ ಬೇಕು.. ಡಾ॥ ಬಾಬಾ ಸಾಹೇಬ್ ಅಂಬೇಡ್ಕರ್ ಲೋಕದಲ್ಲಿ ಯಾರನ್ನೂ ದ್ವೇಷಿಸಲಿಲ್ಲ.

ಪೂನಾ ಒಪ್ಪಂದದ ಮೂಲಕ ಗಾಂಧೀ ಅಸ್ಪೃಶ್ಯರ ರಾಜಕೀಯ ಏಳಿಗೆಯ ದಮನ ಮಾಡಿದರೆಂದು ಅಂಬೇಡ್ಕರ್ ಖಡಾಖಂಡಿತವಾಗಿ ಬಹಿರಂಗವಾಗಿ ತಮ್ಮ ಯಾವ ಭಾಷಣದಲ್ಲೂ, ಬರಹದಲ್ಲೂ ಹೇಳಿದ್ದಾಗಲಿ ಬರೆದಿದ್ದಾಗಲಿ ತಿಳಿದುಬಂದಿಲ್ಲ. ಆದರೂ ಸಹ ಕೆಲ ಬುದ್ಧಿಜೀವಿಗಳು ಪೂನಾ ಒಪ್ಪಂದದಲ್ಲಿ ಅದರಲ್ಲಿರುವ ಅರ್ಥಕಿಂತಲೂ ಹೆಚ್ಚಿನ ಅರ್ಥವನ್ನು ಹುಡುಕಲು ಹೊರಟಿದ್ದು ಆ ಇಬ್ಬರು ನಾಯಕರಿಗೆ ಮಾಡುವ ಅನ್ಯಾಯ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದ್ದು ಅಸ್ಪೃಶ್ಯತಾ ನಿವಾರಣೆಯನ್ನು ಗಾಂಧೀ ಹೃದಯ ಪರಿವರ್ತನೆಯ ಮೂಲಕ ಮಾಡಲು ಪ್ರಯತ್ನಿಸಿದ್ದರೆ ಅನೇಕ ಸಲ ಅಂಬೇಡ್ಕರ್‌ರು ಸಾಮಾಜಿಕ ಪರಿವರ್ತನೆ ಶಾಸನಗಳಿಂದ ಸಾಧ್ಯವಿಲ್ಲವೆಂದು ಹೇಳಿದ್ದುಂಟು.

ಡಾ॥ ಅಂಬೇಡ್ಕರ್ ಗಾಂಧೀಯಿಂದ ದೂರ ಇದ್ದರೆಂದು ಕೆಲವೊಂದು ಸಲ ಅನಿಸಿದರೂ ನಿಜವಾಗಿ ಅವರು ಗಾಂಧೀಗೆ ಹತ್ತಿರದವರೇ ಆಗಿದ್ದರು.

ಬಸವ ಪ್ರಶಸ್ತಿ ನಿರಾಕರಣೆ

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ೨೦೧೦ನೇ ಸಾಲಿಗೆ ಬಸವ ಪ್ರಶಸ್ತಿಯನ್ನು ಘೋಷಿಸಿತ್ತು. ಆದರೆ ಮೇಧಾ ಪಾಟ್ಕರ್ ಆ ಪ್ರಶಸ್ತಿಯನ್ನು ನಿರಾಕರಿಸಿ ಕೆಲ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಬೇರೆ ಸಾಮಾಜಿಕ ಹೋರಾಟಗಾರರಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಅವರು ತಮ್ಮ ನಿರಾಕರಣೆಯ ಸಂದರ್ಭದಲ್ಲಿ ಕೊಟ್ಟ ಹೇಳಿಕೆಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯ ಹೀಗಿದೆ :-

ಹನ್ನೆರಡನೇ ಶತಮಾನದಲ್ಲಿ ಸಾಮಾಜಿಕ ಬದಲಾವಣೆ, ಸುಧಾರಣೆ ಮತ್ತು ಧಾರ್ಮಿಕ ಐಕ್ಯತೆಗಾಗಿ ಕೆಲಸಮಾಡಿದ ಕವಿ, ತತ್ವಜ್ಞಾನಿ ಮತ್ತು ಕ್ರಾಂತಿ ಸಂತ ಬಸವೇಶ್ವರರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಕೊಡುವ ಬಸವ ಪ್ರಶಸ್ತಿಯನ್ನು ಸ್ವೀಕರಿಸುವುದು ಗೌರವದ ವಿಷಯವಾಗಬಹುದಿತ್ತು. ಆದರೆ ನಾನು ಸಂಬಂಧವಿರಿಸಿಕೊಂಡಿರುವ ವಿವಿಧ ಪ್ರಕಾರದ ಚಳುವಳಿಗಳ ಅಭಿಪ್ರಾಯದಂತೆ ಕರ್ನಾಟಕ ಸರ್ಕಾರವು ಗಣಿಗಾರಿಕೆ ಮತ್ತು ಇತರ ಕರ್ಮಕಾಂಡಗಳನ್ನು ನಿಭಾಯಿಸುವುದರಲ್ಲಿ ವಿಫಲವಾಗಿದೆ. ಲೋಕಾಯುಕ್ತ ವಿವಾದ ಇನ್ನೂ ಪರಿಹಾರಗೊಂಡಿಲ್ಲ. ರೈತರು, ಶ್ರಮಿಕರು ಅಸಂಘಟಿತ ಕ್ಷೇತ್ರದ ಕೆಲಸಗಾರರು, ಸ್ಲಂ ನಿವಾಸಿಗಳು ಮುಂತಾದವರ ಹಿತಕ್ಕಾಗಿ ನಡೆಯುತ್ತಿರುವ ಜನತಾ ಚಳುವಳಿಗಳ ಬಗ್ಗೆ ಸರ್ಕಾರದ ನೀತಿ ಸಮಂಜಸವಾಗಿಲ್ಲ. ಅಂತೆಯೇ ವಿರಳವಾಗುತ್ತಿರುವ ನೈಸರ್ಗಿಕ ಸಂಪನ್ಮೂಲಗಳಾದ ಭೂಮಿ, ನೀರು, ಕಾಡು ಮತ್ತು ಖನಿಜಗಳ ಖಾಸಗೀಕರಣ ಮತ್ತು ಕಾರ್ಪೋರೇಟೀಕರಣದ ಪ್ರಯತ್ನ ಇತ್ಯಾದಿ ಕಾರಣಗಳಿಂದ ತುಂಬ ನಮ್ರತೆಯಿಂದ ಸರ್ಕಾರ ಕೊಡಬೇಕೆಂದಿರುವ ಪ್ರಶಸ್ತಿಯನ್ನು ಸ್ವೀಕರಿಸಲು ನನ್ನ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಈ ಪ್ರಶಸ್ತಿಯನ್ನು ಇನ್ನು ಯಾವುದೇ ಕ್ರಿಯಾಶೀಲ ವ್ಯಕ್ತಿಗೆ ಕೊಡಬಹುದಾಗಿದೆ.

ಬಸವ ಪ್ರಶಸ್ತಿಯು ಸಂತ ಬಸವೇಶ್ವರ ಪ್ರತಿಪಾದಿಸಿದ್ದ ಸಾಮಾಜಿಕ ಪರಿವರ್ತನೆ ಮತ್ತು ಮೌಲ್ಯಗಳ ಸಂವರ್ಧನೆಗಾಗಿ ಕೆಲಸ ಮಾಡಿದ್ದಕ್ಕಾಗಿ ಹತ್ತು ಲಕ್ಷ ರುಪಾಯಿ ನಗದು ಮತ್ತು ಪ್ರಮಾಣ ಪತ್ರ ಇತ್ಯಾದಿಯನ್ನು ಒಳಗೊಂಡಿದೆ.

ಮೇಧಾ ಪಾಟ್ಕರ್ ಲೋಕಶಕ್ತಿ ಅಭಿಯಾನದ ನಾಲ್ಕನೇ ಹಂತವನ್ನು ಪ್ರಾರಂಭಿಸಿದ್ದಾರೆ. ಅದು ಫೆಬ್ರವರಿ ೬ನೇ ತಾರೀಖಿನಿಂದ ಮುಂಬಯಿನಿಂದ ಪ್ರಾರಂಭವಾಗಿದೆ. ಈ ಅಭಿಯಾನದಲ್ಲಿ ರೈತರು, ಕ್ರಿಯಾಶೀಲರು, ಶಿಕ್ಷಣತಜ್ಞರು ಸೇರಿದ್ದಾರೆ. ಇವರೆಲ್ಲರೂ ಬೇರೆ ಬೇರೆ ರಾಜ್ಯಗಳಿಂದ ಬಂದವರಾಗಿದ್ದಾರೆ. ಈ ಅಭಿಯಾನವು ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ಮೂಲಕ ಕ್ರಮಿಸುವುದಲ್ಲದೇ ಈಗಾಗಲೇ ಉತ್ತರ ಭಾರತದ ಅನೇಕ ರಾಜ್ಯಗಳಿಗೆ ಭೇಟಿಕೊಟ್ಟಿದೆ.

ಉತ್ತರಾಖಂಡದಲ್ಲಿ ಚಿಪ್ಕೋ ಆಂದೋಲನ ಹಬ್ಬಿತು

– ಮೂಲ : ಜಾರ್ಜ್ ಆಲ್‌ಫ್ರೆಡ್ ಜೇಮ್ಸ್ – ಕನ್ನಡಕ್ಕೆ : ಸುರೇಂದ್ರ ಕೌಲಗಿ

(ಕಳೆದ ಸಂಚಿಕೆಯಿಂದ)

ಸುಂದರಲಾಲ್ ಬಹುಗುಣ ಉತ್ತರಾಖಂಡದಲ್ಲಿ ತುಂಬ ಸಕ್ರಿಯವಾಗಿ ಮತ್ತು ಎಲ್ಲರ ಕಣ್ಣಿಗೆ ಬೀಳುವಂಥ ಸರ್ವೋದಯ ಕಾರ್ಯಕರ್ತರಾಗಿ ಕೆಲಸಮಾಡುತ್ತಿದ್ದರು. ಅಲ್ಲಿಯ ಜನರ ದೃಢ ನಿಶ್ಚಯದ ಬಗ್ಗೆ ಅವರಿಗೆ ಬಹಳ ಮೆಚ್ಚುಗೆಯಾಗಿತ್ತು. ಯಾವ ರೀತಿ ಗಾಂಧೀಯವರ ಅಹಿಂಸಾ ತತ್ವ ಸಾಮಾಜಿಕ ಶಕ್ತಿಯ ದ್ಯೋತಕವಾಗಿತ್ತೋ, ಅದೇ ರೀತಿ ಚಿಪ್ಕೋ ಆಂದೋಲನ ಅದೇ ವಿಚಾರದ ಸ್ವಾಭಾವಿಕ ಬೆಳವಣಿಗೆಯೆಂದು ಸುಂದರಲಾಲ್ ಹೇಳುತ್ತಿದ್ದರು; ಹಳ್ಳಿಗರು ಸ್ವತಃ ಕಾಡುಗಳನ್ನು ಅನಾವಶ್ಯಕವಾಗಿ ಹಾಳು ಮಾಡುವುದನ್ನು ತಪ್ಪಿಸಬೇಕೆಂದೂ ಹೇಳುತ್ತಿದ್ದರು. ಮುಂದೊಂದು ದಿನ ಜಾನಪದ ಹಾಡುಗಾರ ಘನಶ್ಯಾಮ ಸೈಲಾನಿ ಮತ್ತು ಇತರರೊಂದಿಗೆ ಚಿಪ್ಕೋ ಸಂದೇಶ ಸಾರಲು ಹಳ್ಳಿಗಳತ್ತ ನಡೆದರು. ಚಿಪ್ಕೋ ಆಂದೋಲನದ ಉದರದಲ್ಲಿ ರೂಪಗೊಳ್ಳುತ್ತಿದ್ದ ಜನಶಕ್ತಿ ಬಗ್ಗೆಯಾಗಲೀ ಆ ಚಳುವಳಿಯ ಆಯಾಮದ ಬಗ್ಗೆಯಾಗಲೀ ಸರ್ಕಾರಕ್ಕೆ ಇನ್ನೂ ಅರಿವಾಗಿರಲಿಲ್ಲ. ಅದೇ ವರ್ಷದ ಜೂನ್ ತಿಂಗಳಲ್ಲಿ ಅರಣ್ಯ ಇಲಾಖೆ ಅಲಕ್‌ನಂದಾ ನದಿಯ ಉಗಮಸ್ಥಾನದ ಬಳಿ ಇರುವ ಪ್ರಸಿದ್ಧ ಕೇದಾರನಾಥ್ ದೇವಸ್ಥಾನದ ಬಳಿ ಬೇರೊಂದು ಪ್ರದೇಶವನ್ನು ಸೈಮಂಡ್ಸ್ ಕಂಪನಿಗೆ ಗುತ್ತಿಗೆಗೆ ಕೊಟ್ಟಿತು. ಈ ವಿಷಯ ದಶೋಲಿ ಗ್ರಾಮ ಸ್ವರಾಜ್ಯ ಸಂಘಕ್ಕೆ ಗೊತ್ತಾಗುತ್ತಲೇ ವಿಪರೀತ ಮಳೆ ಸುರಿಯುತ್ತಿದ್ದರೂ ಬಹು ದೊಡ್ಡ ಪ್ರತಿಭಟನೆ ಏರ್ಪಡಿಸಿತು. ಈ ಪ್ರತಿಭಟನೆಯ ಸಂದರ್ಭದಲ್ಲಿ ಸೇರಿದ್ದ ಜನರು ಒಂದು ಠರಾವನ್ನು ಕೈಗೊಂಡರು. ಮರ ಕಡಿಯಲು ಕಂಪನಿಯ ಆಳುಗಳು ಬಂದದ್ದೇ ಆದರೆ ಮರವನ್ನು ಅಪ್ಪಿಕೊಂಡು ಅವುಗಳನ್ನು ಉಳಿಸಬೇಕು. ಸೈಮಂಡ್ಸ್ ಕಂಪನಿಯ ಏಜೆಂಟ್‌ಗಳು ಆ ಸ್ಥಳಕ್ಕೆ ಬಂದಾಗ ಪ್ರತಿಭಟನಾಕಾರರು ತಮ್ಮ ಕ್ರಿಯಾ ಸಮಿತಿ ರಚಿಸುವುದರಲ್ಲಿ ತೊಡಗಿರುವುದನ್ನು ಕಂಡರು. ಪ್ರತಿಭಟಾಕಾರರು ದಾರಿಯುದ್ದಕ್ಕೂ ಕಾವಲುಗಾರರನ್ನು ನಿಲ್ಲಿಸಿದ್ದರು. ಆ ಕಾವಲುಗಾರರು ಕಂಪನಿಯ ಜನರು ಬರುತ್ತಲೇ ಶಂಖ ಊದಿ ಹಳ್ಳಿಗರನ್ನು ಜಾಗೃತಗೊಳಿಸುತ್ತಿದ್ದರು. ಹಳ್ಳಿಗರು ಮತ್ತು ಕಂಪನಿಯ ಏಜೆಂಟ್‌ಗಳ ನಡುವೆ ಮೂರು ದಿನ ಸತತವಾಗಿ ಘರ್ಷಣೆ ನಡೆಯಿತು. ಮೂರನೇ ದಿನ ಕಂಪನಿಯ ಜನರಿಗೆ ಪ್ರತಿಭಟನಾಕಾರರ ದೃಢನಿಶ್ಚಯ ಮತ್ತು ತಮ್ಮ ಗುರಿಯಿಂದ ಅವರು ವಿಚಲಿತರಾಗುವುದಿಲ್ಲ ಎಂದು ತಿಳಿದು ತಾವು ತೆಗೆದುಕೊಂಡು ಹೋಗಲು ಬಂದಿದ್ದ ಮರಗಳನ್ನು ಕಡಿಯುವ ಆಸೆಯನ್ನು ಬಿಟ್ಟರು ಮತ್ತು ಗೋಪೇಶ್ವರಕ್ಕೆ ಹಿಂದಿರುಗಿ ಜಿಲ್ಲಾ ಅರಣ್ಯಾಧಿಕಾರಿಯಲ್ಲಿ ದೂರನ್ನು ಕೊಟ್ಟರು. ಗುತ್ತಿಗೆ ಕರಾರು ಪ್ರಕಾರ ತಾವು ಜಮಾ ಮಾಡಿದ ಹಣಕ್ಕೆ ಬದಲಾಗಿ ಯಾವುದೇ ಮರವನ್ನು ಕಡಿಯಲಾಗಿಲ್ಲವೆಂದು ಹೇಳಿದರು. ೧೯೭೦ರಲ್ಲಿ ಅರಣ್ಯ ಇಲಾಖೆ

ಮರಗಳ ಹರಾಜಿನ ವಿಚಾರದಲ್ಲಿದ್ದ ತಾರತಮ್ಯ ನೀತಿಯನ್ನು ನಿಲ್ಲಿಸಿರುವುದಾಗಿ ಘೋಷಿಸಿತ್ತು. ಆದರೆ ಈ ಹೊತ್ತಿಗಾಗಲೇ ಚಿಪ್ಕೋ ಆಂದೋಲನ ಬಲಪಡೆಯುತ್ತಿತ್ತು. ಮತ್ತು ಸ್ಥಳೀಯ ಕೈಗಾರಿಕೆಗಾಗಿ ಕಚ್ಚಾ ಪದಾರ್ಥದ ಬೆಲೆ ನಿಗದಿ ಪಡಿಸುವುದಕ್ಕಷ್ಟೇ ಆಂದೋಲನದ ಉದ್ದೇಶ್ಯ ಸೀಮಿತವಾಗಿರಲಿಲ್ಲ. ಜನಸಾಮಾನ್ಯರಲ್ಲಿ ಅದು ಉಂಟುಮಾಡಿದ್ದ ಜಾಗೃತಿವ್ಯಾಪಿಸುತ್ತಿತ್ತು. ಸರಳಾ ಬೆಹನ್ ಮತ್ತು ಸುಂದರಲಾಲ್ ಪತ್ನಿ ವಿಮಲಾ ಒಟ್ಟುಗೂಡಿ ಗ್ರಾಮಾಭಿವೃದ್ಧಿಗಾಗಿ ಸ್ಥಾಪಿಸಿದ್ದ ಉತ್ತರಾಖಂಡ್ ಸರ್ವೋದಯ ಮಂಡಲ ಚುರುಕುಗೊಂಡು ಚಿಪ್ಕೋ ಆಂದೋಲನದೊಂದಿಗೆ ಗುರುತಿಸಿಕೊಂಡು ಕಾಡನ್ನು ಉಳಿಸುವ ಚಳುವಳಿಯಲ್ಲಿ ಭಾಗವಹಿಸಲಾರಂಭಿಸಿತು. ಗಾಂಧೀಯವರ ರಚನಾತ್ಮಕ ಕಾರ್ಯಕ್ರಮದ ದೀರ್ಘಾವಧಿಯ ಕಾರ್ಯಕರ್ತರಾಗಿದ್ದರಿಂದ ಕಾಡುಗಳ ದುಃಸ್ಥಿತಿ ಬಗ್ಗೆ ಸುಂದರಲಾಲ್‌ರು ತುಂಬಾ ಚಿಂತಿತರಾಗಿದ್ದರು. ಆ ಪ್ರದೇಶದ ಹಳ್ಳಿಗರಿಗೆ ಕಾಡುಗಳು ಎಷ್ಟು ಮಹತ್ವದ ಸಂಗತಿ ಎಂಬುದನ್ನು ಅರಿತಿದ್ದರು. ೧೯೭೩ ಅಕ್ಟೋಬರ್ ೨೫ರಂದು ಸ್ವಾಮಿರಾಮತೀರ್ಥರ ಜನ್ಮದಿನವಾಗಿತ್ತು. ಆ ದಿನ ಸುಂದರಲಾಲ್ ಚಿಪ್ಕೋ ಆಂದೋಲನದ ಸಂದೇಶ ವಾಹಕನ ಪಾತ್ರವನ್ನು ತಮಗೆ ಆಹ್ವಾನಿಸಿಕೊಂಡು ಉತ್ತರಾಖಂಡದ ಪರ್ವತಮಯ ಪ್ರದೇಶದಲ್ಲಿ ೧೨೦ ದಿನಗಳ ಪಾದಯಾತ್ರೆಗೆ ಹೊರಟರು. ಈ ಮೊದಲು ಬಹುಗುಣ ಅನೇಕ ಪಾದಯಾತ್ರೆಗಳನ್ನು ಮಾಡಿದ್ದರು. ಆದರೆ ಇತ್ತೀಚೆಗಿನ ಅವರ ಪಾದಯಾತ್ರೆಗಳು ಹೆಚ್ಚು ಜನರ ಗಮನಕ್ಕೆ ಬರುವಂಥದ್ದಾಗಿದ್ದವು. ಬಹು ದೊಡ್ಡ ಸಂಖ್ಯೆಯ ಯುವಕರು ಭಾಗವಹಿಸಲಾರಂಭಿಸಿದರು. ಕ್ರಮೇಣ ಪಾದಯಾತ್ರೆ ದೊಡ್ಡ ರ‍್ಯಾಲಿಯಾಗಿ ರೂಪಗೊಳ್ಳಲಾರಂಭಿಸಿತು. ಈ ಪಾದಯಾತ್ರೆಗಳ ಕಾರಣದಿಂದ ಸುಂದರಲಾಲ್‌ರಲ್ಲಿದ್ದ ಭಾಷಣ ಕಲೆ ಇನ್ನಷ್ಟು ಪ್ರಖರವಾಗಿ ಯಾತ್ರೆಗೆ ಇನ್ನಷ್ಟು ಬಲ ತಂದುಕೊಟ್ಟಿತು. ಸುಂದರಲಾಲ್ ತಮ್ಮ ಭಾಷಣದಲ್ಲಿ ಹಳ್ಳಿಗರ ಸಂಕೀರ್ಣ ಆರ್ಥಿಕ ವಿಷಯಗಳನ್ನೂ ಮತ್ತು ಪರಿಸರದ ವಿಚಾರಗಳನ್ನೂ ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ಹೇಳುವ ಕಲೆ ಬೆಳಸಿಕೊಂಡರು.

ಜನರಿಗೆ ಸುಂದರಲಾಲ್ ಓರ್ವ ಅಹಿಂಸಾ ವಿಚಾರವನ್ನು ಇಟ್ಟುಕೊಂಡು ಸ್ಥಳೀಯ ಜನರ ಏಳಿಗೆಗಾಗಿ ಕಟಿಬದ್ಧನಾದ ಸರ್ವೋದಯ ಕಾರ್ಯಕರ್ತನೆಂದು ಗೊತ್ತಾದುದರಿಂದ ಅವರ ವ್ಯಕ್ತಿತ್ವದ ವಿಶ್ವಾಸನೀಯತೆ ಎಲ್ಲರಿಗೂ ಮಾನ್ಯವಾಗಿತ್ತು. ಅವರಿಗೆ ಯಾವುದೇ ರಾಜಕೀಯ ಮಹತ್ವಾಕಾಂಕ್ಷೆ ಇಲ್ಲವೆಂಬುದನ್ನು ಜನರು ತಿಳಿದಿದ್ದರು. ಅನೇಕ ಸಲ ತಮ್ಮ ಭಾಷಣದ ಸಂದರ್ಭದಲ್ಲಿ ಅವರು ಜೀವ ಪರಿಸ್ಥಿತಿಶಾಸ್ತ್ರದ (ಎಕಾಲಜಿಯ) ಒಳನೋಟಗಳನ್ನು ತಿಳಿಸುವಾಗ ಸ್ವಯಂ ಅವರಿಂದ ಪ್ರೇರಿತವಾಗಿ ಕೆಲವು ಮಂತ್ರವತ್ತಾದ ಘೋಷಣೆಗಳು ಹೊರಹೊಮ್ಮುತ್ತಿದ್ದವು. ಈ ಪಾದಯಾತ್ರೆಯಿಂದ ಅವರು ಚಿಪ್ಕೋ ಚಳುವಳಿಯ ನಾಯಕರೆಂದು ಭಾವಿಸಲ್ಪಡಲಾರಂಭಿಸಿದರು. ಆದರೆ ಸುಂದರಲಾಲ್ ಎಂದೂ ಆ ರೀತಿ ತಮ್ಮನ್ನು ಭಾವಿಸಿಕೊಳ್ಳಲಿಲ್ಲ. ಆದಾಗ್ಯೂ ಪರ್ವತ ಪ್ರದೇಶದ ಯುವಕರು ಅವರ ವ್ಯಕ್ತಿತ್ವದಿಂದ ಪ್ರೇರಿತಗೊಂಡು ಕಾಡಿನ ರಕ್ಷಣೆಯ ಧ್ಯೇಯೋದ್ದೇಶವನ್ನು ಕೈಗೆತ್ತಿಕೊಂಡರು ಮತ್ತು ಚಿಪ್ಕೋ ಆಂದೋಲನದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲಾರಂಭಿಸಿದರು.

ಚಿಪ್ಕೋ ಚಳುವಳಿಯ ಪ್ರಾರಂಭ ಮತ್ತು ಅದರ ವಿಸ್ತಾರ ಸರ್ಕಾರದ ನೀತಿಯನ್ನೇನೂ ಬದಲಾಯಿಸಲಿಲ್ಲ. ೧೯೭೩ರ ಜೂನ್ ಮಧ್ಯಭಾಗದಲ್ಲಿ ಸರ್ಕಾರ ಲೀಸಾದ ಹಂಚಿಕೆಯ ವಿಚಾರದಲ್ಲಿ ಸಣ್ಣ ಕೈಗಾರಿಕೆಗಳ ಮಧ್ಯೆ ಮಾಡುತ್ತಿದ್ದ ತಾರತಮ್ಯ ಧೋರಣೆಯನ್ನೇನೋ ನಿಲ್ಲಿಸಿತು. ಆದರೆ ಅರಣ್ಯದ ವಾರ್ಷಿಕ ಹರಾಜನ್ನು ಹಾಕುವ ನೀತಿಯನ್ನು ಮುಂದುವರಿಸಿಯೇ ಇತ್ತು. ಮಾರಾಟಕ್ಕೆ ನಿಗದಿ ಪಡಿಸಲಾಗಿದ್ದ ಪ್ರದೇಶಗಳಲ್ಲಿ ಅಲಕ್‌ನಂದಾ ಕಣಿವೆಯಲ್ಲಿಯ ಜೋಷಿಮಠ್ ಬಳಿಯ ರೇನಿ ಕಾಡು ಕೂಡ ಒಂದಾಗಿತ್ತು. ಈ ಪ್ರದೇಶ ೧೯೭೦ರ ದುರಂತದ ನೆನಪಿನ ಪ್ರದೇಶವಾಗಿತ್ತು. ಇಲ್ಲಿ ಎರಡು ಸಾವಿರ ಮರಗಳನ್ನು ಕಡಿಯಲು ನಿಶ್ಚಯಿಸಲಾಗಿತ್ತು. ಚಂಡಿಪ್ರಸಾದ್‌ಭಟ್ ಪುನಃ ಮರಗಳನ್ನು ಅಪ್ಪಿಕೊಳ್ಳುವ ರಣನೀತಿಗಾಗಿ ಶಿಫಾರಸು ಮಾಡಿದರು. ಈ ಸಂಸರ್ಭದಲ್ಲಿ ಸರ್ಕಾರ ಮೋಸದ ದಾರಿಯನ್ನು ಹಿಡಿಯಿತು. ಅರಣ್ಯ ಮುಖ್ಯಾಧಿಕಾರಿ ಭೇಟಿ ಮಾಡುವ ಮಾತು ಕೊಟ್ಟದ್ದಕ್ಕಾಗಿ ಚಂಡಿಪ್ರಸಾದ್‌ಭಟ್ ಗೋಪೇಶ್ವರದಲ್ಲಿ ಉಳಿದರು.

೧೯೬೨ರಲ್ಲಿಯ ಚೀನಾದ ದಾಳಿಯ ನಂತರ ಭಾರತೀಯ ಸೇನೆಗೆ ಕೊಡಲಾಗಿದ್ದ ಭೂಮಿಗೆ ಪರಿಹಾರ ದೊರೆಯದೆ ಬಹಳ ಕಾಲವಾಗಿತ್ತು. ರೇಣಿ ಮತ್ತು ಆ ಸುತ್ತಲಿನ ಹಳ್ಳಿಗರು ದಶೋಲಿ ಗ್ರಾಮ ಸ್ವರಾಜ್ಯ ಸಂಘದ ಸದಸ್ಯರೊಂದಿಗೆ ಚಮೋಲಿಗೆ ಪ್ರಯಾಣ ಬೆಳೆಸಿದ್ದರು. ಸಂಘದ ಸದಸ್ಯರಾಗಲೀ ಇತರರಾಗಲೀ ತಮ್ಮ ಉದ್ದೇಶಿತ ಕಾರ್ಯದಲ್ಲಿ ತಡೆಯಾಗಿ ಇಲ್ಲದಿರುವುದನ್ನು ತಿಳಿದ ಕಂಪನಿ ಗುತ್ತಿಗೆದಾರರ ಜನರು ರೇಣಿ ಗ್ರಾಮದ ಜನರ ಕಣ್ಣುತಪ್ಪಿಸಿ ನೇರವಾಗಿ ಕಾಡಿನೊಳ ಹೊಕ್ಕು ಮರಗಳನ್ನು ಕಡಿಯಲಾರಂಭಿಸಿದರು. ಆ ದಾರಿಯಲ್ಲಿ ಹೋಗುತ್ತಿದ್ದ ಓರ್ವ ಬಾಲಕಿ ಇದನ್ನು ನೋಡಿ ವಿಚಾರವನ್ನು ಮಹಿಳಾ ಸಂಘಟನೆಯ ಮುಖ್ಯಸ್ಥೆಯಾದ ಗೌರಾದೇವಿಗೆ ತಿಳಿಸಿದಳು. ಗೌರಾದೇವಿ ಹಳ್ಳಿಯ ಹೆಣ್ಣುಮಕ್ಕಳನ್ನು ಸಂಘಟಿಸಿಕೊಂಡು ಕಾಡಿನತ್ತ ನಡೆದಳು. ಮರಕಟುಕರಿಗೆ ಮರಗಳನ್ನು ಕಡಿಯಬಾರದೆಂದು ಪ್ರಾರ್ಥಿಸಿದಳು. ಅವರಿಗೆ ಮರ ಕಟುಕರು ಹೆದರಿಸಿದರು. ಬೈಗುಳಗಳನ್ನು ಬೈಯ್ದರು. ಆದರೆ ಮಹಿಳೆಯರು ತಮ್ಮ ಉದ್ದೇಶ್ಯಕ್ಕೆ ಗಟ್ಟಿಯಾಗಿ ಅಂಟಿಕೊಂಡರು. ಒಬ್ಬ ವ್ಯಕ್ತಿ ಗೌರಾದೇವಿಯ ಕಡೆಗೆ ಕೋವಿಯ ಗುರಿಯಿಟ್ಟ. ಆಗ ಅವಳು "ನನ್ನನ್ನು ಕೊಲ್ಲು, ನಂತರವೇ ತಾಯಿಯಂತಿರುವ ಈ ಕಾಡನ್ನು ನೀವು ಕಡಿಯಬಲ್ಲಿರಿ" ಎಂದಳು. ಮಹಿಳೆಯರನ್ನು ಎದುರಿಸಲು ಸಾಧ್ಯವಿಲ್ಲವೆಂದು ಮರಕಟುಕರಿಗೆ ಗೊತ್ತಾದ ನಂತರ ಅವರು ಕಾಡಿನಿಂದ ಹೋದರು. ಮಹಿಳೆಯರು ಕಾಡಿಗೆ ಹೋಗುವ ದಾರಿಯನ್ನು ರಾತ್ರಿಯಿಡೀ ನಾಲ್ಕು ದಿನ ಕಾಯ್ದರು. ಊರಿನ ಗಂಡಸರು ಹಿಂದಿರುಗಿದ ನಂತರ ಮಾರ್ಚ್ ೩೧, ೧೯೭೪ರಂದು ಬಹು ದೊಡ್ಡ ಪ್ರತಿಭಟನೆಯನ್ನು ಏರ್ಪಡಿಸಲಾಯಿತು. ಆ ಪ್ರತಿಭಟನೆಯಲ್ಲಿ ಪುರಷರು, ಮಹಿಳೆಯರು, ಮಕ್ಕಳು ಮತ್ತು ಸುತ್ತಲಿನ ಅನೇಕ ಹಳ್ಳಿಗಳ ಜನರು ಭಾಗವಹಿಸಿದ್ದರು. ಅಂಥ ಪ್ರದರ್ಶನ ಈ ಮೊದಲು ನಡೆದಿರಲಿಲ್ಲ. ಅ ಘಳಿಗೆಯಲ್ಲಿ ರೇಣಿಕಾಡು ಬಚಾವಾಯಿತು.

ಈ ಮೊದಲೇ ಸೂಚಿಸಿದಂತೆ ಚಿಪ್ಕೋ ಆಂದೋಲನದಲ್ಲಿಯ ಸುಂದರಲಾಲ್‌ರ ಭಾಗವಹಿಸುವಿಕೆಗೆ ದ್ವಿಮುಖ ಉದ್ದೇಶವಿತ್ತು. ಒಂದನೆಯದು

ಸ್ಥಳೀಯ ಹಳ್ಳಿಗಳನ್ನು ಸ್ವಾವಲಂಬನೆ ಮಾಡಬಹುದಾದಂಥ ಉದ್ಯೋಗಗಳನ್ನು ಸೃಷ್ಟಿಸುವ ಕೈಗಾರಿಕೆಗಳನ್ನು ಸ್ಥಾಪಿಸುವುದು. ಎರಡನೆಯದು ಗ್ರಾಮ ಅರ್ಥವ್ಯವಸ್ಥೆ ಅವಲಂಬಿತವಾಗಿರುವ ಕಾಡನ್ನು ರಕ್ಷಿಸುವುದು. ರೇಣಿ ಕಾಡನ್ನು ರಕ್ಷಿಸುವುದಕ್ಕಾಗಿ ನಡೆದ ಹೋರಾಟದ ಐತಿಹಾಸಿಕ ಮಹತ್ವಕ್ಕೆ ಎರಡು ಕಾರಣಗಳಿವೆ. ಒಂದನೆಯದು; ಬಹುದೊಡ್ಡ ರೀತಿಯಲ್ಲಿ ಮಹಿಳೆಯರು ಭಾಗವಹಿಸಿದ್ದು ಮೊದಲನೆಯ ಪ್ರಸಂಗ ಎರಡನೆಯದು ಸ್ಥಾನೀಯ ಕೈಗಾರಿಕೆಗೆ ಕಚ್ಚಾ ಪದಾರ್ಥ ದೊರೆಯುವ ವಿಷಯದಲ್ಲಿ ಇದ್ದ ತಪ್ಪು ನೀತಿಯ ವಿರುದ್ಧ ಪ್ರತಿಕ್ರಿಯೆ ಎಂದು ಸರ್ಕಾರ ಆ ಚಳುವಳಿಯನ್ನು ಭಾವಿಸುವಂತಿರಲಿಲ್ಲ. ರೇಣಿ ಪ್ರತಿಭಟನೆ ಸ್ಥಳೀಯ ಅರ್ಥ ವ್ಯವಸ್ಥೆಯ ಮೇಲೆ ಇರುವ ಪರಿಸರದ ಮಹತ್ವ ಮತ್ತು ಗ್ರಾಮೀಣ ಮಹಿಳೆಯರ ಜೀವನಕ್ಕೆ ನೇರವಾಗಿ ಸಂಬಂಧಿಸಿದ್ದು. ಗೌರಾದೇವಿಯ ಪ್ರಕಾರ ಆ ಪ್ರತಿಭಟನೆ ಸಹಜವಾಗಿ ಉದ್ದೀಪಿತಗೊಂಡದ್ದಾಗಿತ್ತು. ನಮ್ಮ ಅಸ್ತಿತ್ವ ಕಾಡಿನೊಂದಿಗೆ ಬಂಧಿತವಾಗಿದೆ ಎಂಬುದನ್ನು ಜನರಿಗೆ ತಿಳಿಸಬೇಕೆಂಬುದೂ ಅವರ ಬಯಕೆಯಾಗಿತ್ತು.

೧೯೭೪ರ ಏಪ್ರಿಲ್‌ನಲ್ಲಿ ರೇಣಿ ಪ್ರತಿಭಟನೆಯ ನಂತರ ಉತ್ತರಾಖಂಡದ ಮುಖ್ಯಮಂತ್ರಿ ಎಚ್.ಎನ್.ಬಹುಗುಣ ಚಂಡಿಪ್ರಸಾದ್‌ಭಟ್ ಮತ್ತು ಸುಂದರಲಾಲ್ ಬಹುಗುಣರನ್ನು ಮಾತುಕತೆಗಾಗಿ ಲಖನೌಗೆ ಆಹ್ವಾನಿಸಿದರು. ಮುಖ್ಯಮಂತ್ರಿ ಸ್ವತಃ ಗರ್‌ವಾಲ್ ಪ್ರದೇಶದವರೇ ಆಗಿದ್ದರು. ಮಾತುಕತೆಯ ನಂತರ ಸಸ್ಯ ವಿಜ್ಞಾನಿಯಾದ ಡಾ॥ ವೀರೇಂದ್ರಕುಮಾರ್‌ರವರ ಸೂಚನೆಯ ಮೇರೆಗೆ ಒಂದು ಸಮಿತಿ ರಚಿಸಿದರು. ಕಮಿಟಿಯ ಉದ್ದೇಶ್ಯ ಜನರ ದುಃಖ ದುಮ್ಮಾನಗಳನ್ನು ಪರಿಶೀಲಿಸುವುದು ಆಗಿತ್ತು. ರೇಣಿ ಪ್ರತಿಭಟನೆಯ ನಂತರ ಚಿಪ್ಕೋ ಆಂದೋಲನದ ಕ್ರಿಯಾಶೀಲ ಕಾರ್ಯಕರ್ತರು ಡೆಹ್ರಾಡೂನ್ ವಿಭಾಗೀಯ ಕಾಡಿನಲ್ಲಿಯ ಚಕ್ರತಾ ಅರಣ್ಯದ ಹರಾಜನ್ನು ಯಶಸ್ವಿಯಾಗಿ ವಿರೋಧಿಸಿದರು. ಅಂಥದೇ ರಣತಂತ್ರಗಳಿಂದ ಇನ್ನಿತರ ಪೂರ್ವನಿಶ್ಚಿತ ಮರಗಳ ಕಡಿಯುವಿಕೆಯನ್ನು ನಿಲ್ಲಿಸಿದರು. ನಂತರ ಉತ್ತರಾಖಂಡ ಸರ್ವೋದಯ ಮಂಡಲ ಅಲ್ಮೋರ್ ಜಿಲ್ಲೆಯ ಗರುರ್ ಎಂಬಲ್ಲಿ ಸಭೆ ಸೇರಿ ಮರಗಳ ಕಡಿಯುವಿಕೆಯ ಮೇಲೆ ನಿಷೇಧ ಆಗಬೇಕೆಂದು ಮತ್ತು ಚಿರ್‌ಪೈನ್ ಕಾಡನ್ನು ರೆಸಿನ್ ಪಡೆಯುವುದಕ್ಕಾಗಿ ನಾಶಮಾಡುತ್ತಿದ್ದ ಅಭ್ಯಾಸವನ್ನು ನಿಲ್ಲಿಸಬೇಕೆಂದು ಒತ್ತಾಯಿಸಿತು. ಅಲ್ಲದೆ ಗುತ್ತಿಗೆ ಕೊಡುವ ಪದ್ಧತಿಯನ್ನು ನಿಲ್ಲಿಸಬೇಕು ಮತ್ತು ಅರಣ್ಯ ಕಾರ್ಮಿಕರಿಗೆ ನ್ಯಾಯಯುತ ಕೂಲಿ ಕೊಡಬೇಕೆಂದೂ ಒತ್ತಾಯಿಸಿತು. ಕೊನೆಗೆ ಪ್ರತಿಭಟನೆಯ ಸ್ಥಾನ ಹರಾಜಿನ ಸ್ಥಳಕ್ಕೆ ಸ್ಥಳಾಂತರಗೊಂಡಿತು. ಒಂದು ಪ್ರತಿಭಟನೆಯ ಸಂದರ್ಭದಲ್ಲಿ ಯುವಕರು ಹಾರಜು ನಡೆಯುತ್ತಿದ್ದ ಹಾಲಿನಲ್ಲಿ ನುಗ್ಗಿ ಧ್ವನಿವರ್ಧಕವನ್ನು ವಶಪಡಿಸಿಕೊಂಡು ಹರಾಜು ರದ್ದಾಗಿದೆ ಎಂದು ಘೋಷಿಸಿದರು. ಈ ಪ್ರಕಾರದ ಪ್ರದರ್ಶನಗಳು ಡೆಹ್ರಾಡೂನ್, ನೈನಿತಾಲ್. ಕೋಟತ್‌ದ್ವಾರ್, ಉತ್ತರಕಾಶಿ ಮತ್ತು ತೆಹರಿ ಇತ್ಯಾದಿ ಸ್ಥಳಗಳಲ್ಲಿ ನಡೆದ ಅರಣ್ಯ ಹರಾಜುಗಳಲ್ಲಿ ಕೂಡ ನಡೆದವು.

ಅಕ್ಟೋಬರ್ ೩, ೧೯೭೪ರಂದು ಉತ್ತರಕಾಶಿಯಲ್ಲಿ ಹರಾಜು ನಡೆಯುತ್ತಿದ್ದಾಗ ಸುಂದರಲಾಲ್ ಆವರಣವನ್ನು ಪ್ರವೇಶಿಸಿ ಮುಂದಿನ ವ್ಯವಹಾರವನ್ನು ನಿಲ್ಲಿಸಬೇಕೆಂದು ಅಧಿಕಾರಿಗಳನ್ನು ಪ್ರಾರ್ಥಿಸಿದರು. ತಮ್ಮ ವಿನಂತಿಗೆ ಮನ್ನಣೆ

ದೊರೆಯದಿದ್ದಾಗ ಅವರು ಪಕ್ಕದಲ್ಲಿಯೇ ಇದ್ದ ಆಂಜನೇಯನ ದೇವಸ್ಥಾನಕ್ಕೆ ಹೋಗಿ ಎರಡು ವಾರಗಳ ಉಪವಾಸ ಆರಂಭಿಸಿದರು. ಉಪವಾಸದ ಉದ್ದೇಶ್ಯ ಕಾರ್ಮಿಕರ ಶೋಷಣೆ ನಿಲ್ಲಬೇಕು ಮತ್ತು ಮರಗಳನ್ನು ಯದ್ವಾತದ್ವಾ ಕಡಿಯುವುದಕ್ಕೆ ಕೊಡಲಾಗುತ್ತಿದ್ದ ಮನಸ್ಸೋ ಇಚ್ಛೆ ಗುತ್ತಿಗೆಯನ್ನು ವಿರೋಧಿಸುವುದಾಗಿತ್ತು. ಈ ಪ್ರತಿಭಟನೆಯ ನಂತರ ರಾಜ್ಯದ ಮುಖ್ಯಮಂತ್ರಿ ಇನ್ನೊಂದು ಸಮಿತಿಯನ್ನು ರಚಿಸಿದರು. ಅದು ಸ್ವಾಮಿನಾಥನ್ ಸಮಿತಿ. ಈ ಸಮಿತಿಯ ಉದ್ದೇಶ್ಯ ಆ ಪ್ರದೇಶದ ಕಾಡಿನ ನಾಶದ ಸಂಪೂರ್ಣ ಅಧ್ಯಯನ ಮಾಡುವುದಾಗಿತ್ತು. ಈ ಸಮಿತಿಯ ವರದಿ ಬರುವವರೆಗೆ ರಾಜ್ಯ ಸರ್ಕಾರ ಅರಣ್ಯದ ಹರಾಜಿನ ಪ್ರಕ್ರಿಯೆಗೆ ಅನಿರ್ದಿಷ್ಟಾವಧಿಯ ನಿಷೇಧ ಹೇರಿತು. ಅಲ್ಲದೆ ಮರಗಳನ್ನು ಕಡಿಯುವ ಕ್ರಿಯೆಯನ್ನು ಅರಣ್ಯ ನಿಗಮದ ಅನುಮತಿಯೊಂದಿಗೆ ಮಾಡಬಹುದಾಗಿತ್ತು. ಅರಣ್ಯ ನಿಗಮದ ಅಧಿಕಾರ ಇನ್ನು ಪ್ರವೇಶಿಸದೇ ಇದ್ದ ಕಾಡಿನಲ್ಲಿಯ ಮರಗಳನ್ನು ಹರಾಜು ಹಾಕುವುದರ ಮೂಲಕ ಸ್ಥಳೀಯ ಕೈಗಾರಿಕೆಗಳು ಕಾನೂನು ಬದ್ಧವಾಗಿ ಭಾಗವಹಿಸಲು ಸಾಧ್ಯವಾಗುವಂತೆ ಮಾಡಲಾಯಿತು. ಕಚ್ಚಾ ಪದಾರ್ಥವು ಸಣ್ಣ ಪ್ರಮಾಣದ ಅರಣ್ಯೋತ್ಪನ್ನ ಚಿಕ್ಕ ಕೈಗಾರಿಕೆಗೆ ಸುಲಭವಾಗಿ ಸಿಗುವಂತೆ ನೋಡಕೊಳ್ಳಲಾಯಿತು. ರಾಜ್ಯ ಸರ್ಕಾರ ಕನಿಷ್ಠ ಕೂಲಿ ಮಸೂದೆ ಹಾಗೂ ಇತರ ಕಲ್ಯಾಣಕಾರಿ ಶಾಸನವನ್ನು ಜಾರಿಗೆ ತಂದಿತು. ವಿರೇಂದ್ರಕುಮಾರ್ ಸಮಿತಿ ೧೯೭೦ರ ಭೀಕರ ಪ್ರವಾಹಕ್ಕೆ ಅಲಕ್‌ನಂದಾ ಕಣಿವೆಯಲ್ಲಿಯ ಕಾಡಿನ ನಾಶವೇ ಕಾರಣವೆಂದು ಅಭಿಪ್ರಾಯ ಪಟ್ಟಿತು. ತತ್ಪರಿಣಾಮವಾಗಿ ಸರ್ಕಾರವು ಅಲಕ್‌ನಂದಾ ಮತ್ತು ಅದರ ಉಪನದಿಗಳ ನೀರು ಸಂಗ್ರಹಣಾ ಪ್ರದೇಶದಲ್ಲಿ ವಾಣಿಜ್ಯೋದ್ದೇಶಕ್ಕಾಗಿ ಮರಕಡಿಯುವುದನ್ನು ಹತ್ತು ವರ್ಷಗಳ ಅವಧಿಗೆ ನಿಷೇಧ ಏರಿತು. ಸ್ಥಳೀಯ ಜನರನ್ನು ಸಂಘಟಿಸುವ ವಿಚಾರದಲ್ಲಿ ಎರಡು ವರ್ಷಗಳ ಅವಧಿಯಲ್ಲಿ ಚಿಪ್ಕೋ ಆಂದೋಲನ ಹಿಮಾಲಯ ತಪ್ಪಲು ಕಂಡ ಅತ್ಯಂತ ಜನಮನ್ನಣೆ ಪಡೆಯಿತು. ಅಲ್ಲದೆ ಅರಣ್ಯ ನೀತಿಯಲ್ಲಿ ಬದಲಾವಣೆ ತರುವುದರಲ್ಲಿಯೂ ಪರಿಣಾಮಕಾರಿ ಪಾತ್ರ ನಿರ್ವಹಿಸಿತು.

(ಮುಂದುವರಿಯುವುದು..)

* * *

ಭೂಮಿಯಲ್ಲಿ ಜೀವವಿದೆ; ಅದು ಬೀಜಗಳಲ್ಲಿ ಹೋಗುತ್ತದೆ;
ಅಲ್ಲದೆ, ಅದನ್ನು ಕೆದಕುವ ಮನಷ್ಯನಲ್ಲಿಯೂ ಹೋಗುತ್ತದೆ.

– ಚಾರ್ಲ್ಸ್ ವಾರ್ನರ್

ವೇದ ಮತ್ತು ಅವೇಸ್ತಾ ಮತ್ತು ಸಿಖ್

– ವಿನೋಬಾ

ಪಾರಸಿಗಳ ಮೂಲ ಧರ್ಮಗ್ರಂಥ ಅವೇಸ್ತಾದ ಭಾಷೆ ವೈದಿಕ ಭಾಷೆಯೊಂದಿಗೆ ಹೋಲಿಕೆಯಾಗುತ್ತದೆ. ವೇದದ ಅನೇಕ ದೇವತೆ ಅವೇಸ್ತಾದಲ್ಲಿ ಕೂಡ ಇವೆ. ಅಲ್ಲದೆ ವೇದದ ಅನೇಕ ಶಬ್ದಗಳು ಉಚ್ಚಾರಣೆಯ ಸ್ವಲ್ಪ ವ್ಯತ್ಯಾಸದೊಂದಿಗೆ ಅವೇಸ್ತಾದಲ್ಲಿ ಕಾಣಬರುತ್ತವೆ. ಸಂಸ್ಕೃತದಲ್ಲಿ ಅಪರೋಕ್ಷವೆಂದರೆ ಸಮಕ್ಷ, ಮರಾಠಿಯಲ್ಲಿ ಅಪರೋಕ್ಷವೆಂದರೆ ಹಿಂದೆ. ಇಂಥದೇ ವ್ಯತ್ಯಾಸ ದೇವ ಮತ್ತು ಅಸುರ ಶಬ್ದಗಳ ಸಂಬಂಧದಲ್ಲಿ ಪಾರಸಿ ಮತ್ತು ಹಿಂದೂಗಳ ಭಾಷೆಯಲ್ಲಿ ನೋಡಸಿಗುತ್ತದೆ. ಪಾರಸಿಕರು ಈಶ್ವರನನ್ನು ಅಸುರನೆಂದು ಕರೆಯುತ್ತಾರೆ. ಮತ್ತು ಅದರ ಉಚ್ಚಾರಣೆ ಅಹುರ್ ಎಂದು ಮಾಡುತ್ತಾರೆ. ಅದಕ್ಕೆ ಮಹಾನ್ ಎಂಬರ್ಥದ ಮಜ್ದ ಎಂಬ ವಿಶೇಷಣ ಹಚ್ಚಿ ಈಶ್ವರನಿಗೆ ಅಹುರ್-ಮಜ್ದ ಎಂದೆನ್ನುತ್ತಾರೆ. ಇದರ ಅಪಭ್ರಂಶ ಹೋರ್ ಮಜ್ದ. ಪಾರಸಿಕರ ಭಾಷೆಯಲ್ಲಿ ದೇವ ಎಂದರೆ ಪರಮೇಶ್ವರ ವಿರೋಧಿ ದುಷ್ಟ ಮನೋವೃತ್ತಿ. ವೇದದಲ್ಲಿ ಕೂಡ ಈಶ್ವರನಿಗೆ ಅಸುರ ಸಂಜ್ಞೆ ದೊರೆಯುತ್ತದೆ. ಆದರೆ ಸಾಮಾನ್ಯ ಸಂಸ್ಕೃತದಲ್ಲಿ ಹೀಗೆ ಇಲ್ಲ. ಪಾರಸಿಕರು ಹಿಂದೂಸ್ಥಾನಕ್ಕೆ ಆಶ್ರಯ ಕೇಳಲು ಬಂದರು. ಆದರೆ ಅವರು ದೇವತೆಗಳ ನಿಂದೆ ಮತ್ತು ಅಸುರರ ಭಕ್ತಿಯನ್ನು ಖಾಯಂಗೊಳಿಸಿದರು. ಶಬ್ದಗಳ ಕಡೆ ನೋಡದೇ ಅವುಗಳ ಭಾವ ಗ್ರಹಿಸಿ ಆ ಕಾಲದ ಸಮಂಜಸ ಹಿಂದೂಗಳು ಆ ಸಂಬಂಧವಾಗಿ ಯಾವುದೇ ತಕರಾರನ್ನು ಮಾಡಲಿಲ್ಲ. ಪಾರಸಿಕರಿಗೆ ಅವರ ಧರ್ಮದ ಆಚರಣೆಯ ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟರು.

ಹಿಂದೂಗಳಲ್ಲಿ ಯಾವ ರೀತಿ ಗಾಯತ್ರಿಯೋ ಅದೇ ರೀತಿ ಪಾರಸಿಕರಲ್ಲಿ ಅಹುನ್-ವೈರ್ಯ. ಆ ಶಬ್ದದ ಅರ್ಥನಾಮ ಈಶ್ವರನನ್ನು ಆರಾಧಿಸುತ್ತೇನೆ. ಗಾಯತ್ರಿ ಮೂರು ಪಾದದ್ದಾಗಿದೆ. ಅಂತೆಯೇ ಅದು ಕೂಡ ಮೂರು ವಾಕ್ಯಗಳಿಂದ ರಚಿತವಾಗಿದೆ. ಅವೇಸ್ತಾದ ಪ್ರಾಚೀನತಮ ಭಾಗದಲ್ಲಿ ಅದರ ಎಣಿಕೆಯಿದೆ. ಯಾವ ಮಂತ್ರವು ಎಷ್ಟು ಪ್ರಾಚೀನ ಎಂಬ ಮಾತಿಗೆ ಮಹತ್ವವಿಲ್ಲ. ಆದರೆ ಉತ್ತಮ ಅರ್ಥದ ಆ ಮಂತ್ರ ಪಾರಸಿಕರನ್ನು ಆದರಣೀಯರನ್ನಾಗಿ ಮಾಡಿದರೆ ಅದರಲ್ಲಿ ಆಶ್ಚರ್ಯವಿಲ್ಲ. ಯಾರಿಗೇ ಆಗಲಿ ಅದು ಗೌರವಯುತವೆಂದೆನಿಸುವ ಮಂತ್ರ. ಈ ಮಂತ್ರದಲ್ಲಿ ಯಾವುದೂ ಗೂಢವಾದುದಿಲ್ಲ. ಏಕ್‌ದಮ್, ನೇರ. ಸರಳ ಅರ್ಥದ ಮಂತ್ರವದು. ತುಕಾರಾಂನ ಕಥನ ಸರಿಯಿದೆ. *ಸರ್ವ ಧರ್ಮ ಹರೀಚೆ ಪಾಯ* – ಎಲ್ಲ ಧರ್ಮಗಳು ಹರಿಯ ಚರಣಗಳೇ ಆಗಿವೆ.

ವೇದ ಮತ್ತು ಸಿಖ್

ಗುರುನಾನಕ್‌ರು ಜಪುಜಿಯಲ್ಲಿ ಧರ್ಮ ವಿರುದ್ಧ ಪಂಥ ಎಂದು ಸವಾಲನ್ನು

ಮಂಡಿಸಿ ಪಂಥಗಳ ನಿಷೇಧ ಮಾಡಿದ್ದಾರೆ. ***ಮನ್ನೈ ಮಗು ನ ಚಲೈ ಪಂಥೂ. ಮಮನ್ನೈ ಧಮಮ ಸೇತೀ ಸನ ಬಂಧೂ*** – ಮನನ ಮಾಡುವ ಮನುಷ್ಯ ಪಂಥಗಳ ದಾರಿಯಲ್ಲಿ ನಡೆಯುವುದಿಲ್ಲ. ಅವನು ಸ್ವಯಂ ಧರ್ಮತ್ವವನ್ನು ತಿಳಿಯುವನು. ಏಕೆಂದರೆ ಮನನ ಮಾಡುವುದರಿಂದ ಧರ್ಮದೊಂದಿಗೆ ನೇರ ಸಂಬಂಧ ಉಂಟಾಗುತ್ತದೆ. ಪಂಥಗಳ ಪ್ರವಾಹದಲ್ಲಿ ಮನುಷ್ಯ ತೇಲಿ ಹೋಗುತ್ತಾನೆ. ಆದ್ದರಿಂದ ಜಗತ್ತಿನಲ್ಲಿರುವ ವಿವಿಧ ಪಂಥಗಳಲ್ಲಿ ಮನುಷ್ಯ ಬೀಳುವ ಅಗತ್ಯವಿಲ್ಲ. ಈ ಮಾತನ್ನೇ ವೇದದಲ್ಲಿ ಹೇಳಿದೆ. ***ಪಥಾಮ್ ವಿಸರ್ಗೇ ಧರೂಣೇಷು ಥಸೌಂ*** – ಜೀವನದ ಆಧಾರ ಶಾಶ್ವತ ಧರ್ಮತತ್ವಗಳ ಮೇಲೆ ನಿಂತಿದೆ. ಅಲ್ಲಿ ಎಲ್ಲ ಪಂಥಗಳ ವಿಸರ್ಜನೆಯಾಗುತ್ತದೆ.

ಜಪುಜಿಯ ಒಂದು ಶ್ಲೋಕದಲ್ಲಿ ನಾನಕ್ ಪರಮೇಶ್ವರನ ಅಪಾರ ಶಕ್ತಿಗಳ ಚಿಂತನೆ ಮಾಡಿದ್ದಾರೆ. ವಿಶ್ವದ ಆಕಾರ ರಚನೆಯಾದಾಗ ಆ ವೇಳೆ ಎಂಥದಿತ್ತು. ಸಮಯ ಎಂಥದಿತ್ತು? ಪುರಾಣ ಬರೆಯುವಂಥ ಪಂಡಿತರು ಮತ್ತು ಕುರಾನ್ ಬರೆಯುವಂಥ ಕಾಜಿಗಳಿಗೆ ಸೃಷ್ಟಿಯ ಉತ್ಪತ್ತಿಯ ವೇಳೆ ಗೊತ್ತಿಲ್ಲ. ಯಾವ ಕರ್ತಾ ಈ ಸೃಷ್ಟಿಯನ್ನು ಹುಟ್ಟಿಸಿದನೋ ಮತ್ತು ಅಲಂಕರಿಸಿದನೊ ಅವನಿಗೆ ವಿಶ್ವ ಯಾವಾಗ ಮತ್ತು ಹೇಗೆ ರಚನೆಯಾಯಿತು ಎಂಬುದು ಗೊತ್ತು. ವೇದದ ನಾಸದೀಯ ಸೂಕ್ತದಲ್ಲಿ ಕೂಡ ಈ ಮಾತನ್ನು ಹೇಳಲಾಗಿದೆ. ಸೃಷ್ಟಿ ಅನಾದಿ, ಅದರ ಆದಿ ಇರಲು ಸಾಧ್ಯವಿಲ್ಲವೆಂದು ನಾಸದೀಯ ಸೂಕ್ತ ಹೇಳುತ್ತದೆ. ಈ ಸೃಷ್ಟಿಯ ಅಧ್ಯಕ್ಷ – ***ಯೋ ಅಸ್ಯಾ ದಕ್ಷಃ*** ಅವನು ತಿಳಿದಿರಬಹುದು ಅಥವಾ ತಿಳಿಯದೇ ಇರಬಹುದು. ***ಸೊ ಅಂಗ ವೇದ ಯದಿ ವಾನ ವೇದ ಈ ಯಂ ವೇದಿಃ ಪರೋ ಅಂತಃ ಪೃಥ್ವೀವ್ಯಾಃ*** ಎಂದು ವೇದ ಹೇಳುತ್ತದೆ. ಈ ವೇದಿ ಜ್ಞಾನ ಭೂಮಿ. ಅಲ್ಲಿಂದ ನನಗೆ ಜ್ಞಾನ ದೊರೆಯುತ್ತದೆ. ಅದು ಸಂಪೂರ್ಣ ಪೃಥ್ವಿಯ ಹಂತ. ನನ್ನ ಯಜ್ಞ ತ್ರಿಭುವನದ ಮಧ್ಯ ಬಿಂದು. ***ಆ ಯಂ ಯಜ್ಞೋ ಭುವನಸ್ಯ ನಾಭೀಃ*** ಇಂಥದೇ ಮಾತನ್ನು ನಾನಕ್ ಜಪುಜಿಯಲ್ಲಿ ಹೇಳಿದ್ದಾರೆ. ಜ್ಞಾನ ಭೂಮಿಯಲ್ಲಿ ಮನುಷ್ಯನಿಗೆ ಪ್ರಚಂಡ ಜ್ಞಾನ ಪ್ರಾಪ್ತವಾಗುತ್ತದೆ. ಮನುಷ್ಯ ಪೂರ್ಣವಾಗಿ ಸೃಷ್ಟಿಯ ಮಧ್ಯ ಬಿಂದುವಿನಲ್ಲಿ ಬರುತ್ತಾನೆ. ಇಡೀ ವಿಶ್ವದ ಅನುಭೂತಿ ಅವನ ಅಂತರ್ಮನದಲ್ಲಿ ಆಗುತ್ತದೆಯೇ ಹೊರತು. ಬಾಹ್ಯಮನದಲ್ಲಲ್ಲ. ಬಾಹ್ಯ ಮನದ ಮೂಲಕ ಮನುಷ್ಯ ಎಷ್ಟೇ ವಿದ್ಯೆಗಳನ್ನು ಕಲಿತರೂ ಆ ವಿದ್ಯೆಗಳ ಕೇಂದ್ರಸ್ಥಾನದಲ್ಲಿ ಅವನು ಬರಲಾರ. ಒಂದು ದಡದಲ್ಲಿಯೇ ಉಳಿದು ಬಿಡುವನು. ಆದರೆ ಅವನು ಅಂತರ್ಮನಸ್ಸಿನಲ್ಲಿ ಇಡೀ ವಿಶ್ವದ ಸಾಕ್ಷಿತ್ವದ ಅನುಭೂತಿ ಮಾಡುತ್ತಾನೆ. ಅಲ್ಲಿ ಅನೇಕ ವಿಧವಾದ ನಾದ, ಅಂತಃಶಬ್ದ ಇರುತ್ತದೆ. ವಿನೋದ ಲೀಲೆಗಳೂ ನಡೆಯುತ್ತವೆ. ಅಂದರೆ ಕೌತುಕ ಹಾಗೂ ಆನಂದ ಕೂಡ ಆಗುತ್ತದೆ. ಈ ಪ್ರಕಾರ ಯಾರು ತನ್ನನ್ನು ಮಧ್ಯ ಬಿಂದುವಿನಲ್ಲಿ ಕಂಡು ಕೊಳ್ಳುವನೋ ಅವನಿಗೆ ಮಂಗಳಕರ ದರ್ಶನವೇ ಆಗುವುದು.

ಬ್ರಹ್ಮ ವಿದ್ಯೆಯ ಗೂಢ ತತ್ವಗಳೇನಿವೆ ಅವು ಅನುಭವಿಗಳ ಮುಖದಿಂದಲೇ ತಿಳಿಯಲು ಸಾಧ್ಯ. ನಾನಕ್ ಹೇಳಿದ್ದಾರೆ – ***ಗುರೂಮುಖಿ ನಾದಂ, ಗುರೂಮುಖಿ***

ವೇದಂ – ನಾದ ಕೂಡ ಗುರುವಿನ ಮುಖದಿಂದಲೇ ಗೊತ್ತಾಗುತ್ತುದೆ. ವೇದ ಕೂಡ ಗುರುಮುಖದಿಂದಲೇ. ನಾದ ಮತ್ತು ವೇದಕ್ಕೆ ತನ್ನದೇ ಮಹತ್ವ ಕೂಡ ಇದೆ. ಆದರೆ ಗುರುವಿನ ಮುಖದಿಂದ ಅವು ಬಂದಾಗಲೇ ಅವುಗಳ ಮಹತ್ವ ಹೆಚ್ಚಾಗುತ್ತದೆ. ಧ್ಯಾನದಿಂದ ಸಿಗುವ ಶಿಕ್ಷಣಕ್ಕೆ ನಾದವೆಂದೂ, ಶಾಸ್ತ್ರಗಳ ಜ್ಞಾನಕ್ಕೆ ವೇದವೆಂದೂ ಹೇಳುತ್ತಾರೆ. ನಾನಕ್‌ರ ಈ ವಚನ ಸಅರ್ಥವಾಗಿ ಗೊತ್ತಾಗುತ್ತದೆ. *ಜೈಸೆ ಪಂಡಿತ್ ವೇದ – ವಿಹಿನೊ ತೈಸೆ ಪ್ರಾಣಿ ಹರಿನಾಮ ಬಿನ* – ಹರಿನಾಮ ವಿಹೀನ ಪ್ರಾಣಿ ನಿರರ್ಥಕ. ಅಂಥವನ ಜೀವನಕ್ಕೆ ವೇದ ವಿಹಿನಾ ಪಂಡಿತನ ಉಪಮೇಯವನ್ನು ನಾನಕ್ ಕೊಟ್ಟಿದ್ದಾರೆ.

ವೇದ ಮತ್ತು ಸಂತವಾಣಿ

ಸಂತರ ಪರಂಪರೆ ಅತೀ ಪ್ರಾಚೀನ ಕಾಲದಿಂದ ಇಂದಿನವರೆಗೆ ನಡೆದು ಬರುತ್ತಿದೆ. ಮಾನವತೆಯ ಉಗಮವಾದಗಿನಿಂದ ಸಂತರ ಆರ್ವಿಭಾವವಾಗಿದೆ. ಸಂತರವಾಣಿಯ ಪ್ರಥಮ ನಮೂನೆ ಋಗ್ವೇದದಲ್ಲಿ ನೋಡಸಿಗುತ್ತದೆ. ಋಗ್ವೇದದ ಕೆಲ ಕಥಾನಕ ಪರರ ಸೂಕ್ತಗಳನ್ನು ಬಿಟ್ಟರೆ ಇಡೀ ಋಗ್ವೇದ ಸಂತರವಾಣಿಯೇ.

ವೇದಗಳಲ್ಲಿ ಕರ್ಮಕಾಂಡವೇ ತುಂಬಿದೆ ಎಂದು ಅನೇಕರು ಭಾವಿಸುತ್ತಾರೆ. ಯಜುರ್‌ವೇದ ಇತ್ಯಾದಿಗಳಲ್ಲಿ ಕರ್ಮಕಾಂಡ ಕೂಡ ಇದೆ. ಆದರೆ ಋಗ್ವೇದದ ಮಂತ್ರಗಳು ಭಕ್ತಿಯುತ ಸಂತಗಾಥೆಗಳು. ಅವುಗಳ ಸಂಬಂಧ ಬೇರೆ ಬೇರೆ ಕರ್ಮಗಳೊಂದಿಗೆ ಸೇರಿಸಿರುವುದರ ಉದ್ದೇಶ ಆಯಾ ಕರ್ಮಗಳ ನಿಮಿತ್ತವಾಗಿ ಆಯಾ ಪ್ರಸಂಗಗಳಿಗೆ ಸಂಬಂಧಿಸಿದ ಒಳ್ಳೆ ಒಳ್ಳೆಯ ವಚನಗಳು ಜನರಿಗೆ ಕಂಠಪಾಠವಾಗಿರಬೇಕೆಂಬುದಾಗಿದೆ. ನನ್ನ ತಾಯಿ ಬೆಳಿಗ್ಗೆ ಹಿಟ್ಟು ಬೀಸುವುದರ ಜೊತೆಗೆ ತುಕಾರಾಂನ ಭಜನೆ ರಾಗವಾಗಿ ಹೇಳುತ್ತಿದ್ದಳು. ಆ ಭಜನೆಗಳಿಗೂ ಹಿಟ್ಟು ಬೀಸುವುದಕ್ಕೂ ಏನು ಸಂಬಂಧ? ಹಿಟ್ಟು ಬೀಸುವುದರಲ್ಲಿ ಅವಳಿಗೆ ಸ್ವಲ್ಪ ಉತ್ಸಾಹ ಹೆಚ್ಚಿಸುವುದಾಗಿತ್ತು. ಇದೇ ಪ್ರಕಾರ ಋಗ್ವೇದದ ಬಹಳಷ್ಟು ಸೂಕ್ತಗಳನ್ನು ಕರ್ಮಗಳ ಜೊತೆಗೆ ಇರುವ ಸಂಬಂಧವನ್ನೂ ಎಣಿಸಬಹುದಾಗಿದೆ. ಸಾಮವೇದವಂತೂ ಋಗ್ವೇದದ್ದೇ ಭಜನೆಗಳ ಆಯ್ಕೆಯಾಗಿದೆ. ಸಾಮಪಾಠಿಗಳು ಅದನ್ನು ವಿಶೇಷ ರೀತಿಯಲ್ಲಿ ಸ್ವರ ಲಿಪಿಯನ್ನಾಗಿ ಮಾಡಿಟ್ಟಿದ್ದಾರೆ.

ವೇದಗಳಲ್ಲಿ ಭಕ್ತಿ ಕೂಡ ಇದೆ. ಅದು ಬಹುದೇವತಾ ಭಕ್ತಿ ಎಂದೂ ಕೆಲವರು ಭಾವಿಸುತ್ತಾರೆ. ಇದಕ್ಕೆ ಉತ್ತರ ಸ್ವಯಂ ಋಗ್ವೇದವೇ ಕೊಟ್ಟಿದೆ. ಸತ್ ಎಂಬ ಹೆಸರು ಒಂದೇ ಆಗಿದೆ. ಉಪಾಸನೆಗಾಗಿ ಉಪಾಸಕರು ಭಿನ್ನ ಭಿನ್ನ ರೂಪ ಇಷ್ಟ ಪಡುತ್ತಾರೆ. *ಏಕಂ ಸತ್ ವಿಪ್ರಾ ಬಹುಧಾ ವದಂತಿ ಅಗ್ನಿಂ ಯಮಮ್ ಮಾತರಿಷ್ವಾನಂ ಅಹುಃ* ಅಗ್ನಿ, ಯಮ, ವಾಯು ಈ ಎಲ್ಲವೂ ಒಬ್ಬನೇ ಪರಮೇಶ್ವರನ ಭಿನ್ನ ಭಿನ್ನ ಗುಣವಾಚಕ ಭಿನ್ನ ಭಿನ್ನ ಹೆಸರುಗಳು. ಪರಮೇಶ್ವರ ಪರಿಶುದ್ಧ ನಿರ್ಗುಣನಿದ್ದಾನೆ. ಅಂದರೆ ಅನಂತ ಗುಣವಾನ್. ಯಾವ ಉಪಾಸಕನಿಗೆ ತನ್ನ ಯಾವ ಗುಣದ ವಿಕಾಸದ ಅವಶ್ಯಕತೆ ಇದೆ ಎಂದು ಅನಿಸುತ್ತದೋ ಆ ಗುಣವುಳ್ಳ ದೇವರ ಭಕ್ತಿ

ಮಾಡುತ್ತಾನೆ. ಉದಾಹರಣೆಗೆ ತುಳಸೀದಾಸ್ ವಿನಯ-ಪತ್ರಿಕೆಯಲ್ಲಿ ಮಂಗಳಮೂರ್ತಿ ಗಣನಾಯಕ, ಪ್ರೇರಕ ಸೂರ್ಯನಾರಾಯಣ, ಔಢರದಾನಿ ಶಂಕರ, ವಿರಕ್ತಿ ರೂಪಿಣಿ ದುರ್ಗಾ ಇತ್ಯಾದಿ ಅನೇಕ ದೇವತೆಗಳ ಸ್ಥವನ ಮಾಡಿದ್ದಾರೆ. ಆದರೆ ಎಲ್ಲರಿಂದಲೂ ಒಂದೇ ಬೇಡಿಕೆ ಬಯಸಿದ್ದಾರೆ. *ರಾಮ ಚರಣ ರತಿ ದೇಹು* ಹೀಗೆಯೇ ಋಗ್ವೇದದ ಸಂತರದು.

ಸಂತರವಾಣಿಯಲ್ಲಿ ಕಂಡುಬರುವ ಭಾವನೆಯ ಉತ್ಕಂಠತೆ, ಅಂತರಂಗದ ಚಡಪಡಿಕೆ ಭೂತ ಮಾತ್ರಗಳಿಗೆ ಅದರ ಕಂಡುಬರುವ ಇತ್ಯಾದಿ ವಿಶಿಷ್ಟ ಭಾವಗಳೆಲ್ಲ ವೈದಿಕವೇ ಆಗಿವೆ. ಉದಾಹರಣೆಗೆ ಸನಃ ಪಿತೇವ ಸೂನವೇ, ಅಗ್ನೇ ಸೂಪಾಯನೊ ಭವ ಸಚಸ್ವ ನಃ ಸ್ವಸ್ತಯೇ.

"ಹೇ ಅಗ್ನಿದೇವ, ಜ್ಯೋತಿರ್ಮಯ ಪ್ರಭು ಯಾವ ರೀತಿ ತಂದೆಯ ಬಳಿ ಪುತ್ರ ಸಹಜವಾಗಿ ತಲುಪುತ್ತಾನೋ ಅದೇ ರೀತಿ ನಾನು ನಿನ್ನ ಬಳಿ ತಲುಪಲಿ. ನನ್ನ ಮಂಗಳಕ್ಕಾಗಿ ನಿರಂತರ ನೀನು ನನ್ನ ಬಳಿ ಇರು." ಇದು ಆರ್ಶವಾಣಿ! ಇದನ್ನು ಸಂತವಾಣಿ ಎನ್ನದೆ ಏನೆನ್ನ ಬೇಕು?

ಸಂತವಾಣಿಯ ಎರಡನೇ ಆರ್ವಿಭಾವ ನಮಗೆ ಬುದ್ಧ ಭಗವಾನನ ಗಾಥೆಗಳಲ್ಲಿ ದೊರೆಯುತ್ತದೆ. ತುಳಸೀದಾಸ್ ಮತ್ತು ಕಬೀರ್‌ದಾಸರ ಮಧ್ಯದಲ್ಲಿ ಇರುವಂಥ ವ್ಯತ್ಯಾಸವೇ ವೇದವಾಣಿ ಮತ್ತು ಕಬೀರ ಬುದ್ಧ ವಾಣಿಯದ್ದಾಗಿದೆ. ಬುದ್ಧ ಲೋಕಭಾಷೆಯಲ್ಲಿ ಬರೆದ ದೇವ ವಾಣಿ ಕೂಡ ಆ ಕಾಲದ ಲೋಕ ಭಾಷೆಯಲ್ಲಿ ಅಂದರೆ ವೈದಿಕ ಸಂಸ್ಕೃತದಲ್ಲಿ ಪ್ರಕಟವಾಯಿತು. ದೇವವಾಣಿ ಸ್ವಯಂ ಇದನ್ನು ಪ್ರಕಟಿಸುತ್ತಿದೆ. *ಅಹಂ ರಾಷ್ಟ್ರೀ ಸಂಗಮನೀ ವಸೂನಾಂ* - "ನಾನು ಎಲ್ಲ ರಾಷ್ಟ್ರಗಳ ವಾಣಿ ಎಲ್ಲರ ಸೌಜನ್ಯವನ್ನು ಸಂಗಮ ಮಾಡುವಂಥವಳು." ಒಂದು ವೇಳೆ ವೈದಿಕ ಋಷಿ ಲೋಕಭಾಷೆಯಲ್ಲಿ ಹಾಡದೆ ಹೋಗಿದ್ದರೆ, 'ಅಹಂ ರಾಷ್ಟ್ರೀ' ಎಂದು ಪಣತೊಡುತ್ತಿರಲಿಲ್ಲ. ಸಂತವಾಣಿಯ ಮೂರನೇ ಆರ್ವಿಭಾವ ನಮಗೆ ದಕ್ಷಿಣದ ಶೈವ ಮತ್ತು ವೈಷ್ಣವ ಭಕ್ತರಲ್ಲಿ ದೊರೆಯುತ್ತದೆ. ವೇದವಾಣಿ ಮತ್ತು ಬುದ್ಧವಾಣಿ ಉತ್ತರ ಭಾರತದಿಂದ ದಕ್ಷಿಣ ಭಾರತಕ್ಕೆ ತಲುಪಿದವು. ಅವುಗಳ ಆ ಋಣವನ್ನು ತೀರಿಸುವುದಕ್ಕಾಗಿ ಶಂಕರ ರಾಮಾನುಜ ಮಧ್ವ ವೈಷ್ಣವ ಆಚಾರ್ಯರು ಭಕ್ತಿಯ ಪ್ರವಾಹವನ್ನು ದಕ್ಷಿಣದಿಂದ ಉತ್ತರ ಭಾರತಕ್ಕೆ ಹರಿಸಿದರು. ಆ ಆಚಾರ್ಯರಿಗೆ ಈ ಸ್ಫೂರ್ತಿ ತಮಿಳು ಭಾಷೆಯಲ್ಲಿ ಹಾಡುವ ವೈಷ್ಣವ ಶೈವ ಸಂತರಿಂದಲೇ ದೊರೆಯಿತು.

ವೇದವಾಣಿ, ಬುದ್ಧವಾಣಿ ಮತ್ತು ತಮಿಳು ಭಕ್ತವಾಣಿ ಇವು ಮೂಲತ್ರಯಿ. ಇವುಗಳ ನಂತರ ಇಡೀ ಭಾರತೀಯ ಸಂತವಾಣಿ ಪ್ರಸೃತ್ತವಾಯಿತು. ಮೋಕ್ಷಕ್ಕಾಗಿ ವೇದಾಭ್ಯಾಸ, ತತ್ವಜ್ಞಾನ ಅಥವಾ ಕರ್ಮಕಾಂಡ ಅವಶ್ಯಕವಲ್ಲ. ಭಕ್ತಿಯ ಅವಶ್ಯಕ. ಆದ್ದರಿಂದ ವೇದವನ್ನು ಓದಿ ಹೃದಯ ಭಕ್ತಿಯಿಂದ ದ್ರವಿತಗೊಂಡರೆ ಮೋಕ್ಷ ದೊರೆಯುವುದು. ವೇದ ಓದಿ ಕರ್ಮಕಾಂಡ ಮಾಡಿ ಕೂಡ ಭಕ್ತಿ ಹೃದಯವನ್ನು ದ್ರವಿತಗೊಳಿಸದಿದ್ದರೆ ಮೋಕ್ಷ ದೊರೆಯಲಾರದು. ವೇದ ಓದಿ ಹರಿಭಕ್ತಿಯಲ್ಲಿ

ತೊಡಗಿದ್ದಲ್ಲಿ ನಾನು ನಿಜವಾಗಿ ವೇದ ಓದಿದೆ ಎಂದು ಸಂತರು ಹೇಳುತ್ತಾರೆ.

ನಿಜವಾದ ಹಿತಕರ್ತಾ ಮಿತ್ರ ಪರಮಾತ್ಮನೇ ಎಂಬುದಾಗಿ ತುಳಸೀದಾಸ್ ಹೇಳುತ್ತಾರೆ. ಯಾವ ಒಬ್ಬ ಪರಮಾತ್ಮನಿಂದ ಸಂಬಂಧಗಳು ಹುಟ್ಟುತ್ತವೆಯೋ ಅದನ್ನೇ ಮರೆತು ಬಿಡುತ್ತಿಯಲ್ಲ! ತಂದೆಯೊಂದಿಗೆ ಪ್ರೇಮ ಮಾಡಿದೆ. ತಾಯಿಯೊಂದಿಗೆ ಪ್ರೇಮ ಮಾಡಿದೆ. ಆದರೆ ಮೂಲತ್ರಯ ಪ್ರೇಮ ಎಲ್ಲಿಂದ ಬಂದಿದೆ? ಪರಮಾತ್ಮನಿಂದ. ಯಾರ ಆಧಾರದಿಂದ ಎಲ್ಲ ಸಂಬಂಧಗಳು ಉಂಟಾಗುತ್ತವೋ ಅದನ್ನು ಗುರುತಿಸುವುದಿಲ್ಲ. ಎಲ್ಲಿ ಲಾಭವಿದೆ, ಎಲ್ಲಿ ಹಾನಿಯಿದೆ ಎಂಬುದನ್ನು ತಿಳಿಯುವುದಿಲ್ಲ. ವೇದದ ಹೇಳಿಕೆ, ಗುರು ಹೇಳಿಕೆ ಮತ್ತು ನಮ್ಮ ಅನುಭವ ಈ ಮೂರೂ ಎಲ್ಲಿ ಗಟ್ಟಿಯಾಗುತ್ತವೋ ಅಲ್ಲಿ ಈ ಮಾತು ದೃಢ ಆಗುತ್ತದೆ. ಬೇರೆಯವರು ಇತರ ಮಾತುಗಳ ಮೇಲೆ ಭರವಸೆಯನ್ನಿಡಲಿ. ನನ್ನ ವಿಶ್ವಾಸ ಮಾತ್ರ ರಾಮನಾಮದ ಮೇಲೆ ಕುಳಿತಿದೆ.

ಅಸ್ಸಾಂನ ಸಂತ ಮಾಧವದೇವ ಹೇಳುತ್ತಾರೆ, "ಆ ಭಗವಂತ ವೇದಗಳ ಸ್ವಾಮಿ. ಅವನ ಸಂಕಲ್ಪ ಮಾತ್ರದಿಂದ ವೇದ ನಿರ್ಮಾಣವಾಗಿದೆ. ವೇದ ಬಹುದೊಡ್ಡ ವಾಣಿ. *ಪರಮಾತಂ ತವ ನಿರ್ಮಿತಃ* ಇಂಥ ಮಹಾನ್ ವಾಣಿಯ ನಿರ್ಮಾಣ ಮಾಡುವ ವೇದದ ಸ್ವಾಮಿ ಮಾಧವ ಹೆಸರಿನ ಹಿಂದೆ ಹಿಂದೆ ಹೋಗುತ್ತಾನೆ. ಭಕ್ತ ಮಾಧವ ನಾಮ ತೆಗೆದುಕೊಳ್ಳುತ್ತಾ ಹೋಗುತ್ತಿದ್ದಾನೆ ಮತ್ತು ವೇದದ ಸ್ವಾಮಿ ಅಂದರೆ ಸಾಕ್ಷಾತ್ ವಾಗ್ಮಿ, ಧೇನುವಿನಂತೆ ಅವನ ಹಿಂದೆ ಹಿಂದೆ ಹೋಗುತ್ತಿದ್ದಾನೆ." ವೇದದಿಂದ ಇಡಿ ಶಬ್ದ ಮತ್ತು ವಾಣಿಯ ಬೋಧವಾಗುತ್ತದೆ. ಯಾರ ಕೈಯಲ್ಲಿ ವೇದ ಇದೆಯೋ ಅವರು ಕೂಡ ಮಾಧವನ ಹೆಸರನ್ನು ತೆಗೆದುಕೊಳ್ಳುವವರ ಹಿಂದೆ ಹಿಂದೆ ಹೋಗುತ್ತಾರೆ. ಮಹಾರಾಷ್ಟ್ರದ ಜ್ಞಾನದೇವ ಮಾಹಾರಾಜರ ಪ್ರಕಾರ ಭಾವ ಪೂರ್ವಕ ಹರಿನಾಮವನ್ನು ಉಚ್ಚಾರಣೆ ಮಾಡುತ್ತಾ ಹೋದರೆ ಅರಿವಿಲ್ಲದಂತೆಯೇ ಹೃದಯ ಶುದ್ಧಿ ಆಗುತ್ತಲೇ ಹೋಗುತ್ತದೆ. ನಾಮ ಸ್ಮರಣೆಯ ಈ ಜಾದೂವಿನ ಆಕಲನವನ್ನು ವೇದ ಕೂಡ ಪೂರ್ಣವಾಗಿ ಮಾಡಲಾರವು. ಅಂದಮೇಲೆ ಸಾಮಾನ್ಯ ಜೀವಿ ಅದನ್ನು ಹೇಗೆ ತಿಳಿಯಬಲ್ಲ? ಅಧಿಕಾರಿ, ಅನಧಿಕಾರಿ ಎಂಬ ಗೊಂದಲ ಉಂಟಾಗುತ್ತದೆ. ನಮಗೆ ಅದರ ಅಗತ್ಯವಿಲ್ಲ. ಏನೆಲ್ಲಾ ಪ್ರತಿಯೊಂದು ಮಾಡುತ್ತಿಯೋ ಅದನ್ನು ಈಶ್ವರಾರ್ಪಣ ಮಾಡು, ಅಷ್ಟೆ ಸಾಕು. ನಿನ್ನ ಕೃತಿಯ ಸಂಬಂಧವನ್ನು ಈಶ್ವರನೊಂದಿಗೆ ಜೋಡಿಸು.

* * *

ಟ್ರಸ್ಟಿ ಶಿಪ್ : ಸಿದ್ಧಾಂತ ಮತ್ತು ಪ್ರಯೋಗ

– ಗೋವಿಂದರಾವ್ ದೇಶಪಾಂಡೆ

ಇಂದಿನ ಪ್ರಚಲಿತ ಔದ್ಯೋಗಿಕ ವ್ಯವಸ್ಥೆಯಲ್ಲಿ ಅನೇಕ ದೋಷಗಳಿವೆ. ಇದಕ್ಕೆ ತನ್ನದೇ ಯಾವ ಉದ್ದೇಶವಾಗಲಿ, ಧ್ಯೇಯವಾಗಲಿ ಇಲ್ಲ. ಪ್ರಚಲಿತ ಔದ್ಯೋಗಿಕ ವ್ಯವಸ್ಥೆ ಸಾಂಸ್ಕೃತಿಕ ದೃಷ್ಟಿಯಿಂದ ಹಾನಿಕಾರಕ. ಏಕೆಂದರೆ ಅದರಲ್ಲಿ ಭಾಗವಹಿಸುವ ಜನರು ಅಥವಾ ವ್ಯಕ್ತಿ ಸಮೂಹಗಳು ಪರಸ್ಪರರ ಪ್ರತಿ ವ್ಯಾಪಾರ ಸಂಬಂಧಗಳೊಂದಿಗೆ ಸಂಬಂಧಿಸಿದವರಾಗಿರುತ್ತಾರೆ. ಒಬ್ಬರು ಇನ್ನೊಬ್ಬರ ನಿಕಟ ಬರುವುದು ಸಂಸ್ಕೃತಿಯ ಲಕ್ಷಣ. ಆದರೆ ಇಂದಿನ ವ್ಯವಸ್ಥೆಯಲ್ಲಿ ಶಾರೀರಿಕ ನಿಕಟತೆ ಇದ್ದಾಗ್ಯೂ ಮಾನಸಿಕ ವಿರೋಧ ಭಾವನೆ ಹೆಚ್ಚುತ್ತದೆ.

ಇಂದು ಶ್ರಮ ಮಾಡುವವರನ್ನು ಮತ್ತು ವಿಶಿಷ್ಟ ಜ್ಞಾನ ಮತ್ತು ತಂತ್ರಜ್ಞಾನ ಮಾಹಿತಿಯುಳ್ಳವರೆಲ್ಲರನ್ನು ವಸ್ತುಗಳಂತೆಯೇ ಅಳೆಯಲಾಗುತ್ತದೆ. ಸಂಸ್ಕೃತಿಯನ್ನು ಸಮೃದ್ಧ ಮಾಡುವ ಕಲೆಗಳಾದ ನೃತ್ಯ, ನಾಟ್ಯ, ಸಾಹಿತ್ಯ ಇತ್ಯಾದಿ ಕಲೆಗಳಿಗೆ ಈ ವ್ಯವಸ್ಥೆಯಲ್ಲಿ ಯಾವುದೇ ಸ್ಥಾನವಿಲ್ಲ – ಅವು ಈ ವ್ಯವಸ್ಥೆಯಿಂದ ನಿಷ್ಪನ್ನವೂ ಆಗುವುದಿಲ್ಲ. ಉತ್ಪನ್ನವೂ ಆಗುವುದಿಲ್ಲ.

ಸ್ನೇಹ, ಪ್ರೇಮ, ತ್ಯಾಗ ಇತ್ಯಾದಿ ಮಾನವೀಯ ಮೌಲ್ಯಗಳಿಗೆ ಯಾವ ಸ್ಥಾನವಿಲ್ಲ. ಮಾಲೀಕ ಮತ್ತು ನೌಕರ ಹಾಗೂ ವ್ಯವಸ್ಥಾಪಕ ಮತ್ತು ಶ್ರಮಿಕ ಎಂಬೀ ಸಂಬಂಧ ಅನೈಸರ್ಗಿಕ ಮತ್ತು ಅನೈತಿಕ ಕೂಡ. ಇಂದಿನ ವ್ಯವಸ್ಥೆಯಲ್ಲಿ ಶ್ರಮ ನಿಷ್ಠ ವ್ಯಕ್ತಿಗೆ ಅಭಿಕ್ರಮದ ಯಾವ ಅವಕಾಶವೂ ಇಲ್ಲ. ಆದ್ದರಿಂದ ಅವನ ವ್ಯಕ್ತಿತ್ವ ಅಥವಾ ಕುಶಲತೆಯ ವಿಕಾಸವಾಗುವುದಿಲ್ಲ. ತನ್ನನ್ನು ತಾನು ಎಲಿಮಿನೇಟೆಡ್ ಆಗಿ ಕಂಡುಕೊಳ್ಳುತ್ತಾನೆ. ಈ ಕಾರಣಕ್ಕಾಗಿ ಅವನ ಸಾಮರ್ಥ್ಯ, ಗುಣವಂತಿಕೆ ಬೇರೆ ಅಳತೆಯ ದೃಷ್ಟಿಯಿಂದ ಕಡಿಮೆಯಾಗುತ್ತದೆ. ಸಂತೋಷ ಸಿಗದಿರುವ ಕಾರಣದಿಂದ ದಿನ ನಿತ್ಯದ ಜೀವನದಲ್ಲಿ ಬರುವ ಸಾಧಾರಣ ದುಃಖ ಕೂಡ ಶ್ರಮಿಕನ ಮನಸ್ಸಿನಲ್ಲಿ ಸಂಗ್ರಹವಾಗುತ್ತಾ ಹೋಗುತ್ತದೆ. ಪ್ರಚಲಿತ ವ್ಯವಸ್ಥೆಯಲ್ಲಿಯ ಸಭ್ಯತೆ ಸಂಸ್ಕೃತಿಯ ಮೇಲೆ ಹಾನಿಕರವಾಗುತ್ತದೆ.

ಎಲ್ಲ ಸಂಪತ್ತು ಈಶ್ವರನದು, ಅಂದರೆ ಸಮಾಜದ್ದು, ಅಂದರೆ ದರಿದ್ರ ನಾರಾಯಣನದು. ಆದ್ದರಿಂದ ಪ್ರತಿಯೊಬ್ಬರಿಗೂ ತಮ್ಮ ಅತಿ ಅವಶ್ಯಕ ಅಗತ್ಯಗಳಿಗಾಗಿ ಮಾತ್ರ ಸಂಪತ್ತಿನ ಉಪಭೋಗದ ಅಧಿಕಾರವಿದೆ. ಉಳಿದ ಸಂಪತ್ತನ್ನು ಸಮಾಜಕ್ಕೇ ಸಮರ್ಪಣೆ ಮಾಡಬೇಕು. ಸಂಪತ್ತು ಅಂದರೆ ಯಾರ ಬಳಿ ಏನಿದೆಯೋ–ಕಲೆ, ಜ್ಞಾನ, ಕುಶಲತೆ, ಶ್ರಮ, ಸ್ನೇಹ, ಇಸ್ಟೇಟ್ ಇತ್ಯಾದಿ ಎಲ್ಲ. ಅಧಿಕಾರ ಮತ್ತು ಪ್ರತಿಷ್ಠೆ ಕೂಡ ಸಂಪತ್ತು. ಟ್ರಸ್ಟಿ ಶಿಪ್‌ನಲ್ಲಿ ಪ್ರತಿಯೊಬ್ಬ ವ್ಯಕ್ತಿ ತನ್ನ ಗುಣಗಳ ಸಂಬಂಧವಾಗಿ ಕೂಡ ಟ್ರಸ್ಟಿಯಾಗುತ್ತಾನೆ. ಈ ಪ್ರಕಾರದ ಪರಿವರ್ತನೆ ಸ್ವಇಚ್ಛೆಯಿಂದ

ಬರಬೇಕೇ ಹೊರತು ಒತ್ತಡದಿಂದಲ್ಲ. ಅಹಿಂಸಕ ಸತ್ಯಾಗ್ರಹದ ಮೂಲಕ ಹೃದಯ ಪರಿವರ್ತನೆಗಾಗಿ ಪ್ರಯತ್ನ ಮಾಡಬಹುದಾಗಿದೆ. ಭೌತಿಕ ಸಂಪತ್ತಿನ ಒಡೆಯ ಸ್ವಇಚ್ಛೆಯಿಂದ ಟ್ರಸ್ಟಿಯಾಗದಿದ್ದಲ್ಲಿ ಸರ್ಕಾರ ಆದಷ್ಟು ಕಡಿಮೆ ಹಿಂಸೆ ಉಪಯೋಗಿಸಿ ಅವನ ಸಂಪತ್ತನ್ನು ವಶಪಡಿಸಿಕೊಳ್ಳಬೇಕಾಗುವುದು. ಆದ್ದರಿಂದ ಸ್ವಇಚ್ಛೆಯ ಪರಿವರ್ತನೆಯೇ ಅಪೇಕ್ಷಿತ. ಸರ್ಕಾರದಲ್ಲಿ ಶಕ್ತಿ ಕೇಂದ್ರಿತವಾಗಿರುವುದರಿಂದ ವ್ಯಕ್ತಿ ಮತ್ತು ಸಮಾಜ ಎರಡಕ್ಕೂ ಹಾನಿಯಾಗುವ ಭಯವಿದೆ. ಈ ಕಾರಣಕ್ಕಾಗಿ ಟ್ರಸ್ಟಿ ಶಿಪ್‌ನ ರಚನೆ ಸ್ವಇಚ್ಛೆಯಿಂದ ಆಗುವುದು ಅವಶ್ಯಕ.

ಸಂಸ್ಥೆ, ಸಂಚಾಲನೆ, ಸಮಾಜ, ಶ್ರಮಿಕ ಮತ್ತು ವ್ಯವಸ್ಥೆ ಈ ಐದೂ ಸೇರಿ ಉದ್ಯೋಗದ ಮೇಲೆ ನಿಯಂತ್ರಣವಿರುತ್ತದೆ. ಅಂದರೆ ಸಂಸ್ಥೆ ನಡೆಸುವುದರಲ್ಲಿ ಇವುಗಳ ಪಾತ್ರವಿರುತ್ತದೆ. ಈ ಸಂಸ್ಥೆ ಆಡಿಟ್‌ಗಾಗಿ ಸಿದ್ಧವಾಗಿರುತ್ತದೆ. ವ್ಯವಹಾರ ಪೂರ್ಣವಾಗಿ ಸ್ವಚ್ಛ ಮತ್ತು ಬಹಿರಂಗ ಇರುತ್ತವೆ. ಟ್ರಸ್ಟಿ ಶಿಪ್‌ನಲ್ಲಿ ಕೆಲಸಮಾಡುವವರೆಲ್ಲ ಮತ್ತು ಸಮಾಜದ ಪ್ರತಿನಿಧಿ ಸಂಸ್ಥೆಯಲ್ಲಿ ಸಂಬಂಧಿತ ನಿರ್ಣಯ ತೆಗೆದುಕೊಳ್ಳುವ ಪದ್ಧತಿಯಲ್ಲಿ ಪೂರ್ಣ ರೂಪದಲ್ಲಿ ಸಂಬಂಧಿತ ಪರಿಣಾಮಕ್ಕಾಗಿ ಸಹಭಾಗಿಯಾಗಿರುವರು. ಈ ರೀತಿ ತೆಗೆದುಕೊಳ್ಳಲಾದ ನಿರ್ಣಯವನ್ನು ಜಾರಿಗೊಳಿಸಲು ಹಾಗೂ ಜಾರಿಗೊಳಿಸಲಾದ ನಿರ್ಣಯಗಳ ಪರಿಣಾಮದಲ್ಲಿ ಅವರೆಲ್ಲರದು ಸಮಾನ ರೂಪದ ಭಾಗಿತ್ವವಿರುವುದು.

ಈ ಸಂಕಲ್ಪನೆಯಲ್ಲಿ ಪ್ರತಿಯೊಬ್ಬ ವ್ಯಕ್ತಿ ಸಂಪತ್ತುಳ್ಳವನು! ಸಂಪತ್ತು ಇಲ್ಲದೆ ಇರುವವರು ಯಾರೂ ಇಲ್ಲ. ಅಂದರೆ ಇದರಿಂದ ವರ್ಗವಿಹೀನ ಸಮಾಜದ ರಚನೆ ಸಾಧ್ಯ. ಮಾಲೀಕ ಮತ್ತು ನೌಕರನ ಮಧ್ಯದ ಭೇದ ಅಳಿಸಿಹೋಗುವುದು! ಕೆಲವು ವ್ಯಕ್ತಿಗಳು ಕೇವಲ ಅಪ್ಪಣೆಕೊಡುವಂಥವರು, ಇನ್ನು ಕೆಲವು ಜನರು ಕೇವಲ ಅಪ್ಪಣೆ ಜಾರಿಗೊಳಿಸುವವರು ಈ ಪ್ರಕಾರದ ಭೇದ ಇರುವುದಿಲ್ಲ. ಆದ್ದರಿಂದ ಶೋಷಣೆ ಮುಕ್ತ ಸಮಾಜ ರಚನೆಯತ್ತ ಪ್ರಗತಿಯಾಗಲು ಸಾಧ್ಯ.

ಯುರೋಪ್, ವಿಶೇಷವಾಗಿ ಇಂಗ್ಲೆಂಡ್‌ನಲ್ಲಿ ಸುಮಾರು ೫೦೦ ಉದ್ಯೋಗಗಳು ಬಂಡವಾಳ, ಕೆಲಸಮಾಡುವವರು ಮತ್ತು ಸಮಾಜದ ಸಂಯುಕ್ತ ಭಾಗಿತ್ವದಲ್ಲಿ ನಡೆಯುತ್ತಿವೆ. ಉತ್ತರ ಸ್ಪೇನ್‌ನಲ್ಲಿ ಅರ್ಥ ವ್ಯವಸ್ಥೆಯ ಹೆಚ್ಚು ಭಾಗ ಈ ಪ್ರಕಾರದ ರಚನೆಯ ಮೇಲೆ ಆಧಾರಿತವಾದ ಉದ್ಯೋಗಗಳೊಂದಿಗೆ ಸಂಬಂಧವಿದೆ. ಇಂಗ್ಲೆಂಡ್‌ನಲ್ಲಿ ಇವುಗಳನ್ನು ಕಾಮನ್ ಓನರ್‌ಶಿಪ್ ಎಂದೆನ್ನುತ್ತಾರೆ. ಇಂಗ್ಲೆಂಡಿನ ಒಂದು ವಾಣಿಜ್ಯ ಸಂಸ್ಥೆಯಲ್ಲಿ ಮೂವತ್ತೆರಡು ಸಾವಿರ ವ್ಯಕ್ತಿಗಳಿದ್ದಾರೆ. ಅವರನ್ನು ಸದಸ್ಯರೆಂದು ಕರೆಯಲಾಗುತ್ತದೆ. ಈ ಸಂಸ್ಥೆಯಲ್ಲಿ ಕೋಟಿ ಪೌಂಡ್‌ನಷ್ಟು ವಾರ್ಷಿಕ ವ್ಯವಹಾರ ನಡೆಯುತ್ತದೆ. ಇಂಗ್ಲೆಂಡ್‌ನಲ್ಲಿ ಈ ಆಂದೋಲನದ ಆರಂಭ ಅರ್‌ನೆಸ್ಟ್ ಬಾರ್ಡರ್ ಎಂಬುವವರ ಪ್ರಯತ್ನದಿಂದ ಆಯಿತು. ಅರ್‌ನೆಸ್ಟ್ ಬಾರ್ಡರ್ ತಮ್ಮ ಸ್ಕಾಟ್ ಬಾರ್ಡರ್‌ನ್ನು ಸ್ಕಾಂಡ್ ಬಾರ್ಡರ್ ರೂಪದಲ್ಲಿ ಪರಿವರ್ತಿಸಿದರು. ಅವರು ತಮ್ಮ ಒಡೆತನದ ಶೇಕಡಾ ೯೯ರಷ್ಟು ಷೇರುಗಳನ್ನು ಒಂದು ಟ್ರಸ್ಟ್ ಮಾಡಿ ಸ್ಕಾಟ್ ಬಾರ್ಡರ್ ಕಾಮನ್‌ವೆಲ್ತ್‌ಗೆ ಕೊಟ್ಟಿದ್ದಾರೆ. ಈ ಧರ್ಮದರ್ಶಿಗಳಲ್ಲಿ ಷೂಮಾಕರ್‌ನಂಥ ಟ್ರಸ್ಟಿಗಳಿದ್ದರು. ಈ ಕಂಪನಿಯ ಎಲ್ಲ ನಿರ್ಣಯಗಳನ್ನು ಕೆಲಸ ಮಾಡುವ ಎಲ್ಲ ಜನರು ಒಟ್ಟಾಗಿ ತೆಗೆದುಕೊಳ್ಳುತ್ತಾರೆ.

ಇನ್ನೊಂದು ಕಂಪನಿಯಿದೆ. 'ಟೈಲಾನ್ ಕಾಮನ್ ಓನರ್‌ಶಿಪ್' ಕಂಪನಿ. ಈ ಕಂಪನಿಯಲ್ಲಿ ಅಧಿಕಾರ ಮತ್ತು ಗೌರವ ಎಲ್ಲರಿಗೂ ಸಮಾನ ರೂಪದಲ್ಲಿ ದೊರೆಯ ಬೇಕೆಂಬ ದೃಷ್ಟಿಯಿಂದ ಪ್ರತಿಯೊಬ್ಬ ಸದಸ್ಯನೂ ಅಧ್ಯಕ್ಷತೆಯ ಪದವನ್ನು ನಿರ್ವಹಿಸಬೇಕಾಗುತ್ತದೆ. ಅತಿ ಹೆಚ್ಚು ಸಮಾನತೆ ತರುವ ದೃಷ್ಟಿಯಿಂದ ಈ ಪ್ರಯತ್ನ ಮಾಡಲಾಗಿದೆ. ಅಡಚಣೆ ರಹಿತ ಕಾರ್ಯನಡೆಯುವುದರಲ್ಲಿ ಈ ವ್ಯವಸ್ಥೆಯ ಕಾರಣದಿಂದ ಬಹಳಷ್ಟು ಪ್ರಗತಿಯಾಗಿದೆ, ಸಾಮರ್ಥ್ಯ ಹೆಚ್ಚಿದೆ. ಏಕೆಂದರೆ ಎಲ್ಲರ ಮನಸ್ಸಿನಲ್ಲಿ ತಮ್ಮದೆಂಬ ಭಾವನೆಯಿದೆ. ಕಾಮನ್ ಓನರ್‌ಶಿಪ್ ಮೂಮೆಂಟ್ ಎಂಬ ಹೆಸರಿನ ಸಂಘಟನೆಯ ಮೂಲಕ ಲೋಕಾಭಿಪ್ರಾಯ ಮತ್ತು ವಾತಾವರಣ ನಿರ್ವಹಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತದೆ. ಇಂಡಸ್ಟ್ರಿಯಲ್ ಕಾಮನ್ ಓನರ್‌ಶಿಪ್ ಫೈನಾನ್ಸ್ ಎಂಬ ಹೆಸರಿನ ಇನ್ನೊಂದು ಸಂಸ್ಥೆಯನ್ನು ಈ ಜನರು ಸ್ಥಾಪಿಸಿದ್ದಾರೆ. ಈ ಸಂಸ್ಥೆಯ ಮೂಲಕ ಈ ಪ್ರಕಾರದ ಕೈಗಾರಿಕೆಗಳಿಗೆ ಪ್ರಾಥಮಿಕ ಬಂಡವಾಳವನ್ನು ದೊರಕಿಸಿಕೊಡಲಾಗುತ್ತದೆ.

ಇಂಗ್ಲೆಂಡ್‌ನ ಪಾರ್ಲಿಮೆಂಟ್ ಒಂದು 'ಕಾಮನ್ ಓನರ್‌ಶಿಪ್' ಎಂಬ ಶಾಸನವನ್ನು ಮಾಡಿ ಅಡಚಣೆಗಳನ್ನು ದೂರವಿರಿಸಿದೆ. ಅಲ್ಲಿ ಪ್ರಶಿಕ್ಷಣದ ವ್ಯವಸ್ಥೆಗಾಗಿ ಕಾಮನ್ ಓನರ್‌ಶಿಪ್ ಪ್ರಶಿಕ್ಷಣ ಸಂಸ್ಥೆಯನ್ನು ನಡೆಸಲಾಗುತ್ತಿದೆ.

ಯುಗೋಸ್ಲಾವಿಯಾದಲ್ಲಿ ಸಮಾಜ ಮತ್ತು ಕೆಲಸ ಮಾಡುವವರ ಭಾಗಿತ್ವದ ಕಾನೂನುನನ್ನು ಅಂಗೀಕರಿಸಲಾಗಿದೆ. ಈ ಪದ್ಧತಿಯನ್ನು ಅವರು ಸೆಲ್ಫ್ ಮ್ಯಾನೇಜ್‌ಮೆಂಟ್ ಎನ್ನುತ್ತಾರೆ. ಯಾವುದೇ ಉದ್ಯೋಗದಲ್ಲಿ ಐದಕ್ಕಿಂತ ಹೆಚ್ಚು ವ್ಯಕ್ತಿಗಳು ಕೆಲಸ ಮಾಡುವವರಿದ್ದರೆ ಆ ಉದ್ಯೋಗವನ್ನು ಈ ಪದ್ಧತಿಯೊಳಗೆ ಅಳವಡಿಸಬೇಕಾಗುತ್ತದೆ. ಈ ಪದ್ಧತಿಯಲ್ಲಿ ಕೂಡ ಎಲ್ಲ ನಿರ್ಣಯಗಳನ್ನು ಎಲ್ಲರೂ ಸೇರಿ ಮಾಡುತ್ತಾರೆ. ಜಯಪ್ರಕಾಶ್ ನಾರಾಯಣರ ಪ್ರೇರಣೆಯಿಂದ ೧೯೭೦ರಲ್ಲಿ ಮುಂಬಯಿ ಟ್ರಸ್ಟಿ ಶಿಪ್ ಫೌಂಡೇಷನ್ ಎಂಬ ಹೆಸರಿನ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಆ ಸಂಸ್ಥೆಯ ಮೂಲಕ ಪ್ರಚಾರದೊಂದಿಗೆ ಪ್ರತ್ಯಕ್ಷ ಪ್ರಯೋಗದ ಪ್ರಯತ್ನವನ್ನು ಮಾಡಲಾಗುತ್ತದೆ. ಒಂದು ಟ್ರಸ್ಟ್ ರೂಪದಲ್ಲಿ ಈ ಸಂಸ್ಥೆ ರಿಜಿಸ್ಟರ್ ಆಗಿದೆ. ಈ ಸಂಸ್ಥೆಯ ಪ್ರೇರಣೆಯಿಂದ ಪುಣೆಯಲ್ಲಿ ಒಂದು ಬಹು ಸಣ್ಣ ಕೈಗಾರಿಕೆ ಪ್ರಯೋಗಕ್ಕಾಗಿ ೧೯೮೧ ಅಕ್ಟೋಬರ್ ೨ರಿಂದ ನಡೆಯುತ್ತಿದೆ. ಇಂದಿನ ಮಾಲೀಕರು ಅಥವಾ ಕಾರ್ಮಿಕ ಸಂಘಟನೆಯ ಮುಖಂಡರು ಈ ವಿಚಾರವನ್ನು ಕೇವಲ ಗಮನವಿಟ್ಟು ಕೇಳುತ್ತಿದ್ದಾರೆ.

– ಅನು : ಸುಕೌ (ಸಾಭಾರ : ಸರ್ವೋದಯ ಜಗತ್)

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಜನಪದ ಸೇವಾ ಟ್ರಸ್ಟಿನ ಹೊಸ ಕಾರ್ಯಕಾರಿ ಸಮಿತಿಯ ಮೊದಲ ಸಭೆ ೧೪-೪-೨೦೧೨ರಂದು ಜನಪದ ನಿಲಯದಲ್ಲಿ ಡಾ॥ಮನೋಹರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಒಂಭತ್ತು ಜನ ಸದಸ್ಯರಲ್ಲಿ ಎಂಟು ಜನ ಸದಸ್ಯರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಟ್ರಸ್ಟಿನ ೨೦೧೧-೧೨ನೇ ಸಾಲಿನ ಕಾರ್ಯವರದಿಯನ್ನು ಪರಿಶೀಲಿಸಲಾಯಿತು. ಎಲ್ಲಾ ವಿಭಾಗಗಳ ಲೆಕ್ಕ ಪತ್ರಗಳನ್ನು ಪರಿಶೀಲಿಸಲಾಯಿತು. ಆ ಸಾಲಿನಲ್ಲಿ ಅಂತಃಕರುಣಾ ಯೋಜನೆಯಡಿಯಲ್ಲಿ ೨೯ಸಾವಿರ ರುಪಾಯಿ ಬಂದಿದೆ. ಸಾಮಾನ್ಯದಾನದ ರೂಪದಲ್ಲಿ ೩,೭೭೧೨೩ ರೂ ಬಂದಿದ್ದರೆ 'ನೆನೆಬನ' ಯೋಜನೆಗೆ ೪೫,೦೦೦ ರೂ ಬಂದಿದೆ. ಈ ರೀತಿ ಸಂಗ್ರಹವಾದ ೯,೭೪,೯೧೭ ರೂ ಮೊತ್ತ ಟ್ರಸ್ಟಿನ ವಿವಿಧ ಬಗೆಯ ಅಂದರೆ ಉದ್ದೇಶಾಧಾರಿತ ಯೋಜನೆಗಳಿಗಾಗಿ, ಕೆಲಸಗಾರರ ವೇತನಕ್ಕಾಗಿ, ಶಿಶುವಿಹಾರಕ್ಕಾಗಿ, ಸಂಸ್ಥೆಯ ಕಟ್ಟಡ ಸುಸ್ಥಿರೀಕರಣಕ್ಕಾಗಿ, ವಾಹನ ನಿರ್ವಹಣೆಗಾಗಿ, ಕಟ್ಟಡ ಕಂದಾಯಕ್ಕಾಗಿ, ಆಡಿಟ್ ಫೀಗಾಗಿ ಮತ್ತು ನಿಗದಿತ ಠೇವಣಿಯಲ್ಲಿ ತೊಡಗಿಸುವುದಕ್ಕೆ ಮತ್ತು ಇತರೆ ಬಾಬ್ತುಗಳಿಗಾಗಿ ಖರ್ಚಾಗಿರುವುದನ್ನು ಸಮಿತಿ ಪರಿಶೀಲಿಸಿತು. ಈ ಅವಧಿಯಲ್ಲಿ ಸಿದ್ಧ ಉಡುಪು ವಿಭಾಗ ೫೪,೦೦೦ ರೂಗಳಷ್ಟು ಪಡೆಯಿತು. ಸಿದ್ಧ ಉಡುಪು ಮಾರಾಟದಿಂದ ೫,೧೮,೨೧೭ ರೂ ಹಣ ಬಂದಿತು. ಖಾದಿ ಬಟ್ಟೆ ಮಾರಾಟದಿಂದ ೫,೪೨೦ ಬಂದಿತು. ಹೆಗಲು ಚೀಲ ಮಾರಾಟದಿಂದ ೫,೪೮೦ ಬಂದಿತು. ಖಾದಿ ಕ್ಷೇತ್ರದಲ್ಲಿ ಹನ್ನೆರಡು ಜನ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಹೊಸ ಜೀವನ ದಾರಿ, ಶ್ರೀ ಕೃಷ್ಣ ಶಿಶುವಿಹಾರ, ಜನಪದ ವಿಚಾರ ಇವು ತಮ್ಮ ಖರ್ಚಿಗೆ ತಕ್ಕಂತೆ ಆದಾಯ ಪಡೆಯಬೇಕಾಗಿದೆ. ಈ ವಿಭಾಗಗಳಲ್ಲಿಯ ಕೊರತೆಯನ್ನು ಟ್ರಸ್ಟಿನಿಂದಲೇ ನೀಗಿಸಲಾಗುತ್ತಿದೆ. ಸಭೆಯು ಟ್ರಸ್ಟಿನ ಎಲ್ಲ ದಾನಿಗಳಿಗೂ ಅಭಿಮಾನಿಗಳಿಗೂ ವಂದನೆಯನ್ನು ವ್ಯಕ್ತಪಡಿಸಿತು.

ಇತ್ತೀಚಿಗೆ ಜರ್ಮನಿ ದೇಶದ ಟ್ರಸ್ಟಿನ ಅಭಿಮಾನಿ ವಾಲ್ಟರ್ ಪೆಕ್ಲೊ ಮತ್ತು ಪತ್ನಿ ಈವಾ ಎರಡು ದಿನಗಳ ಭೇಟಿಗಾಗಿ ಬಂದಿದ್ದರು. ಫ್ಯಾಬ್ ಇಂಡಿಯಾ ಸಂಸ್ಥೆಯವರು ಟ್ರಸ್ಟಿನ ಖಾದಿ ಕೇಂದ್ರಕ್ಕೆ ಭೇಟಿ ನೀಡಿದರು. ಆಂಧ್ರಪ್ರದೇಶದ ಸರ್ವೋದಯ ಕಾರ್ಯಕರ್ತರಾದ ಜಿ.ವಿ.ವಿ.ವಿ.ಎಸ್.ಡಿ.ಎಸ್.ಪ್ರಸಾದ್‌ರವರು ತಮ್ಮ ಪತ್ನಿ ಮತ್ತು ಪುತ್ರನೊಂದಿಗೆ ಟ್ರಸ್ಟಿಗೆ ಭೇಟಿಕೊಟ್ಟರು. ಪತ್ರಕರ್ತರಾದ ನಿರಂಜನವಾನಳ್ಳಿ ಮತ್ತು ಕುಟುಂಬದವರು, ದೀನಬಂಧು ಟ್ರಸ್ಟಿನ ಜಯದೇವ ಮತ್ತು ಕೊಳ್ಳೆಗಾಲದ ಡಾ॥ಅಶೋಕ್ ಮತ್ತು ರಾಮಕೃಷ್ಣ ಆಶ್ರಮದ ಭಕ್ತರು ಟ್ರಸ್ಟಿಗೆ ಭೇಟಿಕೊಟ್ಟರು.

೨೦೧೨ ಏಪ್ರಿಲ್ ಮಾಹೆಯ ದಾನಿಗಳು

ಶ್ರೀ ಕೆ.ಎನ್.ಸಿ.ಸ್ವಾಮಿ, ಶ್ರೀ ದೇವೇಂದ್ರಬಾಬು, ಶ್ರೀ.ಶಬೀರ್‌ಖಾನ್,
ಶ್ರೀ ಎಂ.ಮುನಿರಾಜು, ಶ್ರೀ ಸತ್ಯಪ್ರಕಾಶ್ ವಾರಣಾಸಿ - ಬೆಂಗಳೂರು;
ಶ್ರೀ ಹಿತೇಶ್ - ಪಾಂಡವಪುರ; ಶ್ರೀ ಎಂ.ಸಿ.ಕೃಷ್ಣಮಾಚಾರ್- ಮದ್ದೂರು;
ಶ್ರೀಮತಿ ಸುಶೀಲಾ ಸೋಸಲೇಗೌಡ - ಮೈಸೂರು;
ಶ್ರೀ ಸಿ.ಕೃಷ್ಣ - ರಾಮನಾಥಪುರ ಮತ್ತು ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್ ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ.. ೧೦೨

- ಸುರೇಂದ್ರ ಕೌಲಗಿ



ಈಗಾಗಲೇ ತಿಳಿಸಿರುವಂತೆ ಜನಪದ ಸೇವಾ ಟ್ರಸ್ಟ್ ತನ್ನ ಸೇವಾ ಜೀವನದ ಐವತ್ತು ವರ್ಷ ಮುಗಿಸಿ ಐವತ್ತೊಂದನೇ ವರ್ಷದಲ್ಲಿ ಮುಂಬರಿಯುತ್ತಿದೆ. ಈ ಸಂದರ್ಭದಲ್ಲಿ ಅದರ ಅರ್ಧಶತಮಾನದ ಕಾರ್ಯಕ್ರಮಗಳ ಇತಿಮಿತಿಗಳ ಬಗ್ಗೆ ಆತ್ಮಾವಲೋಕನ ಮಾಡುವುದು ತಪ್ಪೆಂದೆನಿಸಲಾರದು. ಇಂಥ ಒಂದು ಪ್ರಯತ್ನಕ್ಕೆ ಸಿಂಹಾವಲೋಕನ ಎಂದು ಕರೆಯಬಹುದಾದರೂ ಆತ್ಮಾವಲೋಕನವೇ ಹೆಚ್ಚು ಸಮಂಜಸವೆನಿಸುತ್ತದೆ. ಜನಪದ ಸೇವಾ ಟ್ರಸ್ಟ್ ಗಾಂಧೀ ವಿಚಾರ ಆಧಾರಿತ ಮತ್ತು ಆ ವಿಚಾರಗಳ ಬೆಳಕಿನಲ್ಲಿ ನಡೆಯುತ್ತಿರುವುದರಿಂದ ಆತ್ಮಾವಲೋಕನವೇ ಸರಿಯಾದ ಶೀರ್ಷಿಕೆ ಎಂದೆನಿಸುತ್ತದೆ. ಗಾಂಧೀ ಮಾರ್ಗದಲ್ಲಿ ಇರುವವರು ಆತ್ಮಾವಲೋಕನ ಮಾಡಿಕೊಂಡು ಬಂದ ನಿದರ್ಶನಗಳು ಅಸಂಖ್ಯ ಇವೆ. ಗಾಂಧೀ ಸ್ವತಃ ತಮ್ಮನ್ನು ಸದಾಕಾಲ ಸತ್ಯ-ಅಹಿಂಸೆಯ ಸಿದ್ಧಾಂತದ ಒರೆಗಲ್ಲಿನ ಮೇಲೆ ತಮ್ಮ ವಿಚಾರ ಮತ್ತು ಕ್ರಿಯೆಗಳನ್ನು ಉಜ್ಜಿ ಅತ್ಮಾವಲೋಕನ ಮಾಡಿಕೊಳ್ಳುತ್ತಿದ್ದುದು ಎಲ್ಲರಿಗೂ ವಿದಿತ. ವ್ಯಕ್ತಿಯ ನೆಲೆಯಲ್ಲಿ ಇದು ಕಷ್ಟ ಸಾಧ್ಯವಾದರೂ ಸಾಧ್ಯ ಮಾಡಿಕೊಳ್ಳಬಹುದಾಗಿದೆ. ಸಾಧಕರು ಇಂಥ ಕ್ರಿಯೆಯಲ್ಲಿ ಪರಿಣತರೇ ಆಗಿರುತ್ತಾರೆ. ಆದರೆ ಇಡೀ ಒಂದು ಸಂಸ್ಥೇಯನ್ನೇ ಪರೀಕ್ಷೆಗೆ ಒಪ್ಪಿಸುತ್ತಾ ಆತ್ಮಾವಲೋಕನ ಮಾಡುವುದು ಅಸಾಧ್ಯವೇ ಆಗುತ್ತದೆ. ಏಕೆಂದರೆ ಸಂಸ್ಥೆ ಎಂದರೆ ಹಲವಾರು ವ್ಯಕ್ತಿಗಳ ಒಕ್ಕೂಟ. ಅಲ್ಲಿಯ ಪ್ರತಿಯೊಬ್ಬ ವ್ಯಕ್ತಿಯದು ತನ್ನದೇ ಆದ ವ್ಯಕ್ತಿತ್ವ, ಭಿನ್ನ ಭಿನ್ನ ವಿಚಾರಗಳು ಮತ್ತು ಅಭಿಪ್ರಾಯಗಳು. ಗಾಂಧೀ ವಿಚಾರ ಪ್ರಣೀತ ಸಂಸ್ಥೆಯಲ್ಲಿ ಸರ್ವಾಧಿಕಾರಕ್ಕೆ ಸ್ಥಾನವಿಲ್ಲ. ಅಲ್ಲಿ ರಾರಾಜಿಸಬೇಕಾದುದು ಸರ್ವಾನುಮತ. ಅಲ್ಪಮತ-ಬಹುಮತದ ವಿಚಾರ ಪ್ರಾಧಾನ್ಯವಾದಲ್ಲಿ ಸಂಸ್ಥೆ ಸಂಕಟಕ್ಕೆ ಸಿಲುಕಿಕೊಳ್ಳುವುದು ಖಂಡಿತ. ಹತ್ತಾರು ಶಕ್ತಿಗಳ ಎಳೆದಾಟ, ಜಗ್ಗಾಟಗಳಿಂದ ಸಂಸ್ಥೆಯ ಪ್ರಗತಿ ಕುಂಠಿತವಾಗುತ್ತದೆ. ಟ್ರಸ್ಟ್ ಐವತ್ತು ವರ್ಷಗಳಿಂದ ನಡೆದುಕೊಂಡು ಬಂದಿದ್ದರೆ ಮತ್ತು ಸ್ವಲ್ಪ ಸೇವೆ ಮಾಡಿದ್ದರೆ ಅದಕ್ಕೆ ಮುಖ್ಯಕಾರಣ ಟ್ರಸ್ಟಿನ ಆಡಳಿತ ಮಂಡಲಿಯ ತೀರ್ಮಾನಗಳೆಲ್ಲ ಸರ್ವಾನುಮತದಿಂದಲೇ ಆಗಿರುತ್ತಿದ್ದುದು. ವಿಷಯ ಚರ್ಚೆ ನಡೆದಾಗ ಭಿನ್ನಾಭಿಪ್ರಾಯ ವ್ಯಕ್ತವಾಗುತ್ತಿದ್ದರೂ ಅಂತಿಮವಾಗಿ ಅದು ಸರ್ವಾನುಮತದ ತೀರ್ಮಾನವಾಗಿರುತ್ತಿತ್ತು. ಹೀಗಿದ್ದರೂ ಟ್ರಸ್ಟ್ ಪ್ರಾರಂಭಿಸಿದ ಅನೇಕ ಕಾರ್ಯಕ್ರಮಗಳಲ್ಲಿ ಕೆಲವು ನಿಂತವು, ಕೆಲವು ಕುಂಟುತ್ತ ಮುನ್ನಡೆದವು. ಇನ್ನು ಕೆಲವು ಬೆಳೆಯುವುದಕ್ಕೆ ಸೂಕ್ತ ಬೆಂಬಲ ಸಿಗದೆ ನಿಂತು ಹೋದವು. ಟ್ರಸ್ಟ್ ಸ್ಥಾಪಿತಗೊಳ್ಳುವುದಕ್ಕೆ ಮುನ್ನ ಪ್ರಾರಂಭವಾದ ಅನೇಕ ಸಂಸ್ಥೆಗಳು ಹಾಗೂ ನಂತರ ಪ್ರಾರಂಭವಾದ ಇನ್ನೂ ಅನೇಕ ಸಂಸ್ಥೆಗಳು ಟ್ರಸ್ಟ್‌ಗಿಂತ ಬಲಾಢ್ಯವಾಗಿ ಬೆಳೆದಿವೆ. ಅವುಗಳ ಬೆಳವಣಿಗೆಗಳ ಮುಂದೆ ಟ್ರಸ್ಟ್ ತುಂಬಾ

ಕುಬ್ಜವಾಗಿ ಅಥವಾ ಇದು ಸಂಸ್ಥೆ ನಡೆಯುವ ರೀತಿಯಲ್ಲ ಎಂಬ ರೂಪದಲ್ಲಿ ಇದೆ. ಆದರೆ ಟ್ರಸ್ಟಿನ ಈ ಸ್ವರೂಪದಲ್ಲಿಯೇ ಶಕ್ತಿಯೂ ಇರುವಂತಿದೆ. ಹಾಗಿಲ್ಲವಾಗಿದ್ದಲ್ಲಿ ಟ್ರಸ್ಟ್ ಐದು ದಶಕಗಳ ಕಾಲ ಮೀರಿ ಉಳಿದು ಬರುತ್ತಿರಲಿಲ್ಲವೇನೋ. ಟ್ರಸ್ಟಿನ ಆಂತರ್ಯದ ಶಕ್ತಿಯನ್ನಿ ಅಥವಾ ದೌರ್ಬಲ್ಯವೆನ್ನಿ ಅದಕ್ಕೆಲ್ಲ ಕಾರಣ ಟ್ರಸ್ಟ್ ತನ್ನ ಕಾರ್ಯಚಟುವಟಿಕೆಗಳಿಗಾಗಿ ಇಟ್ಟುಕೊಮಡಿರುವ ಆದರ್ಶಗಳು ಕಾರಣವಾಗಿರಬಹುದು. ಗಾಂಧೀ ವಿಚಾರವನ್ನು ಆದರ್ಶವಾಗಿ ಇಟ್ಟುಕೊಂಡಿರುವ ಸಂಸ್ಥೆಗಳು ಬಹುದೊಡ್ಡ ಸಂಖ್ಯೆಯಲ್ಲಿವೆ. ಆ ಸಂಸ್ಥೆಗಳು ಬೆಳೆದಿವೆಯಲ್ಲ, ಟ್ರಸ್ಟ್ ಏಕೆ ಬೆಳೆಯಲಿಲ್ಲ ಎಂಬ ಪ್ರಶ್ನೆ ಪುನಃ ಹುಟ್ಟುತ್ತದೆ. ಇದಕ್ಕೆ ಉತ್ತರ ಆಯಾ ಸಂಸ್ಥೆ ಗಾಂಧೀ ವಿಚಾರವನ್ನು ಅರ್ಥೈಸಿಕೊಂಡಿರುವ ರೀತಿಯಲ್ಲಿ ಇರಬಹುದು. ಆಧುನಿಕ ಕಾಲಕ್ಕೆ ತಕ್ಕಂತೆ ಇರಬೇಕೆಂಬ ವಿಚಾರದ ಕಾರಣದಿಂದ ಆದರ್ಶಗಳನ್ನು ಅವು ಬದಿಗಿಟ್ಟಿರಬಹುದು. ಟ್ರಸ್ಟ್‌ಗೆ ಹಾಗೆ ಮಾಡಲು ಸಾಧ್ಯವಾಗದೆ ತಾನು ಹೆಣೆದ ಆದರ್ಶದ ಬಲೆಯಲ್ಲಿಯೇ ತಾನು ಸಿಕ್ಕಿ ಹಾಕಿಕೊಂಡಿರಬಹುದು. ಆದರ್ಶವನ್ನೂ ಬಿಡಲು ಸಾಧ್ಯವಾಗದ ಮತ್ತು ಆಧುನಿಕತೆಯನ್ನೂ ಪೂರ್ಣವಾಗಿ ಒಪ್ಪಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿಯಲ್ಲಿ ಟ್ರಸ್ಟ್ ಇರಬಹುದು. ಇಂಥ ವೈಚಾರಿಕ ತೊಡಕು ಏನೇ ಇರಲಿ ಅದನ್ನು ಸ್ಪಷ್ಟವಾಗಿ ಬಗೆಹರಿಸಿಕೊಳ್ಳುವ ಶಕ್ತಿಯನ್ನು ಟ್ರಸ್ಟ್ ಆಹ್ವಾನಿಸಿಕೊಳ್ಳಬಹುದಾಗಿತ್ತು. ಆದರೆ ಅದೇಕೆ ಸಾಧ್ಯವಾಗಲಿಲ್ಲ? ಈ ಐವತ್ತು ವರ್ಷಗಳ ಪಯಣದ ನಂತರ ಆತ್ಮಾವಲೋಕನ ಮಾಡುವಾಗ ಹೊಳೆಯುವ ಕಾರಣವೇನೆಂದರೆ ಟ್ರಸ್ಟಿನ ಸದಸ್ಯರ ಇಡೀ ಸಮೂಹ ಕಾಯಾ, ವಾಚಾ, ಮನಸಾ ಟ್ರಸ್ಟಿನ ಧ್ಯೇಯೋದ್ದೇಶಕ್ಕಾಗಿ ದುಡಿಯದೆ ಇದ್ದದು ಒಂದು ಕಾರಣವಾಗಿರಬಹುದೇನೋ. ಸುತ್ತಲಿನ ಭೌತಿಕ ಪರಿಸ್ಥಿತಿ ಎಷ್ಟೇ ಬದಲಾದರೂ ಮೂಲ ತಾತ್ವಿಕತೆಗೆ ಅವರು ಬದ್ಧವಾಗಿದ್ದಿದ್ದರೆ ಬೇರೆಲ್ಲ ಸಂಸ್ಥೆಗಳು ಬೆಳೆದ ರೀತಿಯಲ್ಲಿ ಬೆಳೆಯದೆ ಹೋಗಿದ್ದರೂ ತನ್ನದೇ ವಿಶಿಷ್ಟತೆ ಉಳಿಸಿಕೊಂಡು ಬೆಳೆದ ಸಂಸ್ಥೆ ಟ್ರಸ್ಟ್ ಅಗಬಹುದಾಗಿತ್ತು. ಮುಂದೆಯೂ ಕೂಡ ಈ ಪ್ರಶ್ನೆ ಇದ್ದದ್ದೆ. ಆಧುನಿಕ ರೀತಿನೀತಿಗಳನ್ನು ಇಟ್ಟುಕೊಂಡು ಮುಂಬರಿಯುವುದು ಸುಲಭವೆನಿಸುತ್ತಿರುವ ಸಂದರ್ಭದಲ್ಲಿ ಅದಕ್ಕೆ ವ್ಯತಿರಿಕ್ತ ಧೋರಣೆ ಇಟ್ಟುಕೊಂಡು ಕೆಲಸ ಮಾಡುವುದಕ್ಕೆ ವಿಶೇಷ ಶಕ್ತಿಯೇ ಬೇಕಾಗುತ್ತದೆ. ಇಂದಿನ ಸಮಾಜ ನಿರೀಕ್ಷಿಸುವ ಬೆಳವಣಿಗೆಯನ್ನು ಟ್ರಸ್ಟ್ ಸಾಧಿಸಲಾಗದೆ ಇದ್ದ ಪರಿಸ್ಥಿತಿಯಲ್ಲಿ ಆದರ್ಶದ ಮಾತುಗಳು ನೆರವಿಗೆ ಬರಲು ಹೊಂಚು ಹಾಕುತ್ತಿರುತ್ತವೆ. ಇಂದಿನ ಪರಿಸ್ಥಿತಿಯಲ್ಲಿ ಯಾವುದೇ ಒಂದು ವ್ಯಕ್ತಿಯ ಅಥವಾ ಸಂಸ್ಥೆಯ ಬೆಳವಣಿಗೆಗೆ ಎಲ್ಲರಿಗೂ ಗೊತ್ತಿರುವಂತೆ ಜಾತಿ ಬೆಂಬಲ, ಹಣದ ಬೆಂಬಲ, ರಾಜಕೀಯ ಬೆಂಬಲ ಇತ್ಯಾದಿಗಳು ಇರಬೇಕಾಗುತ್ತದೆ. ಟ್ರಸ್ಟ್ ಇಟ್ಟುಕೊಂಡ ಸಿದ್ಧಾಂತದ ಕಾರಣದಿಂದಾಗಿ ಈ ಯಾವ ಪ್ರಕಾರದ ಬೆಂಬಲವೂ ಅದಕ್ಕೆ ದೊರೆಯದೆ ಹೋದುದಕ್ಕಾಗಿ ಟ್ರಸ್ಟ್ ಒಂದು ವಿಶಿಷ್ಟ ಸಂಸ್ಥೆಯಾಗಿ ಕಾಣುತ್ತಿರಬಹುದು. ಟ್ರಸ್ಟ್ ಇಟ್ಟುಕೊಂಡಿರುವ ಸಿದ್ಧಾಂತಕ್ಕೆ ಆ ಮೂರು ಬೆಂಬಲಕ್ಕಿಂತ ತಾನು ಕೆಲಸ ಮಾಡುವ ಕ್ಷೇತ್ರದ ಜನರ ಮನ್ನಣೆಯ ಬೆಂಬಲ ಅಗತ್ಯವೆಂದು ಭಾವಿಸುತ್ತಲೇ ಟ್ರಸ್ಟ್ ಐದು ದಶಕಗಳಿಂದ ಕೆಲಸ ಮಾಡಿಕೊಂಡು ಬಂದಿದೆ. ಈ ಭಾವನೆಗೆ ಚ್ಯುತಿ ಬರದೆ ಇರುವುದು ಟ್ರಸ್ಟಿನ ಆತ್ಮಸಾಕ್ಷಿಯಾಗಿದೆಯೆಂದು ಹೇಳಬಹುದು. ಬರಿಗೈನಿಂದ ಪ್ರಾರಂಭವಾದ ಟ್ರಸ್ಟ್ ಹಲವಾರು ಬಗೆಯ ಕಾರ್ಯಕ್ರಮ ಹಾಕಿಕೊಂಡು ನೂರಾರು ಜೀವಿಗಳ ಬದುಕು ರೂಪಗೊಳ್ಳುವುದಕ್ಕೆ ಕಾರಣವಾಗಿರುವುದನ್ನು ಸುತ್ತಲಿನ ಸಮಾಜ ಮತ್ತು ಅದರ ಅಭಿಮಾನಿ ಮಿತ್ರರೆಲ್ಲ ಬಲ್ಲವರೇ ಆಗಿದ್ದಾರೆ.

ಸರ್ವೋದಯ ಆಂದೋಲನದ ಮುನ್ನಡೆ

ಸರ್ವ ಸೇವಾ ಸಂಘದ ಸಂಯೋಜಕರಲ್ಲಿ ಒಬ್ಬರಾದ ವಿದೇಶ ವ್ಯವಹಾರ ವಿಭಾಗ ನೋಡುತ್ತಿರುವ ಪ್ರಸಾದ್‌ರವರು ೪-೪-೧೨ರಂದು ತಮ್ಮ ಪತ್ನಿ ಕ್ರಾಂತಿ ಮತ್ತು ಪುತ್ರ ಹಾಸಿಲ್ ಜೊತೆಗೆ ಮೇಲುಕೋಟೆಗೆ ಭೇಟಿಕೊಟ್ಟರು. ರಾಜ್ಯ ಸರ್ವೋದಯ ಮಂಡಲಿ ಅಧ್ಯಕ್ಷರೊಂದಿಗೆ ಸದ್ಯ ರಾಜ್ಯದಲ್ಲಿಯ ಸಂಘಟನೆಯ ದೌರ್ಬಲ್ಯಗಳ ಬಗ್ಗೆ ಮಾತುಕತೆ ನಡೆಸಿದರು. ನಂತರ ಮಂಡ್ಯ ಜಿಲ್ಲಾ ಸರ್ವೋದಯ ಮಿತ್ರ ಮಂಡಲಿಯ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಬೆಂಗಳೂರಿನಲ್ಲಿ ಸರ್ವೋದಯ ಮಂಡಲಿ ಕಛೇರಿಗೆ ಭೇಟಿ ಕೊಟ್ಟರು.

ಕಳೆದ ಜನವರಿ ೨೫ರಂದು ಬಿಹಾರ ರಾಜ್ಯದ ಸಹರಸಾ ಜಿಲ್ಲೆಯ ಸರ್ವೋದಯ ಮಂಡಲಿ ಪುನರ್‌ಘಟನೆಯಾಯಿತು. ೩೧ ಲೋಕಸೇವಕರು ಮತ್ತು ೭ ಸರ್ವೋದಯ ಮಿತ್ರರು ಭಾಗವಹಿಸಿದ್ದರು. ಈ ಸಭೆಯಲ್ಲಿ ಸರ್ವಸಮ್ಮತಿಯಿಂದ ಶ್ರೀ ಯೋಗೇಶ್ವರ ಸಿಂಹರವರನ್ನು ಅಧ್ಯಕ್ಷರನ್ನಾಗಿ, ಶ್ರೀ ಪ್ರವೀಣ್‌ಕುಮಾರ್ ಸಿಂಹರವರನ್ನು ಕಾರ್ಯದರ್ಶಿಯವರನ್ನಾಗಿ, ಏಳು ಜನ ಸದಸ್ಯರ ಕಾರ್ಯಸಮಿತಿ ಆಯ್ಕೆ ಮಾಡಿ ಜಿಲ್ಲಾ ಸರ್ವೋದಯ ಮಂಡಲದ ಪುನರ್‌ರಚನೆಯಾಯಿತು.

ಜನವರಿ ೩೦ರಿಂದ ಫೆಬ್ರವರಿ ೧೨ರ ವರೆಗೆ ವಾರಣಾಸಿ ಕ್ಯಾಂಟ್, ಮೊಘಲ್‌ಸರಾಯಿ, ಇಲಹಾಬಾದ್, ಪ್ರಯಾಗ್, ಸುಲ್ತಾನ್‌ಪುರ್, ಕಾನ್‌ಪುರ್, ಫೈಜಾಬಾದ್, ಪಾಟ್ನಾ ಇತ್ಯಾದಿ ರೈಲ್ವೆ ನಿಲ್ದಾಣಗಳಲ್ಲಿ ಗಾಂಧೀ ಸಾಹಿತ್ಯದ ವಿಶೇಷ ಪ್ರದರ್ಶನ ಏರ್ಪಡಿಸಲಾಗಿತ್ತು. ಒಳ್ಳೆಯ ಪ್ರತಿಕ್ರಿಯೆ ದೊರೆಯಿತು.

* * *

ಮೇ ೨೬ ಶನಿವಾರದಂದು ಮಧ್ಯಾಹ್ನ ೩ ಗಂಟೆಗೆ ಕರ್ನಾಟಕ ಸರ್ವೋದಯ ಮಂಡಲಿಯ ಅರ್ಧವಾರ್ಷಿಕ ಸಾಮಾನ್ಯ ಸಭೆ ನಡೆಯಲಿದೆ. ಈ ಸಭೆಯು ಮಂಡಲಿಯ ನಿಬಂಧನೆ ೧೧ (ಬಿ) ಪ್ರಕಾರ ನಡೆಯುವುದು. ಈ ಸಭೆಯಲ್ಲಿ ಎಲ್ಲ ಲೋಕಸೇವಕರು, ಸರ್ವೋದಯ ಮಿತ್ರರು ಭಾಗವಹಿಸುವರು. ಈ ಸಭೆಯಲ್ಲಿ ಇದುವರೆಗಿನ ಕಾರ್ಯವರದಿಯನ್ನು ಪರಿಶೀಲಿಸಲಾಗುವುದು. ಮುಂದಿನ ಆರು ತಿಂಗಳ ಅವಧಿಗೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು. ಈ ಸಭೆಯು ಬೆಂಗಳೂರಿನ ವಲ್ಲಭನಿಕೇತನದ ಆವರಣದಲ್ಲಿರುವ ಕರ್ನಾಟಕ ಸರ್ವೋದಯ ಮಂಡಲಿಯ ಆವರಣದಲ್ಲಿ ನಡೆಯುವುದು. ಈ ಸಭೆಯಲ್ಲಿ ಅಖಿಲ ಭಾರತ ಸರ್ವೋದಯ ಮಂಡಲಿ (ಸರ್ವ ಸೇವಾ ಸಂಘ)ದ ಕಾರ್ಯದರ್ಶಿಯವರಲ್ಲಿ ಒಬ್ಬರಾದ ಶ್ರೀ ಚಂದನ್‌ಪಾಲ್‌ರವರು ನಿರೀಕ್ಷಕರಾಗಿ ಭಾಗವಹಿಸುವರಲ್ಲದೆ ಆಂದೋಲನದ ಮುನ್ನಡೆ ಬಗ್ಗೆ ಮಾರ್ಗದರ್ಶನ ಮಾಡುವರು.

ಖಾದಿ ವಿಚಾರ

ಭಾರತದ ಸ್ವಾತಂತ್ರ್ಯಕ್ಕಾಗಿ ಯುದ್ಧ ಮಾಡುವ ಗಾಂಧೀ ಸೇನೆಯ ಅಯುಧವಾಗಿತ್ತು ಚರಕಾ. ಈ ಅಸ್ತ್ರದ ಉಪಯೋಗ ಬೇರೆ ಯಾರನ್ನೇ ಹೊಡೆಯುವುದಕ್ಕಾಗಿರದೆ ತಮ್ಮ ಅಸ್ತಿತ್ವದ ರಕ್ಷಣೆಗಾಗಿ ಇತ್ತು. ವೈರಿಯನ್ನು ಹೊಡಿಯುವುದರ ಬದಲಾಗಿ ಅವನ ಹೃದಯ ಪರಿವರ್ತನೆಗಾಗಿ ಇರುವಂಥ ಮೊಟ್ಟ ಮೊದಲನೆಯ ಶಸ್ತ್ರ ಇದಾಗಿತ್ತು. ಇದು ಆತ್ಮಶಕ್ತಿಯಿಂದ ಸಂಚಾಲಿತವಾಗುವ ಪ್ರಪ್ರಥಮ ವಿಶಿಷ್ಟ ಶಸ್ತ್ರವಾಗಿದೆ. ಸ್ವ ಗುಂಡಿನಿಂದ ನಡೆಯುತ್ತದೆ. ಚರಕಾದಿಂದ ತಯಾರಾಗುವ ನೂಲಿನ ಲಡಿಗಳ ಉಂಡೆ ಗುಂಡುಗಳು. ಅವುಗಳ ಮೂಲಕ ಭಾರತದ ಸ್ವರಾಜ್ಯವನ್ನು ಗೆಲ್ಲಲಾಯಿತು. ಚರಕಾ ಅಹಿಂಸೆಯ ಶಸ್ತ್ರ.

"ಚರಕಾ ನಡೆಸುವೆವು, ನಡೆಸುವೆವು, ಸ್ವರಾಜ್ಯ ಪಡೆಯುವೆವು" ಎಂಬೀ ಗೀತೆ ಸ್ವಾತಂತ್ರ್ಯ ಚಳುವಳಿಯ ದಿನಗಳಲ್ಲಿ ಮನೆಮನೆಗಳಲ್ಲಿ ಹಾಡಲಾಗುತ್ತಿತ್ತು. ಎಲ್ಲಿಯೇ ಚರಕಾ ನಡೆಯುತ್ತಿರಲಿ ಅಲ್ಲಿ ಈ ಹಾಡಿನ ಸ್ವರ ಕೇಳಿ ಬರುತ್ತಿತ್ತು. ಚರಕದಿಂದ ಸ್ವರಾಜ್ಯ ಪ್ರಾಪ್ತವಾಗುತ್ತದೆ ಎಂಬ ಕಲ್ಪನೆ ಮಾಡುವುದು ಈ ದಿನಗಳಲ್ಲಿ ಮತ್ತು ಅಂದಿನ ದಿನಗಳಲ್ಲಿ ಯಾವುದೇ ಭಾರತೀಯನಿಗೆ ಆಶ್ಚರ್ಯಜನಕವಾಗಿತ್ತು. ಆದರೆ ಗಾಂಧೀಜಿಗೆ ಹಾಗೆ ಇರಲಿಲ್ಲ. ಚರಕಾ ನಡೆಸಿ ಸ್ವರಾಜ್ಯ ಪಡೆಯಿರಿ ಎಂಬ ಮಾತನ್ನು ಭರತ ಭೂಮಿಯ ಮೇಲೆ ಕಾಲಿಟ್ಟಾಗಿನಿಂದ ತಮ್ಮ ಅಂತಿಮ ಸಮಯದವರೆಗೆ ಈ ಮಾತನ್ನು ಹೇಳುವಂಥ ಏಕೈಕ ವ್ಯಕ್ತಿ ಗಾಂಧೀಜಿಯವರಾಗಿದ್ದರು. ಈ ಮಾತನ್ನು ತಿಳಿಯುವುದಕ್ಕಾಗಿ ನಾವು ಕೂಡ ಚರಕಾದ ಸಂಪೂರ್ಣ ಜೀವನ ವೃತ್ತಾಂತ ತಿಳಿಯಬೇಕಾಗುವುದು. ಅಲ್ಲದೆ ಗಾಂಧೀಜಿ ಚರಕಾವನ್ನು ಕೇವಲ ಸ್ವರಾಜ್ಯ ಪ್ರಾಪ್ತಿಯ ಆಯುಧವನ್ನಾಗಿ ಮಾಡದೇ ಸ್ವರಾಜ್ಯ ತಾಳಿ ಬಾಳುವ ಸಾಧನವನ್ನು ಕೂಡ ಹೇಗೆ ಮಾಡಿದರು ಎಂಬುದನ್ನು ನಾವು ತಿಳಿಯಬೇಕು.

ಗುಲಾಮಗಿರಿಗೆ ಬಹಳ ದೊಡ್ಡ ಕಾರಣ ನಮ್ಮ ಬಟ್ಟೆಉದ್ಯೋಗದ ಸರ್ವನಾಶವೇ ಎಂದು ಗಾಂಧೀಜಿ ತಿಳಿದಿದ್ದರು. ಇಂಗ್ಲೀಷ್ ಆಡಳಿತ ನಮ್ಮ ನೇಕಾರರ ಬೆರಳುಳಗನ್ನು ಕತ್ತರಿಸಿತು. ಲಾಂಕಾಷೈರ್ ಮತ್ತು ಮ್ಯಾಂಚೆಸ್ಟರ್ ಮಿಲ್ಲುಗಳ ಬಟ್ಟೆಯನ್ನು ಹಿಂದೂಸ್ಥಾನದಲ್ಲಿ ತುಂಬಿದರು. ನಮ್ಮ ಬಡತನ ಮತ್ತು ದಾರಿದ್ರ್ಯದ ಬಹುದೊಡ್ಡ ಕಾರಣ ಇದೇ ಆಗಿದೆ.

ಐತಿಹಾಸಿಕ ರೂಪದಲ್ಲಿ ಖಾದಿಯ ವೈಚಾರಿಕ ಆಧಾರದ ಹಾಸುಹೊಕ್ಕು ಭಾರತದ ಹಳ್ಳಿಗಳಲ್ಲಿ ವ್ಯಾಪಿಸಿರುವ ಅರೆನಿರುದ್ಯೋಗ ಮತ್ತು ನಿರುದ್ಯೋಗದ ಜನರಿಗೆ ಪೂರಕ ಉದ್ಯೋಗದ ರೂಪದಲ್ಲಿ ನೇಯಲ್ಪಟ್ಟಿತು. ಖಾದಿಯ ಈ ಹಾಸುಹೊಕ್ಕು ಮುಖ್ಯತಃ ಗ್ರಾಮೀಣ ಜನರಿಗಾಗಿ ತಯಾರಿಸಿದೆ. ಖಾದಿ ಎಲ್ಲಕ್ಕಿಂತ ಸರಳ ಮತ್ತು ಸಾಧಾರಣ ತಾಂತ್ರಿಕತೆಯ ಮೇಲೆ ಆಧಾರಿತವಾಗಿದೆ. ಇದರ ಉತ್ಪಾದನೆ ಮತ್ತು ಉಪಯೋಗ ಈ ಎರಡರ ಮೂಲ ಸ್ಥಳೀಯವಾಗಿಯೇ ಇರುತ್ತದೆ. ಇದು ಖಾದಿಯ

ಉತ್ಪಾದನೆಗಾಗಿ ಅವಶ್ಯಕ. ಹತ್ತಿ ಮತ್ತು ಅದರಿಂದ ತಯಾರಾದ ಬಟ್ಟೆಗಾಗಿ ಮಾರುಕಟ್ಟೆ ಕೂಡ ಸ್ಥಾನೀಯ ಹಂತದಲ್ಲೇ ದೊರೆಯುತ್ತದೆ. ಆದ್ದರಿಂದ ಖಾದಿಯ ಸಂಬಂಧ ಹಳ್ಳಿಗಳೊಂದಿಗೆ ಹೆಚ್ಚಾಗಿ ಬರುತ್ತದೆ.

ಗಾಂಧೀಜಿ ತಮ್ಮ ಜೀವನದಲ್ಲಿ ಮತ್ತು ತಮ್ಮ ಲೇಖನಗಳಲ್ಲಿ ಮತ್ತು ಭಾಷಣಗಳಲ್ಲಿ ಕೂಡ ಸ್ವದೇಶಿ, ಖಾದಿ, ಗ್ರಾಮೀಣ ಪುನರ್‌ರಚನೆ ಹಾಗೂ ರಚನಾತ್ಮಕ ಕಾರ್ಯಕ್ರಮಗಳ ಬಗ್ಗೆ ಅತಿ ಹೆಚ್ಚು ಒತ್ತುಕೊಡುತ್ತಾರೆ. ಗಾಂಧೀಜಿ ಖಾದಿ ಆಂದೋಲನದ ಮೂಲಕ ಇನ್ನೊಂದು ಮಹತ್ವ ಪೂರ್ಣ ಪ್ರಯೋಗ ಮಾಡುತ್ತಾರೆ. ಅವರು ಇಡೀ ಭಾರತವನ್ನು ಎರಡು ಭಾಗಗಳಲ್ಲಿ ಹಂಚುತ್ತಾರೆ. ಒಂದು ಕಡೆಗೆ ತಮ್ಮ ಸ್ವಾರ್ಥಕ್ಕಾಗಿ, ತಮ್ಮ ವ್ಯಾಪಾರ ಅಥವಾ ನೌಕರಿಗಾಗಿ ಇಂಗ್ಲೀಷರ ಆಳಾಗಿದ್ದಾರೆ ಮತ್ತು ಇಂಗ್ಲೀಷರಿಗೆ ಸಹಾಯಮಾಡುತ್ತಾರೆ; ಇನ್ನೊಂದು ಪಕ್ಕ ಆತ್ಮತ್ಯಾಗ ಮತ್ತು ಪರಮಾರ್ಥಕ್ಕಾಗಿ ಹಾಗೂ ದೇಶ ಪ್ರೇಮದ ಸಂಬಂಧವಾಗಿ ಖಾದಿ ಧರಿಸುತ್ತಾರೆ.

ಮೊದಲನೇ ವರ್ಗದಲ್ಲಿ ಬಹುಶಃ ಎಲ್ಲ ಭ್ರಾಂತರಾದ ಜನರು ಬರುತ್ತಾರೆ. ಎರಡನೇ ವರ್ಗದಲ್ಲಿ ಹಿಂದೂಸ್ಥಾನದ ಹೆಚ್ಚಿನ ಬಡವರು ಬರುತ್ತಾರೆ. ಗಾಂಧೀಜಿಯವರ ಈ ವರ್ಗ ವಿಭಜನೆ ಪೂರ್ಣ ರೂಪದಲ್ಲಿ ಅಹಿಂಸಾತ್ಮಕ. ಈ ವರ್ಗವಿಭಜನೆಯನ್ನು ಬಲಪೂರ್ವಕದಿಂದಲ್ಲ ಹೃದಯ ಪರಿವರ್ತನೆಯ ಮೂಲಕ ಬದಲಾಯಿಸಲು ಬಯಸಿದ್ದರು. ಖಾದಿಯು ವ್ಯಕ್ತಿಗಳನ್ನು ಸೇರಿಸುವುದರ ಸೂಚಕವೆಂದು ಭಾವಿಸುತ್ತಾರೆ. ಖಾದಿಯ ಇನ್ನೊಂದು ಮುಖ ಭಾರತದಂಥ ಬಹುಭಾಷಿ ಮತ್ತು ಸಾಂಸ್ಕೃತಿಕ ಬಾಹುಳ್ಯವುಳ್ಳ ದೇಶವನ್ನು ಒಂದು ಸೂತ್ರದಲ್ಲಿ ಜೋಡಿಸುವಂಥದು.

ಖಾದಿ ಗಾಂಧೀಜಿಯವರಿಗೆ ಒಂದು ಆಹ್ವಾನ (ಚಾಲೆಂಜ್) ಆಗಿತ್ತು. ಇದು ಅವರಲ್ಲಿ ಅಂತಿಮ ಸಮಯದ ವರೆಗೆ ಉಳಿದಿತ್ತು. ಸಾಮ್ರಾಜ್ಯವಾದ ಮತ್ತು ವಸಹಾತುವಾದದ ವಿರುದ್ಧ ಸ್ವಾತಂತ್ರ್ಯತೆಯ ಪ್ರತೀಕವೆಂದು ಅವರು ಭಾವಿಸಿದ್ದರು. ನಿಧಾನವಾಗಿ ಈ ವಿಷಯ ಗಾಂಧೀಜಿಯವರ ನೇತೃತ್ವದಲ್ಲಿ ಮಾಡಲಾದ ಸ್ವಾತಂತ್ರ್ಯ ಹೋರಾಟದ ಸಂಕೇತವಾಗುತ್ತಾಹೋಯಿತು. ಖಾದಿ ಕೇವಲ ಶೋಷಣೆಯ ಮತ್ತು ಮಾರುಕಟ್ಟೆ ಕೇಂದ್ರಿತ ತಾಂತ್ರಿಕತೆಯ ಬಂಡವಾಳಶಾಹಿಯಿಂದ ಮುಕ್ತಿಯ ಪ್ರತೀಕವಾಯಿತು. ಅಲ್ಲದೆ ಸ್ವದೇಶಿ ಹಾಗೂ ನೆರೆಹೊರೆ ಮತ್ತು ಸಾಮಾಜಿಕ ಪ್ರತಿಬದ್ಧತೆಯ ಪ್ರತೀಕವೂ ಆಯಿತು. ಇದು ಬಡವರ ಮತ್ತು ಶ್ರೀಮಂತರ ಮಧ್ಯೆ ಒಂದು ಸಮರಸ ಸಂಬಂಧವನ್ನೂ ಸ್ಥಾಪಿಸುತ್ತದೆ. ಖಾದಿಯ ಮಾಧ್ಯಮದಿಂದಲೇ ರಾಷ್ಟ್ರೀಯ ಆಂದೋಲನದಲ್ಲಿ ಆರ್ಥಿಕ ಸಮಾನತೆ, ಸಾಮಾಜಿಕ ಸಮರಸತೆ ಮತ್ತು ರಾಜನೀತಿಯ ಪ್ರಭುತ್ವದ ಸಿದ್ಧಾಂತಗಳ ಅಂತ್ಯವನ್ನು ಗಾಂಧೀ ನೋಡುತ್ತಾರೆ. ಖಾದಿ ಸ್ವಾಂತಂತ್ರ್ಯದ ವಿಷಯಗಳಿಗೆ ಸ್ವರೂಪ ಕೊಡುತ್ತದೆ ಮತ್ತು ಸ್ವಾತಂತ್ರ್ಯೋತ್ತರ ಸಂಶೋಧನೆಗಳ ಮಂಥನದ ಮೇಲೆ ಅಂಕುಶ ಇಟ್ಟುಕೊಳ್ಳುವುದರ ಸಂದೇಶ ಕೊಡುತ್ತದೆ. ಖಾದಿ ಪ್ರಜಾತಂತ್ರದ ಚರಿತ್ರೆಯಲ್ಲಿ ನೈತಿಕ ಜವಾಬ್ದಾರಿಯನ್ನು ಸೇರಿಸುತ್ತದೆ. ಆದ್ದರಿಂದ ಗಾಂಧೀಜಿ ಇದನ್ನು ಸ್ವಾರಾಜ್ಯದ ಮಾರ್ಗ ಮತ್ತು ಉಪಾಯವೆಂದೆನ್ನುತ್ತಾರೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ
ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀ ಆರ್.ನಾರಾಯಣಮೂರ್ತಿ – ಅರಸೀಕೆರೆ;
ಶ್ರೀ ಎಂ.ದೇವೇಂದ್ರಬಾಬು – ಬೆಂಗಳೂರು;
ಶ್ರೀಮತಿ ಎಂ.ಬಿ.ಬಾಲಾಂಬ – ಮೈಸೂರು;
ಶ್ರೀ ಗುರುರಾಜ ಹಬ್ಬು – ಹುನ್ನೂರು;
ಶ್ರೀಮತಿ ಶಕುಂತಲಮ್ಮ – ನಂಜನಗೂಡು;
ಡಾ॥ ಎಚ್.ಡಿ.ಚೌಡಯ್ಯ – ಹೊಳಲು;

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಡಾ॥ನಿರಂಜನ ವಾನಳ್ಳಿ, ಪ್ರೊ॥ಕೆ.ಎಸ್.ಭಗವಾನ್,
ಶ್ರೀ ಸಂತೋಷ್ ಕುಮಾರ್ – ಮೈಸೂರು;
ಶ್ರೀ ಜನಾರ್ಧನ್ – ಹಾಸನ;
ಡಾ॥ ಎಂ.ಎಸ್.ಸಿದ್ಧಲಿಂಗಪ್ಪನವರ್ – ಬಾಗಲಕೋಟೆ;
ಶ್ರೀ ಎನ್.ಎಸ್.ಮಲಿಕ್ – ತಿ.ನರಸೀಪುರ;
ಶ್ರೀ ಕೆ.ಮಾಯಿಗೌಡ – ಮಂಡ್ಯ;
ಶ್ರೀ ಪಿ.ಗೋವಿಂದಪ್ಪ – ದಾವಣಗೆರೆ; ಡಾ॥ಎಂ.ಎಸ್.ಅಶೋಕ್ – ಕನಕಪುರ;
ಶ್ರೀ ಪುಷ್ಪನಾಥ ಕೃಷ್ಣಮೂರ್ತಿ – ಬೆಂಗಳೂರು;

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು, ಮುಖ್ಯವಾಗಿ ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2012-2014
Regd. no. KAR / KAN / 2000 / 3820

ಶ್ರೀಮತಿ/ ಶ್ರೀ...

....

....

JANAPADA VICHARA
Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya - 571431. Phone : 08236 316344 / 299854
e-mail : janapada@yahoo.com - web : janapada.net
Printed at Sanketh, Mudrana, Melkote.